## ಅಧ್ಯಾಯ 13

# ಕ್ರೈಸ್ತ ಜೀವನ (ಭಾಗ 2)

ಅಧ್ಯಾಯ 13ರಲ್ಲಿ, ಪೌಲನು ಒಬ್ಬ ಕ್ರೈಸ್ತನಾಗಿ ಜೀವಿಸುವದೆಂದರೆ ಏನೆಂಬುದನ್ನು ಕುರಿತ ತನ್ನ ಚರ್ಚೆಯನ್ನು ಮುಂದುವರೆಸುತ್ತಾನೆ. ಒಬ್ಬ ವಿಶ್ವಾಸಿಯು ಕಾನೂನುಗಳಿಗೆ ವಿಧೇಯನಾಗುವ ಮೂಲಕ ಹಾಗೂ ಕಂದಾಯವನ್ನು ಕಟ್ಟುವ ಮೂಲಕ ಸರ್ಕಾರಗಳಿಗೆ ಅಧೀನನಾಗಿರಬೇಕೆಂದು ಆತನು ಒತ್ತಿ ಹೇಳುತ್ತಾನೆ (13:1-7). ಅಲ್ಲದೆ ಒಬ್ಬನು ತನ್ನ ನೆರೆಯವರನ್ನು ಪ್ರೀತಿಸುವದರ ಪ್ರಾಮುಖ್ಯತೆಯನ್ನು ಸಹ ಎತ್ತಿ ತೋರಿಸಿದನು (13:8-10). ಅಧ್ಯಾಯದ ಅಂತ್ಯದಲ್ಲಿ, ಪೌಲನು ಸಮರ್ಪಕವಾದ ಕ್ರೈಸ್ತ ನಡವಳಿಕೆಯ ಸಾರಾಂಶವನ್ನು ಕೊಡುವವನಾಗಿ, ಎಚ್ಚರಿಕೆಯಿಂದಿರುವಂತೆ ಕರೆ ಕೊಡುತ್ತಾನೆ (13:11-14).

## ಸರ್ಕಾರದ ವಿಷಯದಲ್ಲಿನ ಧೋರಣೆ (13:1-7)

**[1]ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ; ಯಾಕೆಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ; ಇರುವ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟವರು. [2]ಆದದರಿಂದ ಅಧಿಕಾರಕ್ಕೆ ಎದುರುಬೀಳುವವನು ದೇವರ ನೇಮಕವನ್ನು ಎದುರಿಸುತ್ತಾನೆ; ಎದುರಿಸುವವರು ಶಿಕ್ಷೆಗೊಳಗಾಗುವರು. [3]ಕೆಟ್ಟಕೆಲಸ ಮಾಡುವವನಿಗೆ ಅಧಿಪತಿಯಿಂದ ಭಯವಿರುವದೇ ಹೊರತು ಒಳ್ಳೇ ಕೆಲಸ ಮಾಡುವವನಿಗೆ ಭಯವೇನೂ ಇಲ್ಲ. ನೀನು ಅಧಿಕಾರಿಗೆ ಭಯಪಡದೆ ಇರಬೇಕೆಂದು ಅಪೇಕ್ಷಿಸುತ್ತೀಯೋ? ಒಳ್ಳೇದನ್ನು ಮಾಡು; ಆಗ ಆ ಅಧಿಕಾರಿಯಿಂದಲೇ ನಿನಗೆ ಹೊಗಳಿಕೆಯುಂಟಾಗುವದು; [4]ಅವನು ನಿನ್ನ ಹಿತಕ್ಕೋಸ್ಕರ ದೇವರ ಸೇವಕನಾಗಿದ್ದಾನಲ್ಲಾ. ಆದರೆ ನೀನು ಕೆಟ್ಟದ್ದನ್ನು ಮಾಡಿದರೆ ಭಯಪಡಬೇಕು; ಅವನು ಸುಮ್ಮನೆ ಕೈಯಲ್ಲಿ ಕತ್ತಿಯನ್ನು ಹಿಡಿದಿಲ್ಲ; ಅವನು ದೇವರ ಸೇವಕನಾಗಿದ್ದು ಕೆಟ್ಟದ್ದನ್ನು ನಡಿಸುವವನಿಗೆ ದಂಡನೆಯನ್ನು ವಿಧಿಸುತ್ತಾನೆ. [5]ಆದಕಾರಣ ದಂಡನೆಯಾದೀತೆಂದು ಮಾತ್ರವಲ್ಲದೆ ಮನಸ್ಸಿಗೆ ನ್ಯಾಯವಾಗಿ ತೋರುವದರಿಂದಲೂ ಅವನಿಗೆ ಅಧೀನವಾಗುವದು ಅವಶ್ಯ. [6]ಈ ಕಾರಣದಿಂದಲೇ ನೀವು ಕಂದಾಯವನ್ನು ಕೂಡ ಕೊಡುತ್ತೀರಿ. ಯಾಕೆಂದರೆ ಕಂದಾಯ ಎತ್ತುವವರು ದೇವರ ಉದ್ಯೋಗಿಗಗಳಾಗಿದ್ದು ಆ ಕೆಲಸದಲ್ಲಿಯೇ ನಿರತರಾಗಿರುತ್ತಾರೆ. [7]ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ; ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ.**

ಯೇಸುವಿನ ಕಾಲದಲ್ಲಿ ವ್ಯಾಪಕವಾಗಿ ಪ್ರಚಲಿತವಿದ್ದ ಒಂದು ಪ್ರಶ್ನೆಯೆಂದರೆ ದೇವಜನರು ನಾಗರಿಕ ಅಧಿಕಾರಿಗಳ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬದೇ. ಒಂದು ಸಂದರ್ಭದಲ್ಲಿ, ಯೇಸುವಿನ ವೈರಿಗಳು ಆತನನ್ನು ಹೀಗೆ ಕೇಳಿದರು, "ಕೈಸರನಿಗೆ ಕಂದಾಯ ಕೊಡುವದು ಸರಿಯೋ ಸರಿಯಲ್ಲವೋ" (ಲೂಕ 20:22). ಯೆಹೂದ್ಯರು ರೋಮನ್ನರನ್ನು ದ್ವೇಷಿಸುತ್ತಿದ್ದರು ಮತ್ತು ಅವರಿಗೆ ಕಂದಾಯ ಕಟ್ಟುವದನ್ನು ತಿರಸ್ಕಾರದಿಂದ ಕಾಣುತ್ತಿದ್ದರು, ಆದರೆ ಅವರ ಪ್ರಶ್ನೆಯು ಯೇಸುವನ್ನು ತಪ್ಪಿನಲ್ಲಿ ಸಿಲುಕಿಸುವ ಬಲೆಯಾಗಿತ್ತು. ಕ್ರಿಸ್ತನು ಅವರಿಗೆ ಸರಿ ಎಂದು ಉತ್ತರಿಸಿದ್ದರೆ ತನ್ನ ಯೆಹೂದ್ಯ ಹಿಂಬಾಲಕರನ್ನು ದೂರ ಮಾಡಿಕೊಳ್ಳುವವನಾಗಿದ್ದನು. ಒಂದು ವೇಳೆ ಆತನು ಸರಿಯಲ್ಲ ಎಂದು ಉತ್ತರಿಸಿದರೆ, ಆತನ ವೈರಿಗಳು ಅವನ ವಿರುದ್ಧವಾಗಿ ರೋಮನ್ ಅಧಿಕಾರಿಗಳಿಗೆ ದೂರು ಸಲ್ಲಿಸಬಹುದಿತ್ತು (ಲೂಕ 20:20). ಯೇಸು ಒಂದು ನಾಣ್ಯವನ್ನು ಮೇಲಕ್ಕೆತ್ತಿ ತೋರಿಸಿ, "ಇದರಲ್ಲಿ ಯಾರ ತಲೆಯೂ ಮುದ್ರೆಯೂ ಅದೆ" ಎಂದು ಕೇಳಿದನು. ಅದಕ್ಕೆ ಅವರು "ಕೈಸರನದು" ಅಂದರು (ಲೂಕ 20:24). ಇದಕ್ಕೆ ಯೇಸು, "ಹಾಗಾದರೆ ಕೈಸರನದನ್ನು ಕೈಸರನಿಗೆ ಕೊಡಿರಿ, ದೇವರದನ್ನು ದೇವರಿಗೆ ಕೊಡಿರಿ" ಎಂದು ಹೇಳಿದನು (ಲೂಕ 22:25).

ಯೆಹೂದ್ಯರು "ಕೈಸರನದನ್ನು ಕೈಸರನಿಗೆ ಕೊಡುವದಕ್ಕೆ" ಇಷ್ಟವಿಲ್ಲದವರಾಗಿದ್ದರು. ರೋಮನ್‌ರು ಅವರಿಗೆ ಮತ್ತು ಅವರ ಧಾರ್ಮಿಕ ನಂಬಿಕೆ ವಿಷಯದಲ್ಲಿ ಅನೇಕ ವಿನಾಯಿತಿಗಳನ್ನು ನೀಡಿದ್ದರು, ಆದರೆ ಹಾಗಿದ್ದರೂ ಅವರ ಹೃದಯಗಳಲ್ಲಿ ಅಸಮಾಧಾನದ ಹೊಗೆಯಾಡುತ್ತಿತ್ತು. ದ್ವೇಷವು ಅಧಿಕವಾಗುತ್ತಲೇ ಸಾಗಿತ್ತು, ಕೊನೆಗೆ ಕ್ರಿ.ಶ. 66ರಲ್ಲಿ ಯೆಹೂದಿ ದಂಗೆಯಲ್ಲಿ ಅಂತ್ಯವಾಗಿತ್ತು, ಅದರ ಫಲಿತವಾಗಿ ಕ್ರಿ.ಶ. 70ರಲ್ಲಿ ಯೆರೂಸಲೇಮ್ ಪಟ್ಟಣದ ನಾಶನವುಂಟಾಯಿತು.

ಪೌಲನು ಸುಮಾರು ಕ್ರಿ.ಶ. 57 ಅಥವಾ 58ರ ವೇಳೆ ರೋಮಾಪುರದಲ್ಲಿನ ಸಭೆಗೆ ಬರೆಯುವಾಗ, ಯೆಹೂದ್ಯರ ಅಸಮಾಧಾನವು ಹಿಂಸಾಚಾರಕ್ಕೆ ತಿರುಗುವ ಪ್ರಕ್ಷುಬ್ಧ ಸ್ಥಿತಿಗೆ ಬಂದಿತ್ತು. ಈ ಮುಂಚೆ ಗಮನಿಸಿದ ಹಾಗೆ, ಆ ಪಟ್ಟಣದಲ್ಲಿನ ಸಭೆಯೊಳಗೆ ಯೆಹೂದ್ಯರು ಇದ್ದರು (2:17)—ರೋಮನ್ ಸರ್ಕಾರದ ವಿರುದ್ಧ ಬದ್ಧದ್ವೇಷ ಹೊಂದಿದ್ದ ಯೆಹೂದ್ಯರೆಂಬುದರಲ್ಲಿ ಸಂಶಯವಿಲ್ಲ. ರೋಮಾಪುರದ ಸಭೆಯಲ್ಲಿದ್ದ ಅನ್ಯಜನರು ಈ ವಿಷಯದಲ್ಲಿ ತಮ್ಮ ಯೆಹೂದಿ ಸಹೋದರರಿಗೆ ಸಹಾನುಭೂತಿ ತೋರಿಸಿರಬಹುದಾಗಿದೆ. ರೋಮಾಪುರವು ಕೆಲವು ವರ್ಷಗಳ ಮುಂಚೆ ಯೆಹೂದ್ಯರು ಮತ್ತು ಕ್ರೈಸ್ತರು ಇಬ್ಬರನ್ನೂ ಅಲ್ಲಿಂದ ಹೊರಗೆ ಓಡಿಸಿತ್ತು.[1]

ಇವುಗಳು ಹಾಗೂ ಇತರ ಕಾರಣಾಂಶಗಳು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಈ ವಾಕ್ಯಭಾಗವನ್ನು ಸೇರ್ಪಡೆಗೊಳಿಸುವಂತೆ ಪೌಲನನ್ನು ಪ್ರೇರಿಸಿರಬಹುದು. ಇನ್ನೊಂದು ಸಂಭಾವ್ಯವಾದ ಕಾರಣಾಂಶವೆಂದರೆ ಕೆಲವು ಕ್ರೈಸ್ತರು ಕ್ರಿಸ್ತನಲ್ಲಿ ಸಿಕ್ಕಿರುವ ಸ್ವಾತಂತ್ರ್ಯದ (ಗಲಾತ್ಯ 5:1) ಅರ್ಥವು ರೋಮನ್ ಕಾನೂನುಗಳು ಸೇರಿದಂತೆ ತಾವು ಯಾವದೇ ವಿಧಿಗಳಿಗೆ ಅಧೀನರಲ್ಲ ಎಂದಾಗಿರುತ್ತದೆಂದು ಭಾವಿಸಿಕೊಂಡಿರಬಹುದಾಗಿದೆ. ಅಲ್ಲದ ಪೌಲನು ಕೆಲವು ವರ್ಷಗಳ ನಂತರದಲ್ಲಷ್ಟೆ ಬರಲಿದ್ದ ನಿರೋ ಚಕ್ರವರ್ತಿಯಿಂದಾಗುವ ಹಿಂಸೆಯನ್ನು, ಮತ್ತು ಅದು ಹೇಗೆ ಸರ್ಕಾರದ ವಿಷಯದಲ್ಲಿನ

ಕ್ರೈಸ್ತರ ಧೋರಣೆಯ ಮೇಲೆ ಪರಿಣಾಮ ಬೀರುವದೆಂಬದನ್ನು ಸಹ ಎದುರು ನೋಡಿರಬಹುದು.

ಆತನ ಉದ್ದೇಶವು ಏನೇ ಆಗಿದ್ದರೂ ಸರಿಯೆ, ಪೌಲನು—ಪವಿತ್ರಾತ್ಮನಿಂದ ಪ್ರೇರಿತನಾಗಿ—ಒಬ್ಬ ಕೃಪೆಯಿಂದ ರಕ್ಷಿಸಲ್ಪಟ್ಟ ವ್ಯಕ್ತಿಯು ಸರ್ಕಾರದ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬದರ ಕುರಿತ ಈ ಬೋಧನೆಯನ್ನು ಸೇರ್ಪಡೆಗೊಳಿಸುವದು ಪ್ರಾಮುಖ್ಯವೆಂದು ಭಾವಿಸಿದನು. ಈ ವಿಷಯವು 1 ತಿಮೊಥೆ 2:1, 2; ತೀತನು 3:1; ಮತ್ತು 1 ಪೇತ್ರ 2:13, 14, 17ರಲ್ಲಿ ಸಹ ಉಲ್ಲೇಖಿಸಲ್ಪಟ್ಟಿದೆ; ಆದರೆ ರೋಮಾ 13:1-7ವು ಈ ವಿಷಯದ ಕುರಿತಾಗಿ ಹೊಸ ಒಡಂಬಡಿಕೆಯಲ್ಲಿಯೇ ಅತ್ಯಂಥ ದೀರ್ಘವಾದ ಚರ್ಚೆಯಾಗಿರುತ್ತದೆ. ಈ ವಾಕ್ಯಭಾಗವು ಸರ್ಕಾರದ ಜೊತೆಗಿನ ಸಂಬಂಧದ ಎಲ್ಲಾ ಕೋನಗಳನ್ನು ಕುರಿತು ಮಾತಾಡುವದಿಲ್ಲ ಮತ್ತು ಕೇಳಲ್ಪಡಬಹುದಾದ ಪ್ರತಿಯೊಂದು ಪ್ರಶ್ನೆಗೂ ಉತ್ತರಿಸುವದಿಲ್ಲ. ಹಾಗಿದ್ದರೂ, ಇದು ನಮ್ಮೆಲ್ಲರ ಜೀವಿತಗಳ ಮೇಲೆ ಪರಿಣಾಮವನ್ನು ಬೀರುವಂಥ ಒಂದು ವಿಷಯದ ಕುರಿತಾಗಿ ಪ್ರಾಮುಖ್ಯವಾದ ಒಂದು ಪ್ರಕಟನೆಯಾಗಿರುತ್ತದೆ.

ನಾವು ಕ್ರೈಸ್ತರಾಗುವಾಗ, ನಾವು ಅಂಧಕಾರದ ದೊರೆತನದಿಂದ ರಕ್ಷಿಸಲ್ಪಟ್ಟು ದೇವರ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಲ್ಪಡುತ್ತೇವೆ (ಕೊಲೊಸ್ಸೆ 1:13). ಹಾಗಿದ್ದರೂ, ನಾವು ಭೂಲೋಕದ ರಾಜ್ಯ/ದೇಶದ ನಾಗರಿಕರಾಗಿಯೇ ಉಳಿಯುತ್ತೇವೆ. ನಾವು ನಾಗರಿಕ ಅಧಿಕಾರಿಗಳೊಂದಿಗೆ ಹೇಗೆ ಸಂಬಂಧವನ್ನಿಟ್ಟುಕೊಳ್ಳಬೇಕು? ನಮ್ಮ ಜವಾಬ್ದಾರಿಗಳೇನು? ನಾವು ಯಾವ ರೀತಿಯ ನಾಗರಿಕರಾಗಿರಬೇಕೆಂದು ದೇವರ ಬಯಸುತ್ತಾನೆ? ಈ ಪ್ರಶ್ನೆಗಳನ್ನು ಕುರಿತಾಗಿಯೇ ಪೌಲನು ರೋಮಾ 13:1-7ರಲ್ಲಿ ಮಾತಾಡುತ್ತಾನೆ.[2]

**ವಚನ 1.** ಈ ವಾಕ್ಯಭಾಗವು ಒಂದು ಕಟ್ಟಳೆಯೊಂದಿಗೆ ಆರಂಭಗೊಳ್ಳುತ್ತದೆ: **ಪ್ರತಿ ಮನುಷ್ಯನು ತನ್ನ ಮೇಲಿನ ಅಧಿಕಾರಿಗಳಿಗೆ ಅಧೀನನಾಗಿರಲಿ.** ನಾವು ಈ ಆಜ್ಞೆ ಹಾಗೂ 13:1-7 ರಲ್ಲಿರುವ ಇತರ ಆಜ್ಞೆಗಳ ಬಗ್ಗೆ ಚರ್ಚೆ ಮಾಡುವ ಮುನ್ನ, ಪೌಲನು *ಏಕೆ* ಈ ಸಾರಾಸಗಟಾದ ಆಜ್ಞೆಯನ್ನು ಕೊಟ್ಟನೆಂಬುದನ್ನು ಸಾಭಿತುಪಡಿಸುವದಕ್ಕೆ ನಾವು ಈ ವಾಕ್ಯಭಾಗದ ಸ್ಥೂಲ ಸಮೀಕ್ಷೆಯನ್ನು ಮಾಡುವ ಅಗತ್ಯವಿರುತ್ತದೆ.

ಪೌಲನು ನಮ್ಮ ವಿಧೇಯತೆಗೆ ತಳಹದಿಯನ್ನು ತಿಳಿಸುವವನಾಗಿ ಆರಂಭಿಸುತ್ತಾನೆ: **ಯಾಕೆಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ; ಇರುವ ಅಧಿಕಾರಿಗಳು ದೇವರಿಂದಲೇ ನೇಮಿಸಲ್ಪಟ್ಟವರು.** 1ನೇ ವಚನದಲ್ಲಿನ "ಅಧಿಕಾರ" ಮತ್ತು "ಅಧಿಕಾರಿಗಳು" ಎಂಬ ಪದಗಳು ἐξουσία (*exousia*) ಎಂಬದರಿಂದ ಬಂದಿರುತ್ತವೆ, ಅದು "ಅಧಿಕಾರವನ್ನು ಬಳಸುವದಕ್ಕೆ ಇರುವ ಹಕ್ಕನ್ನು ಸೂಚಿಸುತ್ತದೆ."[3] ಪೌಲನು ಕೆಲವು ಸಾರಿ ದೇವದೂತ ಸಂಬಂಧಿತ (ಅತಿಮಾನುಷ) ಜೀವಿಗಳನ್ನು ಸೂಚಿಸುವದಕ್ಕೆ *exousia* ಪದವನ್ನು ಬಳಸಿದನು (ಎಫೆಸ 6:12), ಆದ್ದರಿಂದ ಅಪೊಸ್ತಲನು ಅಂಥ ಜೀವಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನೆಂದು ಕೆಲವರು ನಂಬುತ್ತಾರೆ. ಹೇಗೂ, ಬೇರೊಂದೆಡೆಯಲ್ಲಿ *exousia* ಎಂಬದು ಮನುಷ್ಯ ಅಧಿಕಾರಿಗಳನ್ನು ಸೂಚಿಸುತ್ತದೆ (ಲೂಕ 12:11). ರೋಮಾ 13:6, 7ರಲ್ಲಿ, ಪೌಲನು ಅಧಿಕಾರಿಗಳಿಗೆ ಕಂದಾಯ ಕಟ್ಟುವದನ್ನು ಕುರಿತು ಮಾತಾಡುತ್ತಾನೆ, ಆದ್ದರಿಂದ ಆತನು ಖಂಡಿತವಾಗಿಯೂ ಮನುಷ್ಯ ಸರ್ಕಾರವನ್ನು

ಮನಸ್ಸಿನಲ್ಲಿಟ್ಟುಕೊಂಡು ಆ ಮಾತುಗಳನ್ನು ಹೇಳಿರುತ್ತಾನೆ. Phillips ಆವೃತ್ತಿಯಲ್ಲಿ "ನಾಗರಿಕ ಅಧಿಕಾರಿಗಳಿಗೆ" ಎಂದಿದ್ದರೆ, NCV ಯಲ್ಲಿ "ಸರ್ಕಾರದ ಆಡಳಿತಗಾರರು" ಎಂದಿರುತ್ತದೆ.

ನಾಗರಿಕ ಅಧಿಕಾರಿಗಳು "ದೇವರಿಂದ ನೇಮಿಸಲ್ಪಟ್ಟವರು" ಎಂದು ಪೌಲನು ಹೇಳಿದನು. "ನೇಮಿಸಲ್ಪಟ್ಟವರು" ಎಂಬುದು τάσσω (*tassō*) ಎಂಬ ಪದದಿಂದ ಬಂದಿದೆ, ಅದರರ್ಥವು "ಕ್ರಮದಲ್ಲಿ ಇರಿಸು, ವ್ಯವಸ್ಥೆಗೊಳಿಸು," "ನೇಮಿಸು,"[4] ಅಥವಾ "ಪ್ರತಿಷ್ಠಿಸು" ಎಂದಾಗಿರುತ್ತದೆ (ನೋಡಿರಿ KJV). 4ನೇ ವಚನದ ಮೇಲೊಮ್ಮೆ ಕಣ್ಣಾಡಿಸುವದಾದರೆ, ಮನುಷ್ಯ ಸರ್ಕಾರವು ಎರಡು ಸಾರಿ "ದೇವರ ಸೇವಕ" ಎಂದು ಕರೆಯಲ್ಪಟ್ಟಿರುವದನ್ನು ಕಾಣುತ್ತೇವೆ. 6ನೇ ವಚನದಲ್ಲಿ, ಮನುಷ್ಯ ಆಡಳಿತಗಾರರು "ದೇವರ ಉದ್ಯೋಗಿಗಳಾಗಿದ್ದಾರೆ" ಎಂದು ಹೇಳಲ್ಪಟ್ಟಿರುತ್ತದೆ. ಒಬ್ಬನು ರೋಮಾ 13ನೇ ಅಧ್ಯಾಯವನ್ನು ಎಂದಿಗೂ ಅಧ್ಯಯನ ಮಾಡಿಲ್ಲವಾದಲ್ಲಿ, ಈ ಹೇಳಿಕೆಗಳು ಆತನಿಗೆ ವಿಚಿತ್ರವಾಗಿ ಅಥವಾ ಅತಿರೇಕವೆಂಬಂತೆ ತೋರಬಹುದು. ಹೇಗೂ, ಹಿಂದಿನ 9ನೇ ಅಧ್ಯಾಯದಲ್ಲಿ, ಪೌಲನು ಫರೋಹನ ಕುರಿತು ಉಲ್ಲೇಖಿಸಿದಾಗ ಭೂಲೋಕದ ಪ್ರಭುಗಳ ಮೇಲೆ ದೇವರಿಗಿರುವ ನಿಯಂತ್ರಣದ ಬಗ್ಗೆ ಒತ್ತಿ ಹೇಳಿದನು (9:16-18).

ಭೂಲೋಕದ ಪ್ರಭುಗಳು ದೇವರ ಸಾರ್ವತ್ರೀಕವಾದ ಸಾರ್ವಭೌಮತೆಗೆ ಒಳಪಟ್ಟವರೆಂಬುದನ್ನು ಘೋಷಿಸಿದವರಲ್ಲಿ ಪೌಲನು ಬೈಬಲ್‌ನ ಮೊದಲ ಬರಹಗಾರ ಅಥವಾ ಬೋಧಕನಾಗಿರಲಿಲ್ಲ. ಕರ್ತನಿಗೋಸ್ಕರ ಮಾತಾಡುವವನಾಗಿ, ಸೊಲೊಮೋನನು ಹೀಗೆ ಬರೆದನು, "ನನ್ನ ಸಹಾಯದಿಂದ ರಾಜರು ಆಳುವರು, ಅಧಿಪತಿಗಳು ಸಹ ನ್ಯಾಯತೀರಿಸುವರು. ನನ್ನ ಮೂಲಕ ಪ್ರಭುಗಳು . . . ದೊರೆತನ ಮಾಡುವರು" (ಜ್ಞಾನೋಕ್ತಿ 8:15, 16). ಒಬ್ಬ ಅನ್ಯಜನಾಂಗದ ರಾಜನಾಗಿದ್ದ ಪಾರಸಿಯ ಕೋರೆಷನು, ದೇವರ "ಮಂದೆಯನ್ನು ಕಾಯುವವನು" ಮತ್ತು ದೇವರು "ಅಭಿಷೇಕಿಸಿದ"ವನು ಎಂದು ಕರೆಯಲ್ಪಟ್ಟಿದ್ದಾನೆ (ಯೆಶಾಯ 44:28; 45:1). ದಾನಿಯೇಲನು ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನಿಗೆ ದೇವರು "ರಾಜರನ್ನು ತಳ್ಳುತ್ತಾನೆ, ನಿಲ್ಲಿಸುತ್ತಾನೆ" ಮತ್ತು "ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದರ ಆಳಿಕೆಯನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ" ಎಂದು ಹೇಳಿದನು (ದಾನಿ 2:21; 4:17). ಯೇಸು ಪಿಲಾತನ ಮುಂದೆ ನ್ಯಾಯವಿಚಾರಣೆಗೆ ನಿಂತುಕೊಂಡಿರುವ ವೇಳೆ, ಆತನು ರೋಮನ್ ದೇಶಾಧಿಪತಿಗೆ ಹೀಗೆ ಹೇಳಿದನು, "ಮೇಲಣಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ" (ಯೋಹಾನ 19:11).

ನಾವು ಈ ಪ್ರೇರಿತವಾದ ಹೇಳಿಕೆಗಳನ್ನು ಓದುವಾಗ, ಪ್ರಶ್ನೆಗಳು ನಮ್ಮ ಮನಸ್ಸಿನಲ್ಲಿ ಪ್ರವಾಹದಂತೆ ಹರಿಯುತ್ತವೆ. ನಾವು ಗತಕಾಲದ ಹಾಗೂ ಈಗಿರುವ ದುಷ್ಟ ರಾಜರ ಬಗ್ಗೆ ಅಚ್ಚರಿಗೊಳ್ಳುತ್ತೇವೆ: ದೇವರು ಇಂಥವರನ್ನು ಸಹ ಪ್ರತಿಷ್ಠಿಸಿದ್ದನೋ? ಅವರ ಆಳಿಕೆಗಳು ದೇವರಿಂದ ನೇಮಿಸಲ್ಪಟ್ಟವುಗಳಾಗಿದ್ದವೋ? ನಾವು ಕೇಳಲ್ಪಡಬಹುದಾದ ಪ್ರತಿಯೊಂದು ಪ್ರಶ್ನೆಗೂ ಉತ್ತರಿಸುವದಕ್ಕೆ ಸಾಧ್ಯವಿಲ್ಲ, ಆದರೆ ನಾವು ದೇವರ ಮತ್ತು ಮನುಷ್ಯ ಸರ್ಕಾರಗಳ ಕುರಿತಾಗಿ ಕೆಲವು ಅವಲೋಕನಗಳನ್ನು ಮಾಡಬಹುದಾಗಿದೆ.

*ದೇವರು ಮಾನವರ ಹಿತಕ್ಕೋಸ್ಕರ ನಾಗರಿಕ ಅಧಿಕಾರಿಗಳನ್ನು ಪ್ರತಿಷ್ಠಾಪಿಸಿದನು.*

ದೇವರು ಕುಟುಂಬವನ್ನು ಪ್ರತಿಷ್ಠಾಪಿಸಿದನು (ಆದಿ 2-4) ಮತ್ತು ಸಭೆಯನ್ನು ಪ್ರತಿಷ್ಠಾಪಿಸಿದನು (ಅಪೊಸ್ತಲರ ಕೃತ್ಯಗಳು 2), ಮತ್ತು ಆತನು ಮನುಷ್ಯ ಸರ್ಕಾರದ ಜನಕ ಸಹ ಆಗಿದ್ದಾನೆಂಬುದನ್ನು ರೋಮಾ 13ನೇ ಅಧ್ಯಾಯವು ಸ್ಪಷ್ಟಗೊಳಿಸುತ್ತದೆ.[5] ಜನರಿಗೆ ನಾಗರಿಕ ಅಧಿಕಾರದ *ಅಗತ್ಯ* ಇರುವದರಿಂದ ಆತನು ಅದನ್ನು ಪ್ರತಿಷ್ಠಾಪಿಸಿದನು. James Burton Coffmanನ ಅಭಿಪ್ರಾಯವು ಹೀಗಿತ್ತು:

> ವ್ಯವಸ್ಥಾಪಿಸಲ್ಪಟ್ಟ ಅಧಿಕಾರ . . . ಇಲ್ಲದಿದ್ದರೆ, ಇಡೀ ಲೋಕವು ಅಸ್ತವ್ಯಸ್ತತೆ ಹಾಗೂ ವಿನಾಶದಲ್ಲಿ ಮುಳುಗಿ ಹೋಗುವದು. ಲಂಗುಲಗಾಮಿಲ್ಲದ ಮಾನವ ಸ್ವಭಾವವು ಒಂದು ಕ್ರೂರ ಮೃಗದಂತಿದ್ದು ಒಂದು ಸಂಸ್ಥಾನದಿಂದ ವಿಧಿಸಲ್ಪಟ್ಟಿರುವ ನಿರ್ಬಂಧದ ಅಡಿಯಲ್ಲಿ ಸದಾ ಪ್ರಕ್ಷುಬ್ಧವಾಗಿ ಮತ್ತು ವ್ಯಾಕುಲದಿಂದಿರುತ್ತದೆ, ಸ್ವಲ್ಪ ಅವಕಾಶ ಸಿಕ್ಕರೂ ಸಾಕು ತನ್ನ ಸರಪಣಿಗಳನ್ನು ಮುರಿದುಕೊಂಡು ಲೋಕವನ್ನು ರಕ್ತದಿಂದಲೂ ಭಯೋತ್ಪಾದನೆ ಯಿಂದಲೂ ಧ್ವಂಸಮಾಡುವದಕ್ಕೆ ಸದಾ ಸಿದ್ಧವಾಗಿರುತ್ತದೆ.[6]

Jack P. Lewis ಅದಕ್ಕೆ ಜೊತೆಗೂಡಿಸುತ್ತಾನೆ: "ನಿರಂಕುಶ ಆಡಳಿತಕ್ಕಿಂತಲೂ ಯಾವದೇ ರೂಪದ ಸರ್ಕಾರವು ಮೇಲಾಗಿರುತ್ತದೆ."[7] ಯಾವ ರೀತಿಯ ಸರ್ಕಾರವು ಉತ್ತಮವಾದದ್ದು ಮತ್ತು ಎಷ್ಟು ಹೆಚ್ಚಿನ ಅಥವಾ ಎಷ್ಟು ಕಡಿಮೆಯಾದ ಸರ್ಕಾರ ಅಗತ್ಯವಾದದ್ದೆಂಬ ವಿಷಯದಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯವಿರಬಹುದು, ಆದರೆ ಇದರ ಬಗ್ಗೆಯಂತೂ ನಮ್ಮಲ್ಲಿ ಒಮ್ಮತವಿರಬಲ್ಲದು: ನಾಗರಿಕ ಅಧಿಕಾರದ ಮೂಲತತ್ವವು ದೇವರಿಂದ-ನೇಮಿತವಾದದ್ದು.

4ನೇ ವಚನವು ಮಾನವ ಸರ್ಕಾರ "ನಿನ್ನ ಹಿತಕ್ಕೋಸ್ಕರ ದೇವರ ಸೇವಕ" ಆಗಿರುವದಾಗಿ ಹೇಳುತ್ತದೆ. Phillips ಇದನ್ನು ಹೀಗೆ ಭಾವಾನುವಾದ ಮಾಡುತ್ತದೆ, "ಅಧಿಕಾರಿಯು ನಿನ್ನ ರಕ್ಷಣೆಗೋಸ್ಕರ ದೇವರ ಸೇವಕನಾಗಿದ್ದಾನೆ." ರಕ್ಷಣೆಯನ್ನು ಒದಗಿಸುವದರ ಜೊತೆಗೆ, ನಮ್ಮ ಪಟ್ಟಣ, ರಾಜ್ಯ, ಮತ್ತು ದೇಶದ ಸರ್ಕಾರಗಳು ನಮಗೆ ನಮ್ಮ ಸ್ವಂತ ಶಕ್ತಿಯಿಂದ ದೊರಕಿಸಿಕೊಳ್ಳಲು ಕಷ್ಟಕರ ಅಥವಾ ಅಸಾಧ್ಯವಾಗಿರುವಂಥ ಸೇವೆಗಳಿಂದ (ಸವಲತ್ತು) ನಮಗೆ ಕ್ಷೇಮಾಭಿವೃದ್ಧಿಯನ್ನು ಒದಗಿಸುತ್ತವೆ.

*ಪ್ರತಿಯೊಂದು ನಾಗರಿಕ ಅಧಿಕಾರವು ಇರುವಂತೆ ದೇವರೇ ಅನುಮತಿಸುವದರಿಂದ ಅದು ಅಸ್ತಿತ್ವದಲ್ಲಿರುತ್ತದೆ.* ಭೂಲೋಕದ ಯಾವದೇ ನಿರ್ದಿಷ್ಟವಾದ ಪ್ರಭುತ್ವಕ್ಕೆ ದೇವರು ಜವಾಬ್ದಾರನು ಎಂದು ನಾವು ಹೇಳಲಾಗದು, ಆದರೆ ದೇವರು ಅದನ್ನು ಅನುಮತಿಸಿರುವ ದರಿಂದಲೇ ಅದು ಇರುತ್ತದೆ ಎಂದು ನಾವು ಹೇಳಬಹುದಾಗಿದೆ. ಗತಕಾಲದ ದಿನಗಳಲ್ಲಿ, ತಮ್ಮ ಪ್ರಜೆಗಳು ಪ್ರಶ್ನಾತೀತವಾಗಿ ತಮಗೆ ವಿಧೇಯವಾಗುವಂತೆ ಒತ್ತಾಯ ಪಡಿಸುವದಕ್ಕೆ ನಿರಂಕುಶಾಧಿಕಾರಿಗಳು ರೋಮಾ 13:1-7ನ್ನು ಉಪಯೋಗಿಸಿದರು. ಅವರು ತಮ್ಮ ಪ್ರಭುತ್ವಗಳು ದೇವರಿಂದ ನೇಮಿಸಲ್ಪಟ್ಟಿರುತ್ತವೆಂದು ಹೇಳಿಕೊಂಡರು. ಅವರು ರೋಮಾ 13ನೇ ಅಧ್ಯಾಯದಿಂದ ಉಲ್ಲೇಖಿಸಿ ಸಭೆಯ ನಾಯಕರು ಸಾರ್ವಜನಿಕವಾಗಿ ಅವರ ಭಕ್ತಿಹೀನ ಪ್ರಣಾಳಿಕೆಗೆ ಅನುಮೋದನೆಯನ್ನು ಘೋಷಿಸಬೇಕೆಂದು ಹೇಳುತ್ತಿದ್ದರು. ದೇವರು ಮನುಷ್ಯ ಸರ್ಕಾರದ ಮೂಲತತ್ವವನ್ನು ಸ್ಥಾಪಿಸಿದನು ಎಂದು ಪೌಲನು ಕಲಿಸಿದನು, ಆದರೆ ದೇವರು ವೈಯಕ್ತಿಕವಾಗಿ ಪ್ರತಿಯೊಂದು ಸರ್ಕಾರದ ನಾಯಕನನ್ನು ಅಧಿಕಾರ ಸ್ಥಾನದಲ್ಲಿ ಪ್ರತಿಷ್ಠಾಪಿಸುತ್ತಾನೆಂಬದಾಗಿ ಆತನು ಕಲಿಸ*ಲಿಲ್ಲ*.

ದೇವರು ಮನುಷ್ಯ ಸರ್ಕಾರವನ್ನು ವ್ಯವಸ್ಥೆಗೊಳಿಸಿರುತ್ತಾನೆಂಬ ವಾಸ್ತವಾಂಶವು ಆತನು ಪ್ರತಿಯೊಂದು ಸರ್ಕಾರವನ್ನು ಅನುಮೋದಿಸುತ್ತಾನೆ ಎಂಬರ್ಥವನ್ನು ಕೊಡುತ್ತದೋ? ದೇವರು ಕುಟುಂಬವನ್ನು ಏರ್ಪಡಿಸಿದನು. ಹಾಗಾದರೆ ಆತನು ಪ್ರತಿಯೊಂದು ಕುಟುಂಬವನ್ನು ಅನುಮೋದಿಸುತ್ತಾನೋ? ಇಲ್ಲ. ದೇವರು ಸಭೆಯನ್ನು ಏರ್ಪಡಿಸಿದನು. ಅದರರ್ಥವು ಆತನು ಎಲ್ಲಾ ಸಭೆಗಳನ್ನು ಅನುಮೋದಿಸುತ್ತಾನೆಂದು ಅರ್ಥವೋ? ಇಲ್ಲ (ನೋಡಿರಿ ಪ್ರಕಟನೆ 2:4, 14, 20). ಅದೇ ರೀತಿಯಲ್ಲಿಯೇ, ಪ್ರತಿಯೊಂದು ಸರ್ಕಾರಗಳ ಮೇಲೆಯೂ ದೇವರ ಅನುಮೋದನೆಯ ಮುದ್ರೆಯಿರುವದಿಲ್ಲ.

ಯಾವದೇ ಸರ್ಕಾರದ ನಾಯಕನು ಕಣ್ಣುಮುಚ್ಚಿಕೊಂಡು ವಿಧೇಯವಾಗುವಂತೆ ಒತ್ತಾಯಿಸುವದಕ್ಕೆ ರೋಮಾ 13:1-7ನ್ನು ಉಪಯೋಗಿಸುವದಾದರೆ ಈ ವಾಕ್ಯಭಾಗವು ಇಬ್ಬಾಯಿ ಕತ್ತಿಯಾಗಿದೆಯೆಂಬುದನ್ನು ಮನದಟ್ಟು ಮಾಡಿಕೊಳ್ಳುವ ಅಗತ್ಯವಿರುತ್ತದೆ. ಅದು ಆತನಿಗೆ ನೀನೊಬ್ಬ "ದೇವರ ಉದ್ಯೋಗಿಯಾಗಿ [ಸೇವಕ] ನಾಗಿ" ಇರಬೇಕಾಗಿರುತ್ತದೆ ಎಂದು ಸಹ ಹೇಳುತ್ತದೆ. ಸೇವಕತನವು, ವಿಶೇಷವಾಗಿ ದೇವರಿಗೆ ಸೇವಕರಾಗಿರುವದು ಜವಾಬ್ದಾರಿಗಳನ್ನು ಹೊಂದಿರುತ್ತದೆ![8] ದಾನಿ 2:21 ದೇವರು "ರಾಜರನ್ನು ತಳ್ಳುತ್ತಾನೆ" ಎಂದು ಹೇಳುವದು ಮಾತ್ರವಲ್ಲದೆ ದೇವರು ರಾಜರನ್ನು "ನಿಲ್ಲಿಸುತ್ತಾನೆ" ಎಂದು ಸಹ ಹೇಳುತ್ತದೆ. ಅದು ಯಾವದೇ ರಾಜನಿಗೆ ಅಮಲಿನಿಂದ ಎಚ್ಚೆತ್ತುಕೊಳ್ಳುವಂತೆ ಮಾಡುವ ಒಂದು ವಿಚಾರವಾಗಿರತಕ್ಕದ್ದು.

*ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕೆ ದುಷ್ಟ ಸರ್ಕಾರಗಳನ್ನು ಸಹ ಉಪಯೋಗಿಸಬಲ್ಲನು.* ಒಂದು ಸಂದರ್ಭದಲ್ಲಿ, ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಭಕ್ತಿಹೀನವಾದ ದೇಶಗಳನ್ನು ಉಪಯೋಗಿಸಿರುತ್ತಾನೆ. ದೇವರು ಇಸ್ರಾಯೇಲನ್ನು ದಂಡಿಸುವದಕ್ಕೆ ಅಶ್ಶೂರವು ಆತನ ಕೋಪವೆಂಬ ಕೋಲು ಆಗಿತ್ತು (ಯೆಶಾಯ 10:5). ದೇವರು ಯೆಹೂದವನ್ನು ದಂಡಿಸುವದಕ್ಕೆ ಬಾಬೆಲನ್ನು ಉಪಯೋಗಿಸಿದನು (ಯೆರೆ 25:9-11). ಒಂದು ಧನಾತ್ಮಕವಾದ ವಿಚಾರದಲ್ಲಿ ನೋಡುವದಾದರೆ, ದೇವರು ಯೆಹೂದವನ್ನು ಸೆರೆವಾಸದಿಂದ ಬಿಡುಗಡೆಗೊಳಿಸುವದಕ್ಕೆ ಪಾರಸಿಯನಾದ ಕೋರೆಷನನ್ನು ಉಪಯೋಗಿಸಿದನು (ಯೆಶಾಯ 44:28-45:7; ಎಜ್ರನು 1:1-14). ದೇವರು ದುಷ್ಟ ನಾಗರಿಕ ಅಧಿಕಾರಿಗಳನ್ನು ಉಪಯೋಗಿಸ*ಬಲ್ಲನು* ಮತ್ತು ಕೆಲವು ಸಾರಿ ಉಪಯೋಗಿ*ಸುತ್ತಾನೆಂ*ಬುದಾಗಿ ಈ ಉದಾಹರಣೆಗಳು ತೋರಿಸಿ ಕೊಡುತ್ತವೆ. ಅದನ್ನು ದಾಟಿ, ನಾವು ಮುಂದಕ್ಕೆ ಹೋಗಲಾಗದು. ನಮಗೆ ತಿಳಿದಿರುವದೆಲ್ಲಾ ಇಷ್ಟೇ, ಒಂದು ವಿಧದಲ್ಲಿ, ದೇವರು ಲೋಕದ ಸರ್ಕಾರಗಳನ್ನು ನಿಯಂತ್ರನದಲ್ಲಿ ಇಟ್ಟುಕೊಂಡಿರುತ್ತಾನೆ. ಅಂತ್ಯದಲ್ಲಿ, ಆತನ ಉದ್ದೇಶಗಳು ನೆರವೇರುವವು.

ಪೌಲನ ಉಪದೇಶದ ಸತ್ತ್ವದಿಂದ ಪಲಾಯನ ಮಾಡುವದಕ್ಕೆ, ಜನರು ಕೆಲವು ಸಾರಿ "ಒಳ್ಳೇ ಸರ್ಕಾರಗಳು" ಹಾಗೂ "ಕೆಟ್ಟ ಸರ್ಕಾರಗಳು" ಎಂದು ವ್ಯತ್ಯಾಸವನ್ನು ಉಂಟುಮಾಡುವದಕ್ಕೆ ಪ್ರಯತ್ನಿಸುತ್ತಾರೆ. ಅವರು ಹೇಳುವದೇನೆಂದರೆ, "ನಾವು ಕೇವಲ ಒಳ್ಳೇ ಸರ್ಕಾರಗಳಿಗೆ ಮಾತ್ರವೇ ಅಧೀನರಾಗಿ ಇರಬೇಕೆಂದು ಹೇಳಲ್ಪಟ್ಟಿದ್ದೇವೆ" ಎಂಬದೆ. ನಾವು ರೋಮಾ 13:1-7ನ್ನು ಅಧ್ಯಯನ ಮಾಡುವಾಗ, ಪೌಲನ ದಿನಗಳಲ್ಲಿದ್ದ ಆಡಳಿತ ಶಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು: ರೋಮನ್ ಸಾಮ್ರಾಜ್ಯ. ರೋಮನ್

ಸಾಮ್ರಾಜ್ಯವು "ಒಂದು ಒಳ್ಳೇ ಸರ್ಕಾರ" ಆಗಿತ್ತೋ? ಅದರ ಕೆಲವು ಅಂಶಗಳು ಒಳ್ಳೇಯವುಗಳಾಗಿದ್ದವು;[9] ಆದರೆ ರೋಮನ್ ಸರ್ಕಾರವು ದುರಾಚಾರ ಮತ್ತು ಭ್ರಷ್ಟಾಚಾರದಿಂದ ತುಂಬಿದ್ದಾಗಿತ್ತೆಂದು ಇತಿಹಾಸವು ಹೇಳುತ್ತದೆ.[10] ಪೌಲನು ಬರೆಯುವ ವೇಳೆಯಲ್ಲಿದ್ದ ಚಕ್ರವರ್ತಿಯು ನಿರೋ ಆಗಿದ್ದನು, ಆತನನ್ನು R. C. Bell "ಮಾತೃಹತ್ಯೆ" ಮಾಡಿದ ಅಪರಾಧ ಹೊಂದಿದ್ದ "ಮನುಷ್ಯತ್ವವಿಲ್ಲದ ರಾಕ್ಷಸ" ಎಂದು ಚಿತ್ರಿಸುತ್ತಾನೆ.[11] ಹೇಗಿದ್ದರೂ, ಪೌಲನು ಆಗಲೂ ಹೀಗೆ ಹೇಳುತ್ತಾನೆ, "ಪ್ರತಿ ಮನುಷ್ಯನು ತನ್ನ ಮೇಲಿನ ಅಧಿಕಾರಿಗಳಿಗೆ ಅಧೀನನಾಗಿರಲಿ; ಯಾಕೆಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ" (13:1).

ಪೌಲನು ರೋಮಾ 13ನ್ನು ಬರೆಯುವಾಗ ಪೂರ್ವಕಲ್ಪಿತವಾಗಿಯೇ ರೋಮನ್ ಸರ್ಕಾರದ ಪರವಾಗಿದ್ದನು ಯಾಕೆಂದರೆ ಆತನು ಒಬ್ಬ ರೋಮನ್ ಪೌರತ್ವವುಳ್ಳವನಾಗಿದ್ದನು ಮತ್ತು ರೋಮನ್ ಅಧಿಕಾರಿಗಳಿಂದ ನ್ಯಾಯವಾಗಿ ನಡೆಸಿಕೊಳ್ಳಲ್ಪಡುತ್ತಿದ್ದನು—ಆದರೆ ಅನಂತರದಲ್ಲಿ ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಂಡನು—ಎಂಬದಾಗಿ ಅಭಿಪ್ರಾಯ ಪಡಲಾಗುತ್ತದೆ. ಅಂಥ ಅಭಿಪ್ರಾಯವು ದೈವಿಕ ಪ್ರೇರಣೆಯನ್ನು ನಿರಾಕರಿಸುವಿಕೆ ಮತ್ತು ವಾಸ್ತವಾಂಶಗಳ ಮಿಥ್ಯ ನಿರೂಪಣೆ ಆಗುತ್ತದೆ. ರೋಮಾಪುರದವರಿಗೆ ಪತ್ರಿಕೆಯನ್ನು ಬರೆಯುವ ಮುಂಚೆ, ಪೌಲನು ರೋಮನ್ ಅಧಿಕಾರಿಗಳಿಂದ ಅನ್ಯಾಯವಾಗಿ ಹೊಡೆಯಲ್ಪಟ್ಟು ಸೆರೆಮನೆಗೆ ಹಾಕಲ್ಪಟ್ಟಿದ್ದನು ಎಂಬ ವಾಸ್ತವಾಂಶವನ್ನು ಅವರು ನಿರ್ಲಕ್ಷಿಸುವವರಾಗಿರುತ್ತಾರೆ (ಅಪೊಸ್ತಲರ ಕೃತ್ಯಗಳು 16:22-24). ವಾಸ್ತವಿಕದಲ್ಲಿ, ಮೂರು ಸಾರಿ ಆತನನ್ನು ಚಡಿಗಳಿಂದ ಹೊಡೆಯಲಾಗಿತ್ತು (2 ಕೊರಿಂಥ 11:25), ಅದು ರೋಮನ್‌ರ ದಂಡನೆಯ ವಿಧವಾಗಿತ್ತು. ಅಷ್ಟುಮಾತ್ರವಲ್ಲದೆ, ಈ ಅಭಿಪ್ರಾಯವು ನಿರ್ಲಕ್ಷಿಸುವ ವಾಸ್ತವಾಂಶವೇನೆಂದರೆ, ಪೌಲನು ನಾಲ್ಕು ವರ್ಷಗಳ ಕಾಲ ಅನ್ಯಾಯವಾಗಿ ರೋಮನ್ ಅಧಿಕಾರಿಗಳಿಂದ ಸೆರೆಮನೆ ವಾಸವನ್ನು ಅನುಭವಿಸಿದ ಬಳಿಕವೂ,[12] ಆತನು ಈ ಕೆಳಗಿನಂಥ ವಾಕ್ಯಭಾಗಗಳನ್ನು ಬರೆದನು:

> . . . ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾಸ್ತುತಿಗಳನ್ನೂ ಮಾಡಬೇಕೆಂದು ಬೋಧಿಸುತ್ತೇನೆ. ನಮಗೆ ಸುಖಸಮಾಧಾನಗಳು ಉಂಟಾಗಿ ನಾವು ಪೂರ್ಣಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾಪನೆಗಳನ್ನು ಮಾಡಬೇಕು (1 ತಿಮೊಥೆ 2:1, 2).

> ಅಧಿಪತಿಗಳಿಗೂ ಅಧಿಕಾರಿಗಳಿಗೂ ಅಧೀನರಾಗಿ ವಿಧೇಯರಾಗಿರಬೇಕೆಂತಲೂ . . . ಅವರಿಗೆ ಜ್ಞಾಪಕಕೊಡು (ತೀತನಿಗೆ 3:1).

ಹಿಂಸೆಯ ಮಧ್ಯದಲ್ಲಿಯೂ, ಅಪೊಸ್ತಲನಾದ ಪೇತ್ರನು ಹೀಗೆ ಬರೆದನು,

> ಮನುಷ್ಯರು ನೇಮಿಸಿರುವ ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ. ಅರಸನು ಸರ್ವಾಧಿಕಾರಿ ಎಂತಲೂ ಬೇರೆ ಅಧಿಪತಿಗಳು ಕೆಟ್ಟ ನಡತೆಯುಳ್ಳವರನ್ನು ದಂಡಿಸುವದಕ್ಕೂ ಒಳ್ಳೇ ನಡತೆಯುಳ್ಳವರನ್ನು

> ಪ್ರೋತ್ಸಾಹಪಡಿಸುವದಕ್ಕು ಅರಸನಿಂದ ಕಳುಹಿಸಲ್ಪಟ್ಟವರೆಂತಲೂ ತಿಳಿದು ಅವರಿಗೆ ಅಧೀನರಾಗಿರಿ. ತಿಳಿಯದೆ ಮಾತಾಡುವ ಮೂಢಜನರ ಬಾಯನ್ನು ನೀವು ಒಳ್ಳೇ ನಡತೆಯಿಂದ ಕಟ್ಟಬೇಕೆಂಬದೇ ದೇವರ ಚಿತ್ತ. ಸ್ವತಂತ್ರರಂತೆ ನಡೆದುಕೊಳ್ಳಿರಿ; ಆದರೆ ಕೆಟ್ಟತನವನ್ನು ಮರೆಮಾಜುವದಕ್ಕೆ ನಿಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸಬೇಡಿರಿ; ನೀವು ದೇವರ ದಾಸರಾಗಿದ್ದೀರಲ್ಲಾ. ಎಲ್ಲರನ್ನೂ ಸನ್ಮಾನಿಸಿರಿ. ಸಹೋದರರನ್ನು ಪ್ರೀತಿಸಿರಿ. ದೇವರಿಗೆ ಭಯಪಡಿರಿ. ಅರಸನನ್ನು ಸನ್ಮಾನಿಸಿರಿ (1 ಪೇತ್ರ 2:13-17).

ಹೊಸ ಒಡಂಬಡಿಕೆಯ ನಿರಂತರವಾದ ಸಂದೇಶವೇನೆಂದರೆ ರಾಜಕೀಯ ಅಧಿಕಾರವನ್ನು ಯಾರೇ ವಹಿಸಿಕೊಂಡಿದ್ದರೂ ಸರಿಯೇ, ಒಬ್ಬ ಕ್ರೈಸ್ತನು "ಒಬ್ಬ ಉತ್ತಮ ನಾಗರಿಕನಾಗಿರುವದಕ್ಕೆ ಶ್ರಮಿಸಬೇಕು" ಎಂಬದೆ (13:1; MSG).

ಮನುಷ್ಯ ಸರ್ಕಾರವನ್ನು ದೇವರೇ ಪ್ರತಿಷ್ಠಾಪಿಸಿದನೆಂಬುದನ್ನು ಮನಸ್ಸಿನಲ್ಲಿಟ್ಟು ಕೊಂಡು, ನಾವು ವಾಕ್ಯಭಾಗವನ್ನು ಪರಾಮರ್ಶಿಸೋಣ. 1ನೇ ವಚನವು "ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ" ಎಂದು ಆರಂಭಗೊಳ್ಳುತ್ತದೆ. "ಮನುಷ್ಯನು" ಎಂಬುದು ψυχή (*psuchē*) ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದು "ಪ್ರಾಣ" ಎಂಬುದಕ್ಕಾಗಿರುವ ಪದವಾಗಿದೆ. 1 ಪೇತ್ರ 3:20ರಲ್ಲಿ ಇರುವ ಹಾಗೆಯೇ, ಇಲ್ಲಿ *psuchē* ಎಂಬುದು ಜನರನ್ನು ಸೂಚಿಸುವದಾಗಿದೆ. "ಅಧೀನನಾಗಿರಲಿ" ಎಂಬುದು ὑποτάσσω (*hupotassō*) ಎಂಬ ಪದದಿಂದ ಬಂದದ್ದು, ಅದು ὑπό (*hupo*, "ಅಡಿಯಲ್ಲಿ") ಮತ್ತು τάσσω (*tassō*, "ವ್ಯವಸ್ಥೆಗೊಳಿಸು") ಎಂಬ ಪದಗಳನ್ನು ಒಂದುಗೂಡಿಸುತ್ತದೆ. ಅದು ಪ್ರಾಥಮಿಕವಾಗಿ "ಒಂದು ಸೈನ್ಯಕ್ಕೆ ಸಂಬಂಧಿಸಿದ ಪದ" ಆಗಿತ್ತು, ಅದರರ್ಥವು "ಸಾಲಿನಡಿಯಲ್ಲಿ ಇರು."[13] *Hupotassō* ಎಂಬುದಕ್ಕೆ ಕೆಲವು ತರ್ಜುಮೆಗಳು "ವಿಧೇಯವಾಗು" ಎಂಬ ಭಾವಾನುವಾದವನ್ನು ನೀಡಿರುತ್ತವೆ. ಆ ಪದವು ವಿಧೇಯತೆಯನ್ನು ಒಳಗೊಂಡಿರುತ್ತದೆ, ಆದರೆ ವಿಸ್ತಾರವಾದ ಅರ್ಥವು ಅದಕ್ಕಿರುತ್ತದೆ. ಅದು "ಸಹಕಾರ, ನಿಷ್ಠೆ, ಮತ್ತು ವಿಧೇಯವಾಗುವ ಮನಸ್ಸು" ಎಂಬರ್ಥಗಳನ್ನೊಳ ಗೊಂಡಿರುತ್ತದೆ.[14]

ಅಧೀನತೆಯನ್ನು "ಮೇಲಿರುವ ಅಧಿಕಾರಿಗಳಿಗೆ" ಸಲ್ಲಿಸತಕ್ಕದ್ದು. "ಮೇಲಿರುವ" ಎಂಬುದು ὑπερέχω (*huperechō*) ಎಂಬ ಪದದಿಂದ ಬಂದದ್ದಾಗಿದ್ದು, ಅದು ὑπέρ (*huper*, "ಮೇಲೆ") ಮತ್ತು ἔχω (*echō*, "ಹೊಂದಿರು") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. ಆ ಪದದ ಅಕ್ಷರಶಃ ಅರ್ಥವು "ಮತ್ತೊಬ್ಬನಿಗಿಂತ ಎತ್ತರವಾದ ಸ್ಥಾನವೊಂದರಲ್ಲಿರು" ಅಥವಾ "ಮೇಲ್ಮಟ್ಟಕ್ಕೇರು" ಎಂದಾಗಿರುತ್ತದೆ. ಸಾಂಕೇತಿಕವಾಗಿ, ಅದರರ್ಥವು "ನಿಯಂತ್ರನದ ಸ್ಥಾನದಲ್ಲಿರುವದು," ಅಥವಾ "(ಮೇಲೆ) ಅಧಿಕಾರದಲ್ಲಿರು" ಎಂದಾಗಿರುತ್ತದೆ.[15]

ಜನರು "ಒಳ್ಳೇ ಸರ್ಕಾರಗಳು" ಹಾಗೂ "ಕೆಟ್ಟ ಸರ್ಕಾರಗಳು" ಎಂದು ವ್ಯತ್ಯಾಸ ಮಾಡುವದಕ್ಕೆ ಪ್ರಯತ್ನಿಸುವ ಪ್ರಕಾರವೇ, ಅವರು "ಒಳ್ಳೇ ಕಾನೂನುಗಳು" ಮತ್ತು "ಕೆಟ್ಟ ಕಾನೂನುಗಳು" ಎಂದು ವ್ಯತ್ಯಾಸವನ್ನು ಮಾಡುವದಕ್ಕೆ ಯತ್ನಿಸುತ್ತಾರೆ. "ಕೆಟ್ಟ ಕಾನೂನುಗಳು" ಎಂದು ಹೇಳುವಾಗ, ಅವರು ಸಾಮಾನ್ಯವಾಗಿ ತಮಗೆ ಯಾವ ಅರ್ಥವನ್ನೂ ಕೊಡದ ಅಥವಾ ಅವರಿಗೆ ಅನಾನುಕೂಲತೆ, ಬಹುಶಃ ಕಷ್ಟವನ್ನು ಸಹ ಉಂಟು ಮಾಡುವ ಕಟ್ಟಳೆಗಳನ್ನು ಸೂಚಿಸುವವರಾಗಿದ್ದಾರೆ. "ನಾವು ಕೆಟ್ಟ ಕಾನೂನುಗಳಿಗೆ

ವಿಧೇಯವಾಗುವಂತೆ ದೇವರು ನಿರೀಕ್ಷಿಸುವದಿಲ್ಲ" ಎಂದು ಅವರು ವಾದಿಸುತ್ತಾರೆ. ಕಾಲದಿಂದ ಕಾಲಕ್ಕೆ, ನಮ್ಮಲ್ಲಿ ಬಹುತೇಕರು ಸರ್ಕಾರದ ನಿಯಮಗಳಿಂದ ಮತ್ತು ಕಟ್ಟಳೆಗಳಿಂದ ಕೆರಳಿ ಹೋಗುತ್ತೇವೆ. ನಾವು ರಸ್ತೆ ನಿಯಮಗಳಿಂದ, ಕಟ್ಟಡದ ನಿಯಮಾವಳಿಗಳಿಂದ, ಕಂದಾಯದ ವಿಧಿಗಳಿಂದ, ಮತ್ತು ಸರ್ಕಾರಿ ಕೆಲಸಗಳು ಆಮೆಗತಿಯಲ್ಲಿ ಸಾಗುವ ಪ್ರಕ್ರಿಯೆಯಿಂದ ಬೇಸರಗೊಂಡು ಸೋತು ಹೋದವರಂತೆ ಭಾವಿಸಿಕೊಳ್ಳುತ್ತೇವೆ. ರಾಜಕೀಯ ಅಧಿಕಾರಶಾಹಿಯಿಂದ ಕತ್ತುಹಿಸುಕಲ್ಪಟ್ಟ ಅನುಭವವನ್ನು ಹೊಂದಿರುತ್ತೇವೆ. ಹೇಗಿದ್ದರೂ, ನಮಗೆ "ಒಳ್ಳೇ ಕಾನೂನುಗಳು" ಮತ್ತು "ಕೆಟ್ಟ ಕಾನೂನುಗಳು" ಎಂದು ತಾರತಮ್ಯ ಮಾಡುವ ಅಧಿಕಾರವು ನಮಗೆ ಕೊಡಲ್ಪಟ್ಟಿರುವದಿಲ್ಲ. ಅದೊಂದು ಕಾನೂನು ಆಗಿದ್ದರೆ, ಅದಕ್ಕೆ ನಾವು ವಿಧೇಯರಾಗಲೇಬೇಕು.

ಮೂಲಭೂತ ತತ್ವಕ್ಕೆ ಯಾವದಾದರೂ ಹೊರತಾದದ್ದು ಇದೆಯೋ? ನಮಗೆ ತಿಳಿದಿರುವಂತೆ ಒಂದೇ ಒಂದು ಇದ್ದು ಅದು ಪೇತ್ರನಿಂದ ವ್ಯಕ್ತಪಡಿಸಿದ್ದಾಗಿದೆ. ಆತನನ್ನು ಮತ್ತು ಯೋಹಾನನನ್ನು ಯೆಹೂದಿ ಅಧಿಕಾರಿಗಳು ಕರೆಯಿಸಿ ಯೇಸುವಿನ ಹೆಸರನ್ನು ಎತ್ತಿ ಬೋಧಿಸಬಾರದು ಅಥವಾ ಉಪದೇಶಿಸಬಾರದು ಎಂದು ಅಪ್ಪಣೆ ಕೊಟ್ಟರು (ಅಪೊಸ್ತಲರ ಕೃತ್ಯಗಳು 4:18), ಆ ಆಜ್ಞೆಯನ್ನು ಅವರು ನಿರ್ಲಕ್ಷಿಸಿದರು. ಅವರನ್ನು ಪುನಃ ಹಿರೀಸಭೆಯ ಮುಂದೆ ಎಳೆದುಕೊಂಡು ಬಂದಾಗ, ಪೇತ್ರನು ಈ ಅತ್ಯುತ್ಕೃಷ್ಟವಾದ ಮಾತುಗಳನ್ನು ನುಡಿದನು: "ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲಾ" (ಅಪೊಸ್ತಲರ ಕೃತ್ಯಗಳು 5:29). ನಾವು ಈ ಮೂಲತತ್ವವನ್ನು ನಮ್ಮ ಮುಂದಿರುವ ಈಗಿನ ಚರ್ಚೆಯ ವಿಷಯಕ್ಕೆ ಹೇಗೆ ಅನ್ವಯಿಸುವದು? ದೇಶದ ಕಾನೂನುಗಳು ದೇವರ ವಿಧಿಗಳಿಗೆ ತದ್ವಿರುದ್ಧ*ವಾಗಿರದ ಹೊರತು* ನಾವು ಅವುಗಳಿಗೆ ವಿಧೇಯರಾಗತಕ್ಕದ್ದು. ಹಲವಾರು ಉದಾಹರಣೆಗಳು ನೆನಪಿಗೆ ಬರುತ್ತವೆ. ಹಳೆಯ ಒಡಂಬಡಿಕೆಯಲ್ಲಿ, ಶದ್ರಕ್, ಮೇಶಕ್, ಅಬೇದ್.ನೆಗೋ ಬಂಗಾರದ ಪ್ರತಿಮೆಯ ಮುಂದೆ ಅಡ್ಡ ಬೀಳುವದಕ್ಕೆ ನಿರಾಕರಿಸಿದರು (ದಾನಿ 3), ಮತ್ತು ಅರಸನು ತನ್ನನ್ನಲ್ಲದೆ ಬೇರೆ ಯಾವ ದೇವರನ್ನು ಪ್ರಾರ್ಥಿಸಬಾರದೆಂದು ನೀಡಿದ ಕಟ್ಟಪ್ಪಣೆಯನ್ನು ದಾನಿಯೇಲನು ನಿರ್ಲಕ್ಷಿಸಿದನು (ದಾನಿ 6). ಹೊಸ ಒಡಂಬಡಿಕೆಯ ಸಮಯಗಳಲ್ಲಿ, ಅಂತಿಪನು ತನ್ನ ಕ್ರಿಸ್ತನಂಬಿಕೆಯನ್ನು ಅಲ್ಲಗಳೆಯಲು ನಿರಾಕರಿಸಿದ್ದರಿಂದ ರಕ್ತಸಾಕ್ಷಿಯಾಗಿ ಕೊಲ್ಲಲ್ಪಟ್ಟನು (ಪ್ರಕಟನೆ 2:13).

ಈ ವಿಚಾರವನ್ನು ಮುಕ್ತಾಯಕ್ಕೆ ತರುವ ಮುನ್ನ ನಾವು ಎರಡು ಸತ್ಯಗಳ ಕುರಿತು ಒತ್ತಿ ಹೇಳಬೇಕಾಗಿರುತ್ತದೆ. ಮೊದಲನೆಯದಾಗಿ, ನಾವು "ಮನುಷ್ಯರಿಗಿಂತಲೂ ದೇವರಿಗೆ ವಿಧೇಯರಾಗುವಾಗ," ನಾವು ಅದರ ಪರಿಣಾಮಗಳನ್ನು ಅನುಭವಿಸುವದಕ್ಕೆ ಸಿದ್ಧರಾಗಿರಬೇಕು. ಅಪೊಸ್ತಲರಿಗೆ ಏನು ಸಂಭವಿಸಿತೆಂಬುದನ್ನು ಪರಿಗಣಿಸಿರಿ; ಶದ್ರಕ್, ಮೇಶಕ್, ಅಬೇದ್.ನೆಗೋ; ದಾನಿಯೇಲ; ಮತ್ತು ಅಂತಿಪನು ಇವರಿಗೆಲ್ಲಾ ಏನು ಸಂಭವಿಸಿತೆಂಬುದನ್ನು ಪರಿಗಣಿಸಿರಿ. ಎರಡನೆಯದಾಗಿ, ನಾವು ಮನಸ್ಸಾಕ್ಷಿಯಂತೆ ಕಟ್ಟೆಚ್ಚರದಿಂದ ಆಜ್ಞೆಗಳನ್ನು ಪಾಲಿಸುವವರಾಗಿರುವ ಹೊರತು, ನಾವು "ಮನುಷ್ಯರಿಗಿಂತಲೂ ದೇವರಿಗೆ ವಿಧೇಯರಾಗುವಾಗ," ನಮ್ಮ ಕ್ರಿಯೆಗಳನ್ನು ಮನಸ್ಸಾಕ್ಷಿಯಂತೆ ನಡೆದುಕೊಳ್ಳುವಿಕೆಯಂತೆ ಕಾಣಲ್ಪಡುವದಿಲ್ಲ ಆದರೆ ನಾವು ಗಲಭೆಕೋರರೆಂಬದಕ್ಕೆ ಇನ್ನಷ್ಟು ಪುರಾವೆಯಂತಾಗುತ್ತದಷ್ಟೆ. ಪೇತ್ರನು ಹೀಗೆ

ಬರೆಯುತ್ತಾನೆ, "ನಿಮ್ಮಲ್ಲಿ ಯಾವನಾದರೂ ಕೊಲೆಗಾರನು ಕಳ್ಳನು ದುಷ್ಟನು ಪರಕಾರ್ಯಗಳಲ್ಲಿ ತಲೆಹಾಕುವವನು ಆಗಿದ್ದು ಶಿಕ್ಷಾಪಾತ್ರನಾಗಬಾರದು. ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1 ಪೇತ್ರ 4:15, 16).

ಹಾಗಾದರೆ, ಇದೇ, ಮಾನದಂಡ: ಎಲ್ಲಿಯ ವರೆಗೆ ಸ್ಥಳಿಯ, ರಾಜ್ಯದ, ಅಥವಾ ದೇಶದ ಕಾನೂನು ದೇವರ ವಿಧಿಗಳನ್ನು ಉಲ್ಲಂಘಿಸುವದಿಲ್ಲವೋ, ಅದಕ್ಕೆ ವಿಧೇಯರಾಗಿರಿ. ಅದು ತರ್ಕಕ್ಕೆ ವಿರುದ್ಧವಾದದ್ದೋ? ಅದಕ್ಕೆ ವಿಧೇಯರಾಗಿರಿ. ಅದು ಅಸಮಂಜಸವಾದದ್ದೋ? ಅದಕ್ಕೆ ವಿಧೇಯರಾಗಿರಿ. ಅದು ಸಮಾಜದ ಒಂದು ವರ್ಗಕ್ಕೆ ಪಕ್ಷಪಾತವನ್ನು ತೋರಿಸುತ್ತದೋ? ಅದಕ್ಕೆ ವಿಧೇಯರಾಗಿರಿ. Jimmy Allen ಈ ನಿಲುವು ಹೊಂದಿದ್ದನು: "ನಾವು ಪ್ರಾಥಮಿಕವಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು 'ಈ ಕಾನೂನು ಕೆಟ್ಟದ್ದೋ?' ಎಂಬುದಲ್ಲ, ಆದರೆ, ಆ ಕಾನೂನಿಗೆ ವಿಧೇಯವಾಗುವದರಿಂದ ದೇವರ ವಾಕ್ಯವನ್ನು ಉಲ್ಲಂಘಿಸಿದಂತಾಗುವದೋ ಎಂಬುದನ್ನು ಪರಿಗಣಿಸುವದೇ (ಅಪೊಸ್ತಲರ ಕೃತ್ಯಗಳು 4:19). ತಾವು ಕೆಟ್ಟದ್ದನ್ನು ಮಾಡುವಂತೆ ನಡಿಸಲ್ಪಡುವ ಹೊರತು, ಶಿಷ್ಯರು ತಮಗೆ ಸಂಕಷ್ಟಗಳನ್ನು ತರುವಂಥ ಕಾನೂನಿಗೆ ವಿಧೇಯರಾಗುವರು."[16]

**ವಚನ 2.** ನಾವು *ಏಕೆ* "ಮೇಲಿರುವ ಅಧಿಕಾರಿಗಳಿಗೆ ಅಧೀನರಾಗಿರಬೇಕು"? ನಾವು ಮೊದಲನೆಯ ಕಾರಣವನ್ನು ಈಗಾಗಲೆ ನೋಡಿದ್ದೇವೆ: ಮನುಷ್ಯ ಸರ್ಕಾರವನ್ನು ಪ್ರತಿಷ್ಠಾಪಿಸಿರುವವನು ದೇವರೇ ಆಗಿದ್ದಾನೆ. ಈ ಅಂಶವು ಈ ವಚನದ ಪ್ರಾರಂಭದಲ್ಲಿ ಮತ್ತಷ್ಟು ಒತ್ತಿ ಹೇಳಲ್ಪಟ್ಟಿದೆ: **ಆದದರಿಂದ ಅಧಿಕಾರಕ್ಕೆ ಎದುರುಬೀಳುವವನು ದೇವರ ನೇಮಕವನ್ನು ಎದುರಿಸುತ್ತಾನೆ.** SEB ತರ್ಜುಮೆಯಲ್ಲಿ, "ಆದ್ದರಿಂದ, ಯಾವನಾದರೂ ಅಧಿಕಾರದ ವಿರುದ್ಧ ಬಂಡಾಯವೇಳುವದಾದರೆ, ಆತನು ದೇವರಿಂದ ನೇಮಿಸಲ್ಪಟ್ಟದ್ದರ ವಿರುದ್ಧವಾಗಿದ್ದಾನೆ" ಎಂದಿರುತ್ತದೆ. ಮಾನವ ಸರ್ಕಾರಕ್ಕೆ ಅಧೀನವಾಗಿರುವದಕ್ಕೆ ವಿಫಲವಾಗುವದೆಂದರೆ, ಅದು ತತ್ಪರಿಣಾಮವಾಗಿ, ಸ್ವತಃ ದೇವರನ್ನೇ ಎದುರಿಸಿದ ಹಾಗಾಗುವದು.

"ಎದುರಿಸುತ್ತಾನೆ" ಎಂಬುದು ἀντιτάσσω (*antitassō*) ಎಂಬ ಪದದಿಂದ ಬಂದದ್ದು, ಅದೊಂದು ಸಂಯೋಜನ ಪದವಾಗಿದ್ದು ἀντί (*anti*, "ವಿರುದ್ಧ") ಮತ್ತು τάσσω (*tassō*, "ವ್ಯವಸ್ಥೆಗೊಳಿಸು") ಎಂಬ ಪದಗಳನ್ನು ಒಂದುಗೂಡಿಸುತ್ತದೆ. ಪೌಲನು 13ನೇ ಅಧ್ಯಾಯದಲ್ಲಿ *tassō* ("ವ್ಯವಸ್ಥೆಗೊಳಿಸು") ಉಪಯೋಗಿಸಿದ್ದು ಇದು ಮೂರನೆಯ ಸಾರಿ ಆಗಿರುತ್ತಾನೆ. ದೇವರು ಮನುಷ್ಯ ಸರ್ಕಾರವನ್ನು "ವ್ಯವಸ್ಥೆಗೊಳಿಸಿದನು." ನಾಗರಿಕ ಅದಿಕಾರಗಳ ವಿಷಯವಾಗಿ, ನಾವು *tassō* (ದೇವರ "ವ್ಯವಸ್ಥೆ"ಯ) ಅಡಿಯಲ್ಲಿರತಕ್ಕದ್ದು. ನಾವು ಹಾಗೆ ಮಾಡುವದಕ್ಕೆ ನಿರಾಕರಿಸುವದಾದರೆ, ಅದರರ್ಥವು *tassō* (ದೇವರ "ವ್ಯವಸ್ಥೆ"ಯ) ವಿರುದ್ಧವಾಗಿ ನಾವಿದ್ದೇವೆ ಎಂದಾಗುತ್ತದೆ. Coffman ಅಭಿಪ್ರಾಯ ಪಡುವದೇನೆಂದರೆ,

> ಕ್ರಿಸ್ತನು ಎಂದಿಗೂ ಒಂದು ಗಲಭೆಯ ಮುಂದಾಳತ್ವ ವಹಿಸಿಕೊಳ್ಳಲಿಲ್ಲ, ಗೋಪ್ಯದಲ್ಲಿ ಕೂಟವನ್ನು ಕೂಡಿಸಲಿಲ್ಲ, ಸರ್ಕಾರವನ್ನು ಟೀಕಿಸಲಿಲ್ಲ, ಅಥವಾ ರೋಮನ್ನರ ವಿರುದ್ಧವಿದ್ದ ಯೆಹೂದ್ಯರೊಂದಿಗೆ ಭಾಗ ಹೊಂದಿರಲಿಲ್ಲ. . . . ಆತನ ಪವಿತ್ರ ಉಪದೇಶಗಳು ಇತಿಹಾಸದ ಘಟನಾವಳಿಗಳ ಮೇಲೆ ಅತ್ಯಂಥ ಆಗಾಧವಾದ ಪರಿಣಾಮಗಳನ್ನು

ಬೀರಿರುತ್ತವೆಂಬುದೇನೋ ನಿಜವಾದರೂ, ಆತನ ಪ್ರಭಾವವು ಒಂದು ಸ್ಫೋಟಕ ಸಿಡಿಮದ್ದಿನಂತಲ್ಲ ಆದರೆ ಯಾವಾಗಲೂ ಒಂದು ಹುಳಿಹಿಟ್ಟಿನಂತೆಯೇ ಕೆಲಸ ಮಾಡಿರುತ್ತದೆ.[17]

ನಾಗರಿಕ ಅಧಿಕಾರಕ್ಕೆ ಅಧೀನರಾಗುವದಕ್ಕಾಗಿ ಪೌಲನು ಎರಡನೆಯ ಕಾರಣವನ್ನು ಕೊಡುತ್ತಾನೆ: **ಎದುರಿಸುವವರು ಶಿಕ್ಷೆಗೊಳಗಾಗುವರು.** "ಶಿಕ್ಷೆಗೊಳಗಾಗುವರು" ಎಂಬುದು "ನ್ಯಾಯತೀರ್ಪು" ಎಂಬ ವಾಡಿಕೆಯ ಪದದಿಂದ ಬಂದದ್ದಾಗಿದೆ: κρίμα (*krima*). KJVಯಲ್ಲಿರುವ ಪ್ರಕಾರದ "ನಾಶನಕ್ಕೆ ಗುರಿಯಾಗುವರು" ಎಂಬ ಪದವು ವಿಪರೀತವೆಂದು ತೋರುತ್ತದೆ. ಬಹುಶಃ NEBಯು ಗುರಿಗೆ ಹತ್ತಿರವಾಗಿರುತ್ತದೆ: "ಎದುರಿಸುವವರು ತಮಗೆ ಸಿಕ್ಕುವ *ಶಿಕ್ಷೆಗೆ* ತಮ್ಮನ್ನೇ ಕಾರಣಕರ್ತರನ್ನಾಗಿಸಿಕೊಳ್ಳುವರು" (ಒತ್ತಿ ಹೇಳಿದ್ದು ನನ್ನದು). ಪೌಲನು ಪ್ರಾಥಮಿಕವಾಗಿ ನಾಗರಿಕ ಅಧಿಕಾರಿಗಳಿಂದ ಸಿಕ್ಕುವ ಶಿಕ್ಷೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನೆಂಬುದನ್ನು ನಂತರದ ವಚನವು ತೋರ್ಪಡಿಸುತ್ತದೆ, ಆದರೆ ಅವಿಧೇಯರಾಗುವವರು ದೇವರಿಂದ ನೇಮಿಸಲ್ಪಟ್ಟ ಸಂಸ್ಥೆಯ ವಿರುದ್ಧ ಎದುರು ಬೀಳುವದರಿಂದ ಖಂಡಿತವಾಗಿಯೂ ದೇವರಿಂದ ಸಿಕ್ಕುವ ಶಿಕ್ಷೆಯನ್ನು ಅದರಿಂದ ಹೊರಗಿಡುವದಕ್ಕೆ ಸಾಧ್ಯವಿಲ್ಲ.

**ವಚನ 3.** ಪೌಲನು ತನ್ನ ವಿಚಾರಧಾರೆಯನ್ನು ಮುಂದುವರೆಸುತ್ತಾನೆ: **ಕೆಟ್ಟಕೆಲಸ ಮಾಡುವವನಿಗೆ ಅಧಿಪತಿಯಿಂದ ಭಯವಿರುವದೇ ಹೊರತು ಒಳ್ಳೇಕೆಲಸ ಮಾಡುವವನಿಗೆ ಭಯವೇನೂ** [φόβος, *phobos*] **ಇಲ್ಲ.[18] ನೀನು ಅಧಿಕಾರಿಗೆ ಭಯಪಡದೆ** [φοβέω, *phobeō*] **ಇರಬೇಕೆಂದು ಅಪೇಕ್ಷಿಸುತ್ತೀಯೋ? ಒಳ್ಳೇದನ್ನು ಮಾಡು; ಆಗ ಆ ಅಧಿಕಾರಿಯಿಂದಲೇ ನಿನಗೆ ಹೊಗಳಿಕೆಯುಂಟಾಗುವದು.** Phillips ತರ್ಜುಮೆಯಲ್ಲಿ "ನೀನು ಈ ಕಳವಳದಿಂದ ದೂರವಿರಬೇಕೆಂದರೆ ಕಾನೂನು ಪಾಲಿಸುವವನಾಗಿ ಜೀವಿಸುವವನಾಗಿರಷ್ಟೆ" ಎಂದಿರುತ್ತದೆ. ಸಾಮಾನ್ಯವಾಗಿ, ಕೆಟ್ಟ ಸರ್ಕಾರಗಳು ಸಹ ಒಳ್ಳೇ ನಾಗರಿಕರನ್ನು ಇಷ್ಟಪಡುತ್ತವೆ.

**ವಚನ 4.** ಪೌಲನು ಸೇರಿಸಿ ಹೇಳಿದ್ದೇನೆಂದರೆ **ಅವನು** [ನಾಗರಿಕ ಅಧಿಕಾರ] **ನಿನ್ನ ಹಿತಕ್ಕೋಸ್ಕರ ದೇವರ ಸೇವಕನಾಗಿದ್ದಾನಲ್ಲಾ.** "ಸೇವಕ" ಎಂಬುದು διάκονος (*diakonos*) ಎಂಬದರಿಂದ ಬಂದದ್ದು, ಅದು "ದಾಸನು" ಎಂಬದಕ್ಕಾಗಿರುವ ಪದವಾಗಿದೆ, ಅದೇ ಪದವನ್ನು ಸಭಾಹಿರಿಯರು, ಸುವಾರ್ತಿಕರು, ಮತ್ತು ಸಭೆಯಲ್ಲಿನ ಇತರೆ ಕೆಲಸಗಾರರನ್ನು ಸೂಚಿಸುವದಕ್ಕೆ ಸಹ ಉಪಯೋಗಿಸಲಾಗಿರುತ್ತದೆ (12:7; 1 ತಿಮೊಥೆ 3:10, 13; 4:6). ಖಂಡಿತವಾಗಿಯೂ, ನಾಗರಿಕ ಸರ್ಕಾರವು ಈಗಷ್ಟೆ ಉಲ್ಲೇಖಿಸಿದ ಇತರರ ರೀತಿಯಲ್ಲಿಯೇ "ದೇವರ ಸೇವಕ" ಆಗಿರುವದಿಲ್ಲ. ಸಭೆಯಲ್ಲಿನ ಹಿರಿಯರು ಹಾಗೂ ಇತರ ಕೆಲಸಗಾರರು ತಾವು ದೇವರ ಸೇವೆಯನ್ನು ಮಾಡುತ್ತಿದ್ದೇವೆಂಬ ಪ್ರಜ್ಞೆಯನ್ನು ಹೊಂದಿರುತ್ತಾರೆ, ಮತ್ತು ಅವರು ಮನಃಪೂರ್ವಕವಾಗಿ ಮಾಡುವರು. ಅದಕ್ಕೆ ತದ್ವಿರುದ್ಧವಾಗಿ, ನಾಗರಿಕ ಅಧಿಕಾರಿಗಳು ಸಾಮಾನ್ಯವಾಗಿ ತಾವು ದೇವರ ಸೇವಕರಾಗಿದ್ದಾರೆಂಬ ಪ್ರಜ್ಞೆಯಿಲ್ಲದವರಾಗಿರುತ್ತಾರೆ ಮತ್ತು ಆ ಸಾಮರ್ಥ್ಯದಲ್ಲಿ ಕೆಲಸಮಾಡುವದಕ್ಕೆ ಯಾವದೆ ತೀರ್ಮಾನವನ್ನು ಮಾಡಿಕೊಂಡಿರದವರಾಗಿರುತ್ತಾರೆ. ಹೇಗಿದ್ದರೂ—ಮನಃಪೂರ್ವಕವಾಗಿಯೋ ಅಥವಾ ಮನಃಪೂರ್ವಕವಾ ಗಿಲ್ಲದೆಯೋ,

ತಿಳಿದೋ ಅಥವಾ ತಿಳಯದೆಯೋ–ಪ್ರೇರಿತ ಅಪೊಸ್ತಲನ ಪ್ರಕಾರವಾಗಿ, ಮನುಷ್ಯ ಸರ್ಕಾರವು ಕರ್ತನ ಸೇವಕ, "ನಿನ್ನ ಹಿತಕ್ಕೋಸ್ಕರ ದೇವರ ಸೇವಕ" ಆಗಿರುತ್ತಾನೆ.

ಬಹಳಷ್ಟು ಆಕ್ಷೇಪಣೆಗಳನ್ನು ಎತ್ತಬಹುದಾಗಿದೆ: "ನಾಗರಿಕ ಅಧಿಕಾರಿಗಳು ಎಷ್ಟೊಂದು ಅನ್ಯಾಯಸ್ಥರಾಗಿರಬಲ್ಲರು, ಎಷ್ಟೊಂದು ಸಾರಿ ಅವರು ಹಿತಕ್ಕೋಸ್ಕರವಾಗಿರದೆ ಕೆಟ್ಟದ್ದನ್ನು ಮಾಡುವದಕ್ಕಾಗಿಯೇ ಸೇವಕರಾಗಿರುತ್ತಾರೆಂಬುದು ಪೌಲನಿಗೆ ಗೊತ್ತಿರುವದಿಲ್ಲವೋ?" ನ್ಯಾಯವನ್ನು ಒದಗಿಸಬೇಕಾದವರು ಅನೇಕ ಸಾರಿ ಏಕರೀತಿಯಾಗಿರಲಾರರು ಮತ್ತು ಇರುವದಿಲ್ಲ ಎಂಬುದು ಪೌಲನಿಗೆ ಸೂಕ್ಷ್ಮವಾಗಿ ಗೊತ್ತಿತ್ತೆಂಬುದನ್ನು ನಾವು ಖಚಿತವಾಗಿ ತಿಳಿದುಕೊಳ್ಳಬಹುದು.

ಕೊರಿಂಥದಲ್ಲಿ, ಆತನು ರೋಮನ್ ಅಧಿಪತಿಯಾಗಿದ್ದ ಗಲ್ಲಿಯೋನನಿಂದ ನ್ಯಾಯವಾಗಿ ನಡಿಸಿಕೊಳ್ಳಲ್ಪಟ್ಟನು (ಅಪೊಸ್ತಲರ ಕೃತ್ಯಗಳು 18:12-16); ಆದರೆ ಅದಕ್ಕೆ ಮುಂಚೆ, ಫಿಲಿಪ್ಪಿ ಪಟ್ಟಣದಲ್ಲಿ ಆತನನ್ನು ರೋಮನ್ ಅಧಿಕಾರಿಗಳು ಅನ್ಯಾಯವಾಗಿ ನಡಿಸಿಕೊಂಡಿದ್ದರು (ಅಪೊಸ್ತಲರ ಕೃತ್ಯಗಳು 16:19-39).

ಅನಂತರ, ಯೆರೂಸಲೇಮಿನಲ್ಲಿ, ಆತನನ್ನು ಹತ್ಯೆಮಾಡಬೇಕೆಂದಿದ್ದ ಯೆಹೂದ್ಯರ ದೊಂಬಿಯ ಗುಂಪಿನಿಂದ ರೋಮನ್ ಅಧಿಕಾರಿಗಳೇ ಕಾಪಾಡಿದ್ದರು (ಅಪೊಸ್ತಲರ ಕೃತ್ಯಗಳು 21:27-36); ಆದರೆ ಆತನು ಭ್ರಷ್ಟ ರೋಮನ್ ಅಧಿಕಾರಿಗಳಿಗೆ ಲಂಚವನ್ನು ಕೊಡದವನಾಗಿದ್ದರಿಂದ ಕೈಸರೆಯಲ್ಲಿನ ರೋಮನ್ ಸೆರೆಮನೆಯಲ್ಲಿ ಎರಡು ವರ್ಷಗಳನ್ನು ಕಳೆಯಬೇಕಾಯಿತು (ಅಪೊಸ್ತಲರ ಕೃತ್ಯಗಳು 24:26, 27).

ಅನಂತರದಲ್ಲಿ ಇನ್ನೂ ಒಮ್ಮೆ, ಆತನು ಚಕ್ರವರ್ತಿಗೆ ಮೇಲ್ಮನವಿಯನ್ನು ಸಲ್ಲಿಸಿದ ವೇಳೆ ಯೆಹೂದ್ಯರ ಕೈಗಳಿಂದ ಕೊಲ್ಲಲ್ಪಡುವದರಿಂದ ಆತನ ರೋಮನ್ ಪೌರತ್ವವು ಆತನನ್ನು ಕಾಪಾಡಿತ್ತು (25:9-12). ಹೇಗೂ, ಪ್ರೇರಿತವಲ್ಲದ ಪರಂಪರೆಯು ಹೇಳುವ ಪ್ರಕಾರ, ಕಾಲ ಕ್ರಮೇಣದಲ್ಲಿ ಒಂದು ರೋಮನ್ ಖಡ್ಗವು ಆತನ ಶಿರಚ್ಛೇಧವನ್ನು ಮಾಡುವ ಮೂಲಕ ಆತನ ಜೀವನವು ಅಂತ್ಯಗೊಂಡಿತು.[19] (ಆತನು ರಕ್ತಸಾಕ್ಷಿಯಾಗಿ ಸಾಯುವನೆಂಬುದನ್ನು 2 ತಿಮೊಥೆ 4:6-8ರಲ್ಲಿ ನಿರೀಕ್ಷಿಸಲಾಗಿತ್ತು.)

ತನಗಾದ ಕೆಲವು ಅನುಭವಗಳ ನಂತರ, ಪೌಲನು ನಾಗರಿಕ ಅಧಿಕಾರಿಯು ". . . ಹಿತಕ್ಕೋಸ್ಕರ ದೇವರ ಸೇವಕನಾಗಿದ್ದಾನಲ್ಲಾ" ಎಂದು ಹೇಳಿದ್ದು ನಿಜವೇ. ಯಾಕೆಂದರೆ ಇದು *ಸರ್ವಸಾಧಾರಣವಾಗಿ* ಸತ್ಯವಾಗಿರುತ್ತದೆ. ಸಾಮಾನ್ಯವಾಗಿರುವಂತೆ, ಸರ್ಕಾರಗಳು ಒಳ್ಳೇ ನಡತೆಗೆ ಪ್ರತಿಫಲವನ್ನು ಮತ್ತು ಕೆಟ್ಟ ನಡೆತೆಗೆ ಶಿಕ್ಷೆಯನ್ನು ಒದಗಿಸುತ್ತವೆ; ಹಾಗೆ ಮಾಡುವದು ಆ ಸರ್ಕಾರಗಳ ಪ್ರಯೋಜನಾರ್ಥವಾಗಿ ಇರುತ್ತದೆ. ಬೇರೆ ಇನ್ನಾವದೇ ಆಧಾರದಲ್ಲಿ ಕೆಲಸ ಮಾಡುವದಕ್ಕೆ ಪ್ರಯತ್ನಿಸುವ ಒಂದು ಸರ್ಕಾರವು ದೀರ್ಘಕಾಲ ಉಳಿಯುವದಿಲ್ಲ.

4ನೇ ವಚನದ ಮಿಕ್ಕ ಭಾಗವೆಲ್ಲಾ ಹೀಗೆ ಹೇಳುತ್ತದೆ, **ಆದರೆ ನೀನು ಕೆಟ್ಟದ್ದನ್ನು ಮಾಡಿದರೆ ಭಯಪಡಬೇಕು; ಅವನು** [ನಾಗರಿಕ ಸರ್ಕಾರ] **ಸುಮ್ಮನೆ ಕೈಯಲ್ಲಿ ಕತ್ತಿಯನ್ನು ಹಿಡಿದಿಲ್ಲ; ಅವನು ದೇವರ ಸೇವಕನಾಗಿದ್ದು ಕೆಟ್ಟದ್ದನ್ನು ನಡಿಸುವವನಿಗೆ ದೇವರ ದಂಡನೆಯನ್ನು** [ὀργή, *orgē*] **ವಿಧಿಸುತ್ತಾನೆ.** 12ನೇ ಅಧ್ಯಾಯವು ನಾವು ಮುಯ್ಯಿಗೆ ತೀರಿಸದೆ ಅಂಥ ಸಂಗತಿಗಳನ್ನು ದೇವರ ಕೈಗಳಿಗೆ ಒಪ್ಪಿಸಿ ಬಿಟ್ಟು ಬಿಡಬೇಕೆಂದು ಒತ್ತಿ ಹೇಳಿತು (12:19). ಈ ಜೀವಿತದಲ್ಲಿ ದೇವರು ಕೆಟ್ಟದ್ದನ್ನು ದಂಡಿಸುವ ಒಂದು ವಿಧವೆಂದರೆ ಸಾರ್ವಜನಿಕ ನ್ಯಾಯಾಲಯಗಳ ಮೂಲಕವಾಗಿಯೇ ಆಗಿದೆ.

"ಸುಮ್ಮನೆ ಕತ್ತಿಯನ್ನು ಹಿಡಿದಿಲ್ಲ" ಎಂಬ ಪದಗಳು ಕಾನೂನನ್ನು ಪಾಲನೆ ಮಾಡುವಂತೆ ಮಾಡುವವರ ಬಳಿಯಲ್ಲಿರುವ ಕತ್ತಿಗಳು ಕೇವಲ ಪ್ರದರ್ಶನಕ್ಕೆ ಮಾತ್ರವೇ ಆಗಿರುವದಿಲ್ಲ ಎಂದರ್ಥವನ್ನು ಸೂಚಿಸುತ್ತವೆ. ಬದಲಾಗಿ, ಕತ್ತಿಯು ಕೆಟ್ಟದ್ದನ್ನು ಮಾಡದಂತೆ ತಡೆಯುವದಕ್ಕಾಗಿ ಉಪಯೋಗಿಸಲ್ಪಡಬಲ್ಲದು, ಮತ್ತು ಉಪಯೋಗಿಸಲ್ಪಟ್ಟಿರುತ್ತದೆ. ಕೆಲವು ಸಾರಿ "ಮರಣಾಂತಿಕ ಬಲ" ಎಂದು ಕರೆಯಲ್ಪಡುವದನ್ನು ಉಪಯೋಗಿಸುವದು ದೇವರು ಮಾಡಿರುವ ವ್ಯವಸ್ಥೆಗೆ ಅನುಗುಣವಾಗಿಯೇ ಇರುತ್ತದೆಂಬುದನ್ನು ಸೂಚಿಸುತ್ತದೆ. ಒಂದು ಕಾನೂನು ಜಾರಿಗೆ ತರಲ್ಪಡುವದಕ್ಕೆ ದಾರಿಯನ್ನು ಹೊಂದಿರದಿದ್ದರೆ ಅದು ಕೇವಲ ಒಂದು ಉತ್ತಮ ಸಲಹೆಯಂತಿರುತ್ತದಷ್ಟೇ.[20]

ಪೌಲನ ಚರ್ಚೆಯ ವಿಷಯವು ಕೆಟ್ಟದ್ದಕ್ಕೆ ಶಿಕ್ಷೆ ವಿಧಿಸುವ ಕುರಿತಾಗಿರುವದರಿಂದ, ದೇವರು ಮರಣ ದಂಡನೆಯನ್ನು ಅನುಮೋದಿಸುತ್ತಾನೆಂಬುದನ್ನು 4ನೇ ವಚನವು ಸೂಚಿಸತಕ್ಕದ್ದು. "ಕತ್ತಿ" (μάχαιρα, *machaira*) ಎಂಬ ಪದವು 8:35ರಲ್ಲಿ ಸಹ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದಕ್ಕೆ ಕೆಟ್ಟ ಸೂಚ್ಯಾರ್ಥಗಳಿದ್ದು, ನಮಗೆ ಕ್ರೂರ ಮರಣ ಹಾಗೂ ಮರಣದಂಡನೆಯನ್ನು ನೆನಪಿಸುತ್ತದೆ. James Denney ಹೀಗೆ ವ್ಯಾಖ್ಯಾನಿಸುತ್ತಾನೆ "ಆಗ ಕತ್ತಿಯನ್ನು ಉನ್ನತ ನ್ಯಾಯಾಧಿಪತಿಗಳ ಮುಂದೆ ರೂಢಿಯಾಗಿ ಇಟ್ಟುಕೊಳ್ಳಲಾಗುತ್ತಿತ್ತು, ಮತ್ತು ಅವರ ಕೈಗಳಲ್ಲಿರುತ್ತಿದ್ದ ಜೀವ ಮತ್ತು ಮರಣಗಳ ಅಧಿಕಾರವನ್ನು ಸಂಕೇತಿಸುವದಾಗಿತ್ತು."[21] "ಖಡ್ಗವು ಅಧಿಕಾರದ ಸಂಕೇತವಾಗಿತ್ತು," ಮತ್ತು "ಅದರ ಜೊತೆಯಲ್ಲಿ . . . ಮರಣ ದಂಡನೆಯನ್ನು ವಿಧಿಸುವ ಅಧಿಕಾರದ ಸಂಕೇತ."[22] ನಾವು ಬೈಬಲಿನ ಒಂದು ವಾಕ್ಯಭಾಗವನ್ನು ಓದುವಾಗ, ನಾವು ಕೇಳಿಕೊಳ್ಳಬೇಕಾದ ಮೊದಲ ಪ್ರಶ್ನೆಯೆಂದರೆ "ಇದನ್ನು ಮೊದಲು ಕೇಳಿದ ಅಥವಾ ಓದಿದವರಿಗೆ ಇದರ ಅರ್ಥವೇನಾಗಿದ್ದಿರಬೇಕು?" ಎಂಬುದೆ. ರೋಮಾ 13:4ರ ವಿಷಯದಲ್ಲಿ, Bob E. Adams ಮುಕ್ತಾಯಕ್ಕೆ ಬಂದಿದ್ದೇನೆಂದರೆ ಕೆಟ್ಟದ್ದನ್ನು ಮಾಡುವವರಿಗೆ ಮರಣ ದಂಡನೆಯನ್ನು ವಿಧಿಸುವ ಹಕ್ಕು ಎಂದೇ "ಪೌಲನ ವಾಚಕರು ಕೊಟ್ಟಿರಬಹುದಾದ ಅತ್ಯಂಥ ಸ್ವಾಭಾವಿಕವಾದ ಅರ್ಥವಾಗಿರಬಹುದಾಗಿದೆ."[23]

ದೀರ್ಘಕಾಲದ ಹಿಂದೆ, ದೇವರು ನೋಹನಿಗೆ ಈ ಸಾರ್ವತ್ರಿಕವಾದ ನಿರ್ದೇಶನವನ್ನು ಕೊಟ್ಟನು: "ಯಾರು ಮನುಷ್ಯನ ರಕ್ತವನ್ನು ಸುರಿಸುತ್ತಾರೋ ಅವರ ರಕ್ತವನ್ನು ಮನುಷ್ಯರು ಸುರಿಸುವರು" (ಆದಿ 9:6). ಈ ಮೂಲತತ್ವವು ಮೋಶೆಯ ಧರ್ಮಶಾಸ್ತ್ರದ ಭಾಗವಾಗಿ ಮಾಡಲ್ಪಟ್ಟಿತು (ವಿಮೋ 21:12), ಮತ್ತು ಅದು ಹೊಸ ಒಡಂಡಿಕೆಯೊಂದಿಗೆ ಹೊಂದಾಣಿಕೆಯಾಗುವಂಥದ್ದೆಂಬುದನ್ನು ರೋಮಾ 13ನೇ ಅಧ್ಯಾಯವು ಸೂಚಿಸುತ್ತದೆ.

ಇದು "ಮರಣ ದಂಡನೆಯು ಅತ್ಯಂಥ ಪರಿಣಾಮಕಾರಿಯಾದ ನಿರೋಧಕವೋ ಮತ್ತು/ಅಥವಾ ಅಧಿಕವಾಗಿ ಕೇವಲ ಶಿಕ್ಷೆಯೋ" ಎಂಬಂತಹ ಮರಣ ದಂಡನೆಯ ಕುರಿತಾದ ಎಲ್ಲಾ ಪ್ರಶ್ನೆಗಳನ್ನೂ ಇತ್ಯರ್ಥಗೊಳಿಸುವದಿಲ್ಲ.[24] ಹೇಗಿದ್ದರೂ, ದೇಶವು ವಿಧಿಸುವ ಮರಣ ದಂಡನೆಯ ಮೂಲತತ್ವವು ದೇವರ ಚಿತ್ತಕ್ಕೆ ವಿರುದ್ಧವಾದದ್ದಲ್ಲ ಎಂಬದನ್ನು ರೋಮಾ 13:4 ದೃಢವಾಗಿ ಹೇಳುವದಿಲ್ಲ.

ಈ ಹಂತದಲ್ಲಿ, ಇನ್ನು ಕೆಲವು ಗೊಂದಲಕ್ಕೀಡು ಮಾಡುವ ಪ್ರಶ್ನೆಗಳು ಎದ್ದೇಳುತ್ತವೆ. ಕೆಟ್ಟದ್ದನ್ನು ಶಿಕ್ಷಿಸುವದಕ್ಕೆ ಬಲವನ್ನು ಉಪಯೋಗಿಸುವದಕ್ಕೆ ನಾಗರಿಕ ಸರ್ಕಾರಕ್ಕೆ ದೇವರು ಅಧಿಕಾರ ಕೊಟ್ಟಿರುತ್ತಾನೆ, ಆದರೆ ಒಬ್ಬ *ಕ್ರೈಸ್ತನು* ಆ ಬಲವನ್ನು ಜಾರಿಗೆ ತರಬಹುದೋ? ಬೇರೆ ಮಾತುಗಳಲ್ಲಿ ಹೇಳುವದಾದರೆ, ಒಬ್ಬ ಕ್ರೈಸ್ತನು ರಾಜಕೀಯ ಹುದ್ದೆಯನ್ನು ವಹಿಸಿಕೊಳ್ಳಬಹುದೋ?[25] ಒಬ್ಬ ಕ್ರೈಸ್ತನು ಪೋಲಿಸ್ ಅಥವಾ ಸೈನಿಕ ಆಗಿರಬಹುದೋ? ಆ ಕಡೇ ಪ್ರಶ್ನೆಯ ವಿಷಯದಲ್ಲಿ, ಗತಕಾಲದಲ್ಲಿ ಆಗಿದ್ದರೆ, ಅನೇಕ ಕ್ರೈಸ್ತರು ಇಲ್ಲ ಎಂದು ಉತ್ತರಿಸಿರುತ್ತಿದ್ದರು. ಇಂದು, ಅನೇಕರು (ಬಹುಶಃ ಬಹುತೇಕರು) ಹೌದು ಎಂದು ಉತ್ತರಿಸುವರು. ಈ ಪ್ರಶ್ನೆಯ ವಿಷಯದಲ್ಲಿ, ನಮ್ಮಲ್ಲಿ ಬಹುತೇಕರು ಬಹುಶಃ ಹೊಸ ಒಡಂಬಡಿಕೆಯು ಏನು ಹೇಳುತ್ತದೆ ಅಥವಾ ಹೇಳುವದಿಲ್ಲ ಎಂಬುದಕ್ಕಿಂತಲೂ ಈಗಿನ ಪ್ರಸ್ತುತ ಘಟನಾವಳಿಗಳಿಂದ ಪ್ರಭಾವಿತರಾಗಿರುತ್ತೇವೆ. ಇಷ್ಟು ವರ್ಷಗಳಿಂದಲೂ, ವಿಷಯವನ್ನು ಆಯಾ ವ್ಯಕ್ತಿಯ ಮನಸ್ಸಾಕ್ಷಿಗೆ ಬಿಡಲಾಗಿರುತ್ತದೆ, ಪ್ರತಿಯೊಬ್ಬ ಕ್ರೈಸ್ತನು ತನಗೆ ದೇವರ ಚಿತ್ತವೇನೆಂಬುದನ್ನು ತಾನೇ ನಿರ್ಧರಿಸುವನು. (ನಮ್ಮೊಂದಿಗೆ ಭಿನ್ನಾಭಿಪ್ರಾಯವುಳ್ಳ ಜೊತೆ ಕ್ರೈಸ್ತರ ಸಂಗಡ ನಾವು ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ 14ನೇ ಅಧ್ಯಾಯವು ಗಮನ ಹರಿಸುತ್ತದೆ.)

ನಾವು ಇಂತಹ ಪ್ರಶ್ನೆಗಳ ಬಗ್ಗೆ ಚರ್ಚಿಸುತ್ತಾ ಹೋದಲ್ಲಿ ಅಸಂಖ್ಯಾತವಾದ ಪುಟಗಳನ್ನು ತುಂಬಿಸಬಲ್ಲೆವು, ಆದರೆ ಅವುಗಳು ರೋಮಾ 13:4ರಲ್ಲಿ ಪೌಲನು ಹೇಳುವ ಅಂಶದೊಂದಿಗೆ ಯಾವದೇ ಸಂಬಂಧವನ್ನು ಹೊಂದಿರುವದಿಲ್ಲ. ನಾವು ದೇಶದ ಕಾನೂನುಗಳಿಗೆ ವಿಧೇಯರಾಗುವದಕ್ಕೆ ಅಗತ್ಯವಿರುವ ಒಂದು ಕಾರಣವೆಂದರೆ ನಾವು ಅವಿಧೇಯರಾದರೆ ಶಿಕ್ಷೆಗೆ ಗುರಿಯಾಗುವೆವು ಎಂಬದನ್ನು ಪೌಲನು ಒತ್ತಿ ಹೇಳುವವನಾಗಿದ್ದನು.

**ವಚನ 5.** ಒಬ್ಬನು ತಾನು ಸಿಕ್ಕಿ ಹಾಕಿಕೊಳ್ಳದೆಯೇ, ಸರ್ಕಾರದಿಂದ ದಂಡಿಸಲ್ಪಡದೆ ತಪ್ಪಿಸಿಕೊಳ್ಳಬಲ್ಲೆನೆಂಬ ದೃಢವಿಶ್ವಾಸದಿಂದ ಇದ್ದರೆ ಹೇಗೆ? ಆ ಸಾಧ್ಯತೆನ್ನು ಕುರಿತು ಸಹ ಪೌಲನು 5ನೇ ವಚನದಲ್ಲಿ ಮಾತಾಡುತ್ತಾನೆ: **ಆದಕಾರಣ ದಂಡನೆಯಾದೀತೆಂದು ಮಾತ್ರವಲ್ಲದೆ ಮನಸ್ಸಿಗೆ ನ್ಯಾಯವಾಗಿ ತೋರುವದರಿಂದಲೂ ಅವನಿಗೆ ಅಧೀನವಾಗುವದು ಅವಶ್ಯ.** ಒಳ್ಳೇದು ಮತ್ತು ಕೆಟ್ಟದ್ದು ಇಂಥಿಂಥದ್ದೆಂದು ವ್ಯತ್ಯಾಸವನ್ನು ಮಾಡುವಂತೆ ಮನಸ್ಸಾಕ್ಷಿಯು ಸಹಾಯಕ್ಕಾಗಿ ದೇವರಿಂದ ಕೊಡಲ್ಪಟ್ಟಿರುವ ಅಂಗವಾಗಿರುತ್ತದೆ (2:14, 15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕೆಲವರು ದಂಡ ವಿಧಿಸಲ್ಪಡುತ್ತೇವಲ್ಲಾ ಎಂಬ ಭಯಕ್ಕಾಗಿಯಷ್ಟೇ ವೇಗದ ನಿಮಯಗಳಿಗೆ ವಿಧೇಯರಾಗುತ್ತಾರೆ; ಕೆಲವರು ತಮ್ಮ ವಿರುದ್ಧ ಕಾನೂನು ಕ್ರಮ ಜರುಗಿಸಲ್ಪಡಬಹುದೆಂದು ಹೆದರಿಕೆಯಿಂದಷ್ಟೇ ಆದಾಯ ತೆರಿಗೆಗಳನ್ನು ಕಟ್ಟುತ್ತಾರೆ. "ಅಧಿಕಾರಿಗಳಿಗೆ ವಿಧೇಯರಾಗುವದು ಸುರಕ್ಷಿತ [ವಾದ ಸಂಗತಿ]

ಎಂಬುದಕ್ಕಷ್ಟೆ ಅಲ್ಲ, ಆದರೆ ಅದು *ನ್ಯಾಯವಾದದ್ದು*" (Phillips; ಒತ್ತಿ ಹೇಳಿದ್ದು ನನ್ನದು) ಎಂಬದಕ್ಕಾಗಿಯೇ—ನಾವು ಹೀಗೆ ಮಾಡಬೇಕೆಂಬುದೇ ದೇವರ ಬಯಕೆಯಾಗಿರುತ್ತದೆಂಬ ಕಾರಣಕ್ಕಾಗಿಯೇ—ನಾವು ಅವರಿಗೆ ವಿಧೇಯರಾಗಬೇಕೆಂದು ಪೌಲನು ಹೇಳುತ್ತಾನೆ. ನಾವು "ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ನಾನು ನಿರ್ದೋಷಿ ಎಂದು ಸಾಕ್ಷಿ ಹೇಳುವ ಮನಸ್ಸು ನನಗೆ ಯಾವಾಗಲೂ ಇರಬೇಕೆಂದು ಅಭ್ಯಾಸಮಾಡಿಕೊಳ್ಳುತ್ತೇನೆ" ಎಂದು ಪೌಲನು ಹೇಳುವ ರೀತಿಯಲ್ಲಿಯೇ ಪ್ರಯಾಸ ಪಡಬೇಕು (ಅಪೊಸ್ತಲರ ಕೃತ್ಯಗಳು 24:16).

**ವಚನ 6.** 1ರಿಂದ 5 ವಚನಗಳಲ್ಲಿ, ಪೌಲನು ಮನುಷ್ಯ ಸರ್ಕಾರದೊಂದಿಗೆ ಒಬ್ಬ ಕ್ರೈಸ್ತನಿಗಿರಬೇಕಾದ ಸಂಬಂಧದ ಸಾಮಾನ್ಯ ತತ್ವಗಳನ್ನು ಕುರಿತು ಸಾಭಿತುಗೊಳಿಸಿದನು: ನಾವು ದೇಶದ ಕಾನೂನುಗಳಿಗೆ ವಿಧೇಯರಾಗತಕ್ಕದ್ದು; ನಾವು ಉತ್ತಮ ನಾಗರಿಕರಾಗಿರತಕ್ಕದ್ದು. 6 ರಿಂ 7 ವಚನಗಳಲ್ಲಿ, ಉತ್ತಮ ನಾಗರಿಕರಾಗಿರಬೇಕೆಂದರೆ ಏನೇನು ಅಗತ್ಯವೆಂಬುದಕ್ಕೆ ನಿರ್ದಿಷ್ಟವಾದ ನಿರ್ದೇಶನಗಳನ್ನು ಅಪೊಸ್ತಲನು ಕೊಡುತ್ತಾನೆ.

6ನೇ ವಚನವು ಹೀಗೆ ಹೇಳುತ್ತದೆ, **ಈ ಕಾರಣದಿಂದಲೇ** [ಮನುಷ್ಯ ಸರ್ಕಾರವು ದೇವರಿಂದಲೇ ಸ್ಥಾಪಿಸಲ್ಪಟ್ಟಿರುವದರಿಂದ] **ನೀವು ಕಂದಾಯವನ್ನು ಕೂಡ ಕೊಡುತ್ತೀರಿ. ಯಾಕೆಂದರೆ ಕಂದಾಯ ಎತ್ತುವವರು ದೇವರ ಉದ್ಯೋಗಿಗಳಾಗಿದ್ದು ಆ ಕೆಲಸದಲ್ಲಿಯೇ ನಿರತರಾಗಿರುತ್ತಾರೆ.** "ಉದ್ಯೋಗಿಗಳು" ಎಂಬುದು 4ನೇ ವಚನದಲ್ಲಿ ಅನುವಾದಿಸಲ್ಪಟ್ಟಿರುವ "ಸೇವಕನು" ಎಂಬ ಪದಕ್ಕಿಂತ ಬೇರೆಯಾದ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದೆ. ಇದು λειτουργός (*leitourgos*) ಎಂಬುದರ ಬಹುವಚನದ ರೂಪವಾಗಿದೆ, "ಸಾಮಾನ್ಯವಾಗಿ ಯಾಜಕತ್ವದ ಸ್ವಭಾವದ ಸೇವೆಯನ್ನು ಒದಗಿಸುವವರನ್ನು ಸೂಚಿಸುವದಕ್ಕೆ ಮೀಸಲಿಟ್ಟಿರುವಂಥ ಪದವಾಗಿರುತ್ತದೆ."[26] ಈ ಪದವು ಎತ್ತಿತೋರಿಸುವ ವಾಸ್ತವಾಂಶವೇನೆಂದರೆ "ಭೂಲೋಕದ ಪ್ರಭುಗಳು, ಅವರು ದೇವರ ಸೇವಕರೆಂಬ ಪ್ರಜ್ಞೆಯಿಂದ ಕೆಲಸ ಮಾಡುವದಿಲ್ಲವಾದಾಗ್ಯೂ, ದೇವರಿಂದ ಪ್ರತಿಷ್ಠಾಪಿಸಲ್ಪಟ್ಟಿರುವಂಥ ಉದ್ಯೋಗಗಳನ್ನು ನೆರವೇರಿಸುವವವರಾಗಿರುತ್ತಾರೆ" ಎಂಬದೇ.[27]

"ಆ ಕೆಲಸದಲ್ಲಿಯೇ ನಿರತರಾಗಿರುತ್ತಾರೆ" ಎಂಬುದು ಮನುಷ್ಯರ ಸರ್ಕಾರಗಳು ಏನು ಮಾಡತಕ್ಕದ್ದು ಎಂಬದಾಗಿ ಪೌಲನು ಹೇಳಿದ (ಅಥವಾ ಸೂಚ್ಯಾರ್ಥವಾಗಿ ತಿಳಿಸಿದ) ಸಂಗತಿಯನ್ನು ಸೂಚಿಸುತ್ತದೆ: ತಮ್ಮ ನಾಗರಿಕರಿಗೆ ಸುರಕ್ಷತೆಯನ್ನು ಮತ್ತು ತಮ್ಮ ನಾಗರಿಕರು ಸ್ವತಃ ಪಡೆದುಕೊಳ್ಳುವದಕ್ಕೆ ಸಾಧ್ಯವಾಗದಿರಬಹುದಾದ ಸೇವೆಗಳನ್ನು ಒದಗಿಸುವದು. ಮನುಷ್ಯ ಸರ್ಕಾವು ದೇವರಿಂದ ಸ್ಥಾಪಿಸಲ್ಪಟ್ಟ *ಕಾರಣದಿಂದ* ಮತ್ತು ಸರ್ಕಾರದ ಕೆಲಸಗಾರರು (ಒಂದು ಅರ್ಥದಲ್ಲಿ) ದೇವರ ಉದ್ದೇಶವನ್ನು ನೆರವೇರಿಸುತ್ತಿದ್ದಾರೆಂಬ *ಕಾರಣದಿಂದ*, ನಾವು ಕಂದಾಯವನ್ನು ಕಟ್ಟತಕ್ಕದ್ದು. John R. W. Stott ಒತ್ತಿ ಹೇಳಿದ್ದೇನೆಂದರೆ ಜನರು ನಮಗೆ ಎಷ್ಟರ ಮಟ್ಟಿಗೆ ಸರ್ಕಾರವು ಅಗತ್ಯವಿದೆ (ಅದು ನಾವು ಎಷ್ಟು ಕಂದಾಯವನ್ನು ಕಟ್ಟುತ್ತೇವೆಂಬದರ ಮೇಲೆ ಪರಿಣಾಮ ಬೀರುತ್ತದೆ) ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದಾರೆ, ಆದರೆ "ಎಲ್ಲರೂ ಒಮ್ಮತ ಪಡುವದೇನೆಂದರೆ . . . ಸರ್ಕಾರವು ಒದಗಿಸಲೇಬೇಕಾದ ಕೆಲವು ಸೇವೆಗಳಿರುತ್ತವೆ, ಇವುಗಳಿಗೆ ಹಣವನ್ನು ಕಟ್ಟಬೇಕು, ಮತ್ತು ಇವುಗಳು ಕಂದಾಯವನ್ನು ಅವಶ್ಯಕಗೊಳಿಸುತ್ತವೆ ಎಂಬದೆ."[28]

ಕಂದಾಯವನ್ನು ಕಟ್ಟಬೇಕೆಂದು ಬುದ್ಧಿಹೇಳಿದ್ದು ಈ ಚರ್ಚೆಯಲ್ಲಿ ನಂತರ ಯೋಚಿಸಿದ ವಿಚಾರವಾಗಿರುವದಿಲ್ಲ. ಮುಂಚಿನ ವಚನಗಳಲ್ಲಿ, ಪೌಲನು ಈ ಮುಕ್ತಾಯಕ್ಕೆ ಬರಲು ಬುನಾದಿಯನ್ನು ಹಾಕಿದ್ದನು. ಯೆಹೂದ್ಯರು ರೋಮನ್ನರಿಗೆ ಕಂದಾಯ ಕಟ್ಟುವದಕ್ಕೆ ಸ್ವಲ್ಪವೂ ಇಷ್ಟಪಡುತ್ತಿರಲಿಲ್ಲ. ಹೇಗಿದ್ದರೂ, ಕಂದಾಯವನ್ನು ಕಟ್ಟಲೇಬೇಕು ಎಂದು ಪೌಲನು ಆಗ್ರಹಿಸಿದನು. ನಾವು ನಮ್ಮ ಕಂದಾಯವನ್ನು ಕಟ್ಟದಿದ್ದರೆ, ನಾವು ಸರ್ಕಾರವನ್ನು ವಂಚಿಸುತ್ತಿರುವದು ಮತ್ತು ನಮ್ಮ ನ್ಯಾಯವಾದ ಪಾಲನ್ನು ಮಾಡುವದಕ್ಕೆ ವಿಫಲರಾಗುವದು ಮಾತ್ರವಲ್ಲದೆ, ನಾವು ದೇವರಿಗೆ ಅವಿಧೇಯರು ಸಹ ಆಗುತ್ತಿದ್ದೇವೆ ಎಂದಾಗುತ್ತದೆ.

ಇನ್ನೊಂದು ಆಕ್ಷೇಪಣೆಯು ಸಹಜವಾದದ್ದು: "ಆದರೆ ನಾನು ನನ್ನ ಕಂದಾಯಗಳನ್ನು ಕಟ್ಟಿದರೆ, ಸರ್ಕಾರವು ಭಾಗಿಯಾಗಿರುವಂಥ ಭಕ್ತಿಹೀನ ಕೆಲಸಗಳಿಗೆ ನಾನು ಬೆಂಬಲಿಸಿದಂತಾಗುತ್ತದೆ!" ಯೇಸು ಹೇಳಿದ್ದನ್ನು ನೆನಪಿಗೆ ತಂದುಕೊಳ್ಳೋಣ, "ಕೈಸರನದನ್ನು ಕೈಸರಿನೆ ಕೊಡಿರಿ, ದೇವರದನ್ನು ದೇವರಿಗೆ ಕೊಡಿರಿ" (ಲೂಕ 20:25). ಅಲ್ಲದೆ ಪೌಲನು ವಿಗ್ರಹಾರಾಧಕ ರೋಮನ್ ಸಾಮ್ರಾಜ್ಯಕ್ಕೆ—ರಾಜಕೀಯ ಭ್ರಷ್ಟಾಚಾರ ದಿಂದ ತುಂಬಿದ್ದ ಒಂದು ಸರ್ಕಾರ ಮತ್ತು ಅಧಿಕಾರಿಗಳು ಹಣ ದುರುಪಯೋಗ ಪಡಿಸಿಕೊಳ್ಳುವವರಾಗಿದ್ದರು—ಕಂದಾಯವನ್ನು ಕಟ್ಟುವ ಕುರಿತಾಗಿಯೇ ಪ್ರಾಥಮಿಕವಾಗಿ ಮಾತಾಡಿದನು ಎಂಬುದನ್ನು ಸಹ ನಾವು ನೆನಪಿಟ್ಟುಕೊಳ್ಳತಕ್ಕದ್ದು. ಹೇಗಿದ್ದರೂ, ಕಂದಾಯಗಳನ್ನು ಕಟ್ಟತಕ್ಕದ್ದು ಎಂಬದಾಗಿ ಯೇಸು ಮತ್ತು ಪೌಲ ಇಬ್ಬರೂ ಹೇಳಿದರು. ನಮ್ಮ ಜವಾಬ್ದಾರಿಯು ಕಂದಾಯಗಳನ್ನು ಕಟ್ಟುವದು; ಹಣವನ್ನು ಬುದ್ಧಿವಂತಿಕೆಯಿಂದ ಖರ್ಚು ಮಾಡುವದು ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಅವರು ತಮ್ಮ ಜವಾಬ್ದಾರಿಯನ್ನು ನೆರವೇರಿಸಲಿಲ್ಲವಾದಲ್ಲಿ, ಅದು ನಮ್ಮ ಜವಾಬ್ದಾರಿಯನ್ನು ನೆರವೇರಿಸದೆ ಇರುವದಕ್ಕೆ ವಿನಾಯಿತಿಯನ್ನು ಕೊಡುವದಿಲ್ಲ.

**ವಚನ 7.** ಪೌಲನು **ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ** ಎಂದು ಹೇಳುವ ಮೂಲಕ ಈ ವಿಚಾರವನ್ನು ಮತ್ತಷ್ಟು ಪುಷ್ಟೀಕರಿಸುತ್ತಾನೆ. ಸನ್ನಿವೇಶದಲ್ಲಿ, "ಅವರವರಿಗೆ" ಎಂಬುದು ಎಲ್ಲಾ ನಾಗರಿಕ ಅಧಿಕಾರಿಗಳನ್ನು—ಚಿಕ್ಕವರಿಂದ ದೊಡ್ಡವರು, ಅಲ್ಪ ಪ್ರಾಮುಖ್ಯತೆಯುಳ್ಳವರಿಂದ ಹೆಚ್ಚು ಪ್ರಾಮುಖ್ಯರ ವರೆಗೂ—ಸೂಚಿಸುತ್ತದೆ. "ಸಲ್ಲಿಸಿರಿ" ಎಂಬುದು ἀποδίδωμι (*apodidōmi*) ಎಂಬ ಗ್ರೀಕ್ ಪದದಿಂದ ಬಂದದ್ದು, ಅದೇ ಪದವು ಲೂಕ 20:25ರಲ್ಲಿ ಉಪಯೋಗಿಸಲ್ಪಟ್ಟಿದೆ, ಅಲ್ಲಿ ಯೇಸು "ಕೈಸರನದನ್ನು ಕೈಸರನಿಗೆ ಕೊಡಿರಿ" ಎಂದು ಹೇಳಿದನು.

"ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ" ಎಂಬ ಆಜ್ಞೆಯು ಇನ್ನಷ್ಟು ವಿಸ್ತರಿಸಲ್ಪಟ್ಟಿದೆ: **ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು.** "ಕಂದಾಯ" ಎಂಬುದು φόρος (*phoros*) ಎಂಬ ಪದದಿಂದ ಬಂದದ್ದು, ಅದು 6ನೇ ವಚನದಲ್ಲಿ ಸಿಕ್ಕುವ ಮತ್ತು ಲೂಕ 20:22ರಲ್ಲಿ ಯೇಸುವಿಗೆ ಕೇಳಲಾದ ಪ್ರಶ್ನೆಯಲ್ಲಿ ಉಪಯೋಗಿಸಲಾಗಿರುವ ಪದವಾಗಿದೆ. *Phoros* ಅಂದರೆ "ಸ್ವಾಧೀನಪಡಿಸಿಕೊಳ್ಳಲ್ಪಟ್ಟ ದೇಶವು ಸಂದಾಯ ಮಾಡುತ್ತಿದ್ದ 'ಕಪ್ಪ'" ಎಂದರ್ಥವಾಗಿದೆ.[29] "ಸುಂಕ" ಎಂಬುದು τέλος (*telos*) ಎಂಬ ಪದದಿಂದ ಬಂದದ್ದು, ಅದು "ತನ್ನ ದ್ವಿತೀಯಾರ್ಥದಲ್ಲಿ, 'ಸಾರ್ವಜನಿಕ

ಉದ್ದೇಶಗಳಿಗಾಗಿ, ರಸ್ತೆ ಸುಂಕ, ತೆರಿಗೆ, ವಸ್ತುಗಳ ಮೇಲಿನ ಸುಂಕ'" ಎಂಬರ್ಥವಾಗಿರುತ್ತದೆ.[30] ಮತ್ತಾಯ 17:25ರಲ್ಲಿ ಯೇಸು ಪೇತ್ರನಿಗೆ ದೇವಾಲಯಕ್ಕೆ ತೆರಿಗೆಯನ್ನು ಕಟ್ಟು ಎಂದು ಹೇಳುವಾಗ ಇದೇ ಪದವು ಉಪಯೋಗಿಸಲ್ಪಟ್ಟಿದೆ. ಪೌಲನು ಬಹುಶಃ *ಎಲ್ಲಾ* ಸುಂಕಗಳನ್ನು ಸೇರ್ಪಡೆಗೊಳಿಸುವದಕ್ಕೆ ಎರಡೂ ಪದಗಳನ್ನು ಬಳಸಿರಬಹುದಾಗಿದೆ.[31] ಸಂದೇಶವು ಸ್ಪಷ್ಟವಾಗಿದೆ: ಕ್ರೈಸ್ತರು ಕಂದಾಯಗಳನ್ನು ಕಟ್ಟತಕ್ಕದ್ದು.

ಪೌಲನು ನಂತರ, ಕೆಲವರಿಗೆ ಕಂದಾಯವನ್ನು ಕಟ್ಟುವದಕ್ಕಿಂತಲೂ ಕಷ್ಟಕರವೇನಿಸುವಂಥ ಒಂದು ಸಂಗತಿಯನ್ನು ಮಾಡುವದಕ್ಕೆ ಹೇಳಿದನು: **ಯಾರಿಗೆ ಭಯವೋ** [ಸಲ್ಲಬೇಕೋ] **ಅವರಿಗೆ ಭಯವನ್ನು; ಯಾರಿಗೆ ಮರ್ಯಾದೆಯೋ** [ಸಲ್ಲಬೇಕೋ] **ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ.** "ಭಯ" ಎಂಬುದು *phobos* ಎಂಬದರಿಂದ ಅನುವಾದಿಸಲ್ಪಟ್ಟಿದ್ದು, ಅದು ಅನೇಕ ಅರ್ಥಗಳ ಛಾಯೆಗಳನ್ನೊಳಗೊಂಡ ಪದವಾಗಿದೆ. 3 ಮತ್ತು 4 ವಚನಗಳಲ್ಲಿ ಶಿಕ್ಷೆಗೊಳಗಾಗುವ ಭಯವನ್ನು ಕುರಿತು ಮಾತಾಡುವಾಗ ಇದೇ ಪದವನ್ನು ಉಪಯೋಗಿಸಲಾಗಿದೆ, ಆದರೆ 7ನೇ ವಚನದಲ್ಲಿ ಅದು ಬೇರೆಯಾದ ಒತ್ತು ಹೊಂದಿರುತ್ತದೆ. "ಗೌರವ" ಎಂಬುದು ಇಲ್ಲಿ ವಿಚಾರವನ್ನು ಉತ್ತಮವಾಗಿ ವ್ಯಕ್ತಪಡಿಸುವಾಗಿದೆ (ನೋಡಿರಿ RSV; NRSV; NIV; AB; McCord). "ಮರ್ಯಾದೆ" ಎಂಬುದು τιμή (*timē*) ಎಂಬ ಪದದಿಂದ ಬಂದದ್ದು, ಅದರರ್ಥವು ಒಂದನ್ನು ಬೆಲೆಯುಳ್ಳದ್ದೆಂದು ಪರಿಗಣಿಸುವದು.[32] ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದೇನೆಂದರೆ, ಸನ್ನಿವೇಶದಲ್ಲಿ, ಪೌಲನು ಸರ್ಕಾರದ ಅಧಿಕಾರಿಗಳನ್ನು ಸೂಚಿಸಿ ಹೇಳುತ್ತಿದ್ದಾನೆ ಎಂಬದೆ.

ಒಂದು ಅಂತಿಮ ಆಕ್ಷೇಪಣೆಯನ್ನು ಬರೆಯಬಹುದಾಗಿದೆ: "ಆದರೆ ನಾನು ಕೆಲವೊಬ್ಬ ಸರ್ಕಾರಿ ಅಧಿಕಾರಿಗೆ ಗೌರವಿಸುವದಿಲ್ಲ, ಮತ್ತು ನಾನು ಆತನಿಗೆ ಮರ್ಯಾದೆಯನ್ನು ಸಲ್ಲಿಸಲು ನಿರಾಕರಿಸುತ್ತೇನೆ. ಆತನು ಅಪ್ರಾಮಾಣಿಕನು ಮತ್ತು ಅವನಿಗೆ ಯಾವದೇ ನೈತಿಕತೆಗಳೇ ಇರುವದಿಲ್ಲ!" ಪುನಃ, ಪೌಲನು ರೋಮನ್ ಸರ್ಕಾರದಲ್ಲಿದ್ದ ಅಧಿಕಾರಗಳ ಬಗ್ಗೆ ಮಾತಾಡುತ್ತಿದ್ದನೆಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು, ಅವರಲ್ಲಿ ಅನೇಕರು ಮಿತಿಮೀರಿದಷ್ಟು ಭ್ರಷ್ಟರು ಹಾಗೂ ನೀತಿಗೆಟ್ಟವರು ಆಗಿದ್ದರು. ಪೇತ್ರನು "ಅರಸನನ್ನು ಸನ್ಮಾನಿಸಿರಿ [τιμάω, *timaō*" ಎಂಬದರಿಂದ ಬಂದದ್ದು]" (1 ಪೇತ್ರ 2:17) ಎಂದು ಹೇಳಿದಾಗ, ಆತನು ಭಕ್ತಿಹೀನ ಚಕ್ರವರ್ತಿಯಾಗಿದ್ದ ನಿರೋನನ್ನು ಸೂಚಿಸಿ ಹಾಗೆ ಹೇಳಿದ್ದನು. ನೀವು ಒಬ್ಬ ಮನುಷ್ಯನನ್ನು ಗೌರವಿಸುವದಕ್ಕೆ ಸಾಧ್ಯವಿಲ್ಲವಾದರೂ, ಕನಿಷ್ಠ ಆತನ ಉದ್ಯೋಗಕ್ಕಾದರೂ ಗೌರವ ಕೊಡಿರಿ ಎಂದು ಹೇಳಲಾಗುತ್ತದೆ. ಅಪೊಸ್ತಲರ ಕೃತ್ಯಗಳು 23:1-5ರಲ್ಲಿ. ಪೌಲನು ಮನುಷ್ಯನನ್ನು ಸನ್ಮಾನ ಮಾಡುವದಕ್ಕಾಗದಿದ್ದಾಗ್ಯೂ ಆತನ ಹುದ್ದೆಗೆ ಸನ್ಮಾನವನ್ನು ಕೊಟ್ಟನು. ನಾನು ವೈಯಕ್ತಿಕವಾಗಿ ಗೌರವಿಸದಂಥ ಅನೇಕ ಅಮೆರಿಕದ ಅಧ್ಯಕ್ಷರಿದ್ದರು—ಆದರೆ ಅವರಲ್ಲೊಬ್ಬರು ನನ್ನ ಕೋಣೆಯೊಳಗೆ ಬಂದದ್ದೇ ಆಗಿದ್ದರೆ, ಆತನ ಹುದ್ದೆಗೆ ಗೌರವವನ್ನು ಕೊಟ್ಟು ನಾನು ಎದ್ದು ನಿಲ್ಲುತ್ತಿದ್ದೆನು.

ರೋಮಾ 13:1-7ರಲ್ಲಿನ ಪೌಲನು ನೀಡಿದ ಉಪದೇಶವನ್ನು ನಾವು ಹೇಗೆ ಸಾರಾಂಶಿಸಬಹುದು? William Barclay ಈ ವಾಕ್ಯಭಾಗವನ್ನು ಹೀಗೆ ಸಂಕ್ಷೇಪಿಸುತ್ತಾನೆ:

> ಸರ್ಕಾರವು [ರಾಜ್ಯವು] ದೇವರ ಕೈಯಲ್ಲಿನ ಒಂದು ಸಾಧನವಾಗಿದ್ದು, ಲೋಕವನ್ನು

ಅಸ್ತವ್ಯಸ್ತತೆಗೊಳಗಾಗದಂತೆ ಕಾಪಾಡುವದಾಗಿದೆ ಎಂಬುದಾಗಿ ಪೌಲನು ಕಂಡನು. ಸರ್ಕಾರದಲ್ಲಿ ಆಡಳಿತ ಮಾಡುವವರು ಆ ಮಹಾನ್ ಧ್ಯೇಯಕ್ಕಾಗಿ ತಮ್ಮ ಪಾತ್ರವನ್ನು ನಿರ್ವಹಿಸುವವರಾಗಿದ್ದರು. ಅವರಿಗೆ ಗೊತ್ತಿತ್ತೋ ಅಥವಾ ಗೊತ್ತಿರಲಿಲ್ಲವೋ, ಅವರಂತೂ ದೇವರ ಕೆಲಸವನ್ನು ಮಾಡುವವರಾಗಿದ್ದರು, ಮತ್ತು ಅದಕ್ಕೆ ಅಡ್ಡಿಯನ್ನುಂಟು ಮಾಡದೆ ಸಹಾಯವನ್ನು ಮಾಡುವದು ಕ್ರೈಸ್ತನ ಕರ್ತವ್ಯವಾಗಿತ್ತು.[33]

ಖಂಡಿತವಾಗಿಯೂ, ಪೌಲನು ರೋಮಾ 13:1-7ರಲ್ಲಿ ಮನುಷ್ಯ ಸರ್ಕಾರದೊಂದಿಗೆ ಕ್ರೈಸ್ತನಿಗಿರಬೇಕಾದ ಸಂಬಂಧದ ಕುರಿತ ವಿಷಯವನ್ನು ಪೂರ್ತಿಯಾಗಿ ಪರಿಶೀಲಿಸಿ ಮುಗಿಸಿ ಬಿಡಲಿಲ್ಲ. ಉದಾಹರಣೆಗೆ, ಈ ವಾಕ್ಯಭಾಗದಲ್ಲಿ, 1 ತಿಮೊಥೆ 2:1, 2ರಲ್ಲಿ ಹೇಳಿದ ರೀತಿಯಲ್ಲಿ ಸರ್ಕಾರಿ ಅಧಿಕಾರಿಗಳಿಗಾಗಿ ಪ್ರಾರ್ಥಿಸುವ ಕುರಿತಾಗಿ ಆತನು ಪ್ರಸ್ತಾಪಿಸಲಿಲ್ಲ.[34] ರೋಮಾ 13ಕ್ಕೆ 1 ತಿಮೊಥೆ 2ನ್ನು ಸೇರ್ಪಡೆಗೊಳಿಸುವದಾದರೆ, ಸರ್ಕಾರದೆಡೆಗೆ ಒಬ್ಬ ಕ್ರೈಸ್ತನಿಗಿರಬೇಕಾದ ಮೂಲಭೂತ ಜವಾಬ್ದಾರಿಯೆಂದರೆ "ಸಂದಾಯ ಮಾಡು, ಪ್ರಾರ್ಥನೆ ಮಾಡು, ಮತ್ತು ವಿಧೇಯನಾಗು" ಎಂದು ಹೇಳಲಾಗಿರುತ್ತದೆ. ಅದನ್ನು ದಾಟಿ, ಅದೊಂದು ವೈಯಕ್ತಿಕ ಮನಸ್ಸಾಕ್ಷಿಗೆ ಸಂಬಂಧಪಟ್ಟ ವಿಚಾರವಾಗುತ್ತದೆ.[35]

## ನೆರೆಯವರ ವಿಷಯದಲ್ಲಿನ ಧೋರಣೆ (13:8-10)

**8ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು. ಮತ್ತೊಬ್ಬರನ್ನು ಪ್ರೀತಿಸುವವನು ಧರ್ಮಪ್ರಮಾಣವನ್ನೆಲ್ಲಾ ನೆರವೇರಿಸಿದ್ದಾನೆ. 9ಹೇಗಂದರೆ ವ್ಯಭಿಚಾರ ಮಾಡಬಾರದು, ನರಹತ್ಯಮಾಡಬಾರದು, ಕದಿಯಬಾರದು, ಪರರ ಸೊತ್ತನ್ನು ಆಶಿಸಬಾರದು ಈ ಮೊದಲಾದ ಎಲ್ಲಾ ಕಟ್ಟಳೆಗಳು—ನಿನ್ನ ನೆರೆಯವನನ್ನು ನಿನ್ನಿಂತೆಯೇ ಪ್ರೀತಿಸಬೇಕು ಎಂಬ ಒಂದೇ ಮಾತಿನಲ್ಲಿ ಅಡಕವಾಗಿವೆ. 10ಪ್ರೀತಿಯು ಮತ್ತೊಬ್ಬರಿಗೆ ಯಾವ ಕೇಡನ್ನೂ ಮಾಡುವದಿಲ್ಲ. ಆದಕಾರಣ ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ.**

ಚರ್ಚೆಯ ಅಂಶವು ಸರ್ಕಾರದ ವಿಷಯದಲ್ಲಿ ಕ್ರೈಸ್ತನಿಗಿರಬೇಕಾದ ಧೋರಣೆಯ ಕಡೆಯಿಂದ (13:1-7) ಆತನು ತನ್ನ ನೆರೆಯವರ ವಿಷಯದಲ್ಲಿ ಹೊಂದಿರಬೇಕಾದ ಧೋರಣೆಯ ಕಡೆಗೆ ಬದಲಾಗುತ್ತದೆ (13:8-10). ಪೌಲನು ತನ್ನ ವಾಚಕರಿಗೆ ತಮ್ಮ ನೆರೆಯವರನ್ನು ಪ್ರೀತಿಸಬೇಕು ಮತ್ತು ಹೀಗೆ ಧರ್ಮಪ್ರಮಾಣವನ್ನು ನೆರವೇರಿಸಬೇಕು ಎಂದು ಬೇಡಿಕೊಳ್ಳುತ್ತಾನೆ.

**ವಚನ 8.** ಈ ವಿಭಾಗವು ಆಲೋಚನೆ ಮಾಡುವಂತೆ ಪ್ರಚೋದಿಸುವ ಈ ಆಜ್ಞೆಯೊಂದಿಗೆ ಆರಂಭಗೊಳ್ಳುತ್ತದೆ: **ನಿಮಗೆ ಬೇರೆ ಯಾವ ಸಾಲವೂ ಇರಬಾರದು.** ಕೆಲವರು ಈ ಮಾತುಗಳನ್ನು ಒಬ್ಬ ಕ್ರೈಸ್ತನು ಎಂದಿಗೂ ಯಾವ ರೀತಿಯ ಸಾಲವನ್ನೂ ಮಾಡಿಕೊಳ್ಳಬಾರದು ಎಂಬಂತೆ ಅರ್ಥಮಾಡಕೊಳ್ಳುತ್ತಾರೆ. ಅಮೆರಿಕದಲ್ಲಿ ಮಹಾ ಕುಸಿತದ ವೇಳೆಯಲ್ಲಿ (1930ರ ಹೊತ್ತಿನ) ಜೀವಿಸಿದವರರು ಈ ಮನೋಭಾವವನ್ನು ಹೊಂದಿರುತ್ತಾರೆ: "ನಿಮಗೆ ಅದಕ್ಕೆ ಹಣ ಸಂದಾಯ ಮಾಡಲಾಗಲಿಲ್ಲವಾದರೆ, ಅದು ನಿಮಗೆ ಅಗತ್ಯವಿಲ್ಲ!" ನಾನು ಆ ನಿಲುವಿನೊಂದಿಗೆ ಸಹಾನುಭೂತಿ ವ್ಯಕ್ತಪಡಿಸುತ್ತೇನೆ, ಆದರೆ ಪೌಲನು ಅದನ್ನು

ಮನಸ್ಸಿನಲ್ಲಿಟ್ಟುಕೊಂಡು ಹೇಳಿದನೆಂದು ನನಗೆ ಸಂಶಯವಿರುತ್ತದೆ.[36]

"ಬೇರೆ ಯಾವ ಸಾಲವೂ ನಿಮಗೆ ಇರಬಾರದು" ಎಂಬುದು ಹಿಂದಿನ 7ನೇ ವಚನವನ್ನು ಅನುಸರಿಸುವದಾಗಿದೆ,[37] ಅದು ಹೀಗೆ ಹೇಳಿತು, "ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ; ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ." ಸನ್ನಿವೇಶದಲ್ಲಿ ನೋಡುವದಾದರೆ, "ಬೇರೆ ಯಾವ ಸಾಲವೂ ನಿಮಗೆ ಇರಬಾರದು" ಎಂಬದರರ್ಥವು "ಈಗಷ್ಟೆ ಮಾಬೇಕೆಂದು ನಿಮಗೆ ಹೇಳಿದ್ದನ್ನು ಮಾಡುವದಕ್ಕೆ ವಿಫಲರಾಗದಿರಿ: ನಿಮ್ಮ ಕಂದಾಯಗಳನ್ನು ಕಟ್ಟಿರಿ, ಮತ್ತು ನಾಗರಿಕ ಅಧಿಕಾರಿಗಳಿಗೆ ಮರ್ಯಾದೆ ಮತ್ತು ವಿಧೇಯತೆಯನ್ನು ಸಲ್ಲಿಸಿರಿ." ಇಲ್ಲಿ ಮೂಲಭೂತ ವಿವಾರವೇನೆಂದರೆ "ನೀವು ಯಾವ ಸಾಲ ಹೊಂದಿದ್ದಿರೋ [ಸಲ್ಲಿಸಬೇಕಾಗಿರುತ್ತದೋ] ಅದನ್ನು ಸಂದಾಯ ಮಾಡುವದಕ್ಕೆ ವಿಫಲರಾಗದಿರಿ" ಎಂಬುದೇ.[38] NIV ಯಲ್ಲಿ "ಯಾವ ಸಾಲವೂ ಬಾಕಿಯಾಗಿ ಉಳಿಯದಿರಲಿ" ಎಂದಿರುತ್ತದೆ. NLTಯು ಸರಳವಾಗಿ "ನಿಮ್ಮ ಸಾಲಗಳನ್ನೆಲ್ಲಾ ತೀರಿಸಿರಿ" ಎಂದು ಹೇಳುತ್ತದೆ.

"ನಿಮ್ಮ ಸಾಲಗಳನ್ನೆಲ್ಲಾ ತೀರಿಸಿರಿ" ಎಂಬ ಮೂಲತತ್ವವು ಸರ್ಕಾರಕ್ಕೆ ನಮಗಿರುವ ಸಾಲವಷ್ಟೇ ಎಂಬದಕ್ಕಿಂತಲೂ ಹೆಚ್ಚು ವಿಸ್ತಾರವಾದದ್ದೆಂದು ಅರ್ಥನಿರೂಪಿಸಲ್ಪಡ ತಕ್ಕದ್ದೋ? ಬಹುಶಃ ಹಾಗೆಯೇ ಅನ್ನಿಸುತ್ತದೆ, ಯಾಕೆಂದರೆ ಪೌಲನು ಆ ಕಟ್ಟಪ್ಪಣೆಯ ಬಳಿಕ ಸರ್ವಸಾಮಾನ್ಯ ಲಕ್ಷಣವುಳ್ಳ ಉಪದೇಶವನ್ನು ನೀಡುತ್ತಾನೆ. ಅನೇಕ ಸಾರಿ ನಮಗೆ ದೇವರ ಮಕ್ಕಳು ತಮ್ಮ ತೆರಿಗೆಗಳನ್ನು ಕಟ್ಟಬೇಕೆಂಬುದನ್ನು ನೆನಪಿಸುವ ಅಗತ್ಯವಿರುತ್ತದೆ. ಕೀರ್ತನೆ 37:21 ಹೀಗೆ ಹೇಳುತ್ತದೆ, "ದುಷ್ಟನು ಸಾಲ ಮಾಡಿಕೊಂಡು ತೀರಿಸಲಾರದೆ ಹೋಗುವನು; ನೀತಿವಂತನು ಪರೋಪಕಾರಿಯಾಗಿ ಧರ್ಮಕೊಡುವನು." ತಮ್ಮ ಹಣಗಳನ್ನು ಕಟ್ಟದಿರುವ ಕ್ರೈಸ್ತರಿಂದ ಕ್ರಿಸ್ತನ ಧ್ಯೇಯಕ್ಕೆ ಬಹಳ ಹಾನಿಯು ಮಾಡಲ್ಪಟ್ಟಿರುತ್ತದೆ.[39]

ನಾವು ನಮ್ಮ ಸಾಲಗಳನ್ನು ಕಟ್ಟಬೇಕಾಗಿರುತ್ತದೆ, ಆದರೆ ನಾವು ಎಂದಿಗೂ ಪೂರ್ತಿಯಾಗಿ ಕಟ್ಟಿ ತೀರಿಸಲಾಗದಂಥ ಒಂದು ಸಾಲವಿರುತ್ತದೆ. ಅದು **ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ.** D. Stuart Briscoe ಹೀಗೆ ಹೇಳುತ್ತಾನೆ, "ಪ್ರೀತಿ ಎಂಬುದು ಜನರ ಮನಸ್ಸಿನಲ್ಲಿ ಒಂದು ಉದಾತ್ತ ಮತ್ತು ಒಂದು ಆಹ್ಲಾದಕರ ಐಚ್ಛಿಕ ಹೆಚ್ಚುವರಿ ಎಂಬುವುಗಳ ನಡುವಿನ ಒಂದು ಸಂಗತಿಯಾಗಿ ನೆಲೆಗೊಂಡಿರುವಂತೆ ತೋರುತ್ತದೆ. ಹೇಗೂ, ಅಪೊಸ್ತಲನು ಒತ್ತಿ ಹೇಳುವದೇನೆಂದರೆ, ಪ್ರೀತಿಯು ಕಂದಾಯ ಕಟ್ಟುವಿಕೆ ಹಾಗೂ ವೈಯಕ್ತಿಕ ಸಾಲ ತೀರಿಸುವಿಕೆಯ ಹಾಗೆಯೇ ಒಂದು ಕಡ್ಡಾಯವಾದ ಕರ್ತವ್ಯವಾಗಿರುತ್ತದೆ ಎಂಬದೆ."[40]

"ಒಬ್ಬರನ್ನೊಬ್ಬರು" ಎಂಬ ಪದವು ಅನೇಕ ಸಾರಿ ಜೊತೆ ಕ್ರೈಸ್ತರನ್ನು ಸೂಚಿಸುತ್ತದೆ (ನೋಡಿರಿ 12:10), ಮತ್ತು ಪೌಲನು ವಿಶೇಷವಾಗಿ ಇವರನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದಾಗಿದೆ. ಹೇಗೂ, ನಾವು ಮುಂದೆ ಕಲಿಯಲಿರುವ ಪ್ರಕಾರ, ಅನ್ವಯಿಕೆಯು ಸಭೆಯ ಜೊತೆ ಸದಸ್ಯರನ್ನು ದಾಟಿ ವಿಸ್ತಾರವಾಗಿರುತ್ತದೆ. ನಮಗೆ ಎಲ್ಲರನ್ನೂ ಪ್ರೀತಿಸಬೇಕೆಂಬ ಋಣವಿರುತ್ತದೆ.

ನಮಗೆ ಏಕೆ "ಎಲ್ಲಾ" ಜನರನ್ನು ಪ್ರೀತಿಸಬೇಕೆಂಬ ಋಣವಿರುತ್ತದೆ? ಏಕೆಂದರೆ ಕರ್ತನು

ನಮ್ಮನ್ನು ಪ್ರೀತಿಸಿದ್ದಾನೆ. ಯೋಹಾನನು ಹೀಗೆ ಬರೆದನು, "ಪ್ರಿಯರೇ, ದೇವರು ನಮ್ಮನ್ನು ಹೀಗೆ ಪ್ರೀತಿಸಿದ ಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ" (1 ಯೋಹಾನ 4:11). ಅನೇಕರು ಈ ಶಾಶ್ವತವಾದ ಋಣದ ವಿಷಯವಾಗಿ Origen[41]ನ ಮಾತುಗಳನ್ನು ಉಲ್ಲೇಖಿಸುತ್ತಾರೆ: "ನಿಮ್ಮ ಕಟ್ಟಿ ತೀರಿಸದ ಏಕೈಕ ಸಾಲವು ಪ್ರೀತಿಯಾಗಿರಲಿ—ಅದು ನೀವು ಪೂರ್ಣವಾಗಿ ತೀರಿಸುವದಕ್ಕೆ ಸದಾ ಯತ್ನೈಸುವಂಥ, ಆದರೆ ತೀರಿಸಿ ಮುಗಿಸುವದಕ್ಕೆ ಎಂದಿಗೂ ಯಶಸ್ವಿಯಾಗದ ಒಂದು ಋಣ."[42] ವ್ಯಾಖ್ಯಾನ ಗ್ರಂಥವೊಂದರ ಲೇಖಕರಲ್ಲೊಬ್ಬನು ಹೀಗೆ ಬರೆಯುತ್ತಾನೆ,

> ಕ್ರಿಸ್ತನು ನಮ್ಮ ಮೇಲೆ ದಾರಾಳವಾಗಿ ಸುರಿಸಿರುವ ಪ್ರೀತಿಗಾಗಿ ನಾವು ಆತನಿಗೆ ಶಾಶ್ವತವಾಗಿ ಋಣಸ್ಥರಾಗಿದ್ದೇವೆ. ನಾವು ಇದನ್ನು ಹಿಂದಿರುಗಿಸುವದಕ್ಕೆ ಆರಂಭವನ್ನಾದರೂ ಮಾಡಬೇಕಾದ ಏಕೈಕ ದಾರಿಯೆಂದರೆ ಇತರರನ್ನು ಪ್ರೀತಿಸುವದರ ಮೂಲಕವೇ. ಕ್ರಿಸ್ತನ ಪ್ರೀತಿಯು ಯಾವಾಗಲೂ ನಮ್ಮದಕ್ಕಿಂತಲೂ ಅಪರಮಿತವಾಗಿ ದೊಡ್ಡದಾಗಿರುತ್ತಾದ್ದರಿಂದ, ನಮಗೆ ನಮ್ಮ ನೆರೆಯವರನ್ನು ಪ್ರೀತಿಸಬೇಕೆಂಬ ಹೊಣೆಗಾರಿಕೆಯು ಇದ್ದೇ ಇರುತ್ತದೆ.[43]

ಪೌಲನು ತನ್ನ ಚರ್ಚೆಯನ್ನು ಮುಂದುವರೆಸುವವನಾಗಿ, ಒಬ್ಬರನ್ನೊಬ್ಬರು ಪ್ರೀತಿಸುವದು ಪ್ರಾಮುಖ್ಯವೆಂಬುದಕ್ಕೆ ಒಂದು ಕಾರಣವನ್ನು ಕೊಡುತ್ತಾನೆ: **ಮತ್ತೊಬ್ಬರನ್ನು ಪ್ರೀತಿಸುವವನು ಧರ್ಮಪ್ರಮಾನವನ್ನೆಲ್ಲಾ ನೆರವೇರಿಸಿದ್ದಾನೆ.** ಆದರೆ ಮೂಲ ವಾಕ್ಯದಲ್ಲಿ, "ಧರ್ಮಶಾಸ್ತ್ರ"ದ ಮುಂದೆ ನಿರ್ದೇಶಕ ಗುಣವಾಚಿ ಇರುವದಿಲ್ಲ; ಆದರೆ 9ನೇ ವಚನದಲ್ಲಿ ಪೌಲನು ಧರ್ಮಶಾಸ್ತ್ರದಿಂದ ಉಲ್ಲೇಖಿಸಿದನು (ವಿಮೋ 20; ಧರ್ಮೋ 5). NASBಯ ಅನುವಾದಕರು ಪ್ರಾಥಮಿಕವಾಗಿ ಅದು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೆಂಬುದನ್ನು ತೋರಿಸುವದಕ್ಕೆ ಅದರ ಮುಂದೆ ನಿರ್ದೇಶಕ ಗುಣವಾಚಿಯನ್ನು ("the") ಸೇರ್ಪಡೆಗೊಳಿಸಿರುತ್ತಾರೆ. "ಮತ್ತೊಬ್ಬರನ್ನು ಪ್ರೀತಿಸುವವನು ಧರ್ಮಪ್ರಮಾಣವನ್ನೆಲ್ಲಾ ನೆರವೇರಿಸಿದ್ದಾನೆ" ಎಂದು ಪೌಲನು ಹೇಳಿದಾಗ, ಆತನು ಮನಸ್ಸಿನಲ್ಲಿ ಇಡೀ ಧರ್ಮಶಾಸ್ತ್ರವನ್ನಿಟ್ಟುಕೊಂಡು ಹೇಳಲಿಲ್ಲ, ಆದರೆ ಒಬ್ಬನು ತನ್ನ ಜೊತೆ ಮನುಷ್ಯನ ಸಂಗಡ ಇಟ್ಟುಕೊಳ್ಳಬೇಕಾದ ಸಂಬಂಧದ ಕುರಿತಾಗಿ ಮಾತಾಡುವ ಭಾಗವನ್ನಷ್ಟೇ ಹೊಂದಿದ್ದನು.

**ವಚನ 9.** ಪೌಲನು ಮನಸ್ಸಿನಲ್ಲಿ ಏನನ್ನು ಹೊಂದಿದ್ದೇನೆಂಬುದನ್ನು ಇನ್ನಷ್ಟು ವಿವರಿಸುತ್ತಾನೆ:

> ಹೇಗಂದರೆ ವ್ಯಭಿಚಾರ ಮಾಡಬಾರದು, ನರಹತ್ಯಮಾಡಬಾರದು, ಕದಿಯಬಾರದು, ಪರರ ಸೊತ್ತನ್ನು ಆಶಿಸಬಾರದು ಈ ಮೊದಲಾದ ಎಲ್ಲಾ ಕಟ್ಟಳೆಗಳು—ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬ ಒಂದೇ ಮಾತಿನಲ್ಲಿ ಅಡಕವಾಗಿವೆ.

ಈ ವಚನವು ದಶಾಜ್ಞೆಗಳಲ್ಲಿನ ನಾಲ್ಕು ಆಜ್ಞೆಗಳನ್ನು ಉಲ್ಲೇಖಿಸುವದರೊಂದಿಗೆ ಆರಂಭಗೊಳ್ಳುತ್ತದೆ, ಅವುಗಳು ವಿಮೋ 20 ಮತ್ತು ಧರ್ಮೋಪದೇಶಕಾಂಡ 5ರಲ್ಲಿ ಸಿಕ್ಕುತ್ತವೆ. ಈ ಆಜ್ಞೆಗಳನ್ನು ಅನೇಕ ಸಾರಿ ಎರಡು ಭಾಗಗಳಾಗಿ ವಿಂಗಡಿಸಲಾಗುತ್ತದೆ:

ಮೊದಲ ನಾಲ್ಕು ಆಜ್ಞೆಗಳು ದೇವರೊಂದಿಗಿನ ಸಂಬಂಧದ ಬಗ್ಗೆ ಮಾತಾಡುತ್ತವೆ, ಮತ್ತು ಕಡೆಯ ಆರು ಆಜ್ಞೆಗಳು ಇತರರೊಂದಿಗಿನ ನಮ್ಮ ಸಂಬಂಧದ ಕುರಿತಾಗಿರುತ್ತವೆ. ಪೌಲನು ನೀಡಿದ ಉದಾಹರಣೆಗಳು ಎರಡನೆಯ ಗುಂಪಿನಿಂದ ತೆಗೆದುಕೊಳ್ಳಲ್ಪಟ್ಟಿವೆ:

ಏಳನೆಯ ಆಜ್ಞೆ: "ವ್ಯಭಿಚಾರ ಮಾಡಬಾರದು" (13:9a; ನೋಡಿರಿ ವಿಮೋ 20:14). ದಶಾಜ್ಞೆಯಲ್ಲಿ, "ವ್ಯಭಿಚಾರ" ಎಂಬುದು ಬಹುಶಃ ಎಲ್ಲಾ ಲೈಂಗಿಕ ಪಾಪಗಳನ್ನೂ ಒಳಗೊಂಡಿರುತ್ತದೆ, ಆದರೆ ಆಜ್ಞೆಯು ವಿಶೇಷವಾಗಿ ಒಬ್ಬನು ಮಾಡಿಕೊಂಡ ವಿವಾಹ ಪ್ರತಿಜ್ಞೆಗಳಲ್ಲಿ ನಂಬಿಗಸ್ತನಾಗಿರುವಿಕೆಯನ್ನು ಸೂಚಿಸುವದಾಗಿದೆ. ಈ ಆಜ್ಞೆಯು ಕುಟುಂಬಕ್ಕೆ ಭದ್ರತೆಯನ್ನು ಒದಗಿಸಿತ್ತು.

ಆರನೆಯ ಆಜ್ಞೆ: "ನರಹತ್ಯ ಮಾಡಬಾರದು" (13:9b; ನೋಡಿರಿ ವಿಮೋ 20:15). "ನರಹತ್ಯ"ಯು ಮತ್ತೊಬ್ಬನ ಪ್ರಾಣವನ್ನು ಇಚ್ಛಾಪೂರ್ವಕವಾಗಿಯೆ ತೆಗೆಯುವದಾಗಿದೆ. ಈ ಆಜ್ಞೆಯು ಪ್ರಾಣಕ್ಕೆ ಭದ್ರತೆಯನ್ನು ಒದಗಿಸುತ್ತದೆ.

ಎಂಟನೆಯ ಆಜ್ಞೆ: "ಕದಿಯಬಾರದು" (13:9c; ನೋಡಿರಿ ವಿಮೋ 20:15). "ಕದಿ" ಎಂಬುದು ಮತ್ತೊಬ್ಬನಿಗೆ ಸೇರಿದ್ದನ್ನು ಆತನ ಅನುಮತಿಯಿಲ್ಲದೆಯೇ ತೆಗೆದುಕೊಳ್ಳುವದನ್ನು ಸೂಚಿಸುತ್ತದೆ. ಈ ಆಜ್ಞೆಯು ಆಸ್ತಿಗೆ ಭದ್ರತೆಯನ್ನು ಒದಗಿಸುತ್ತದೆ.

ಹತ್ತನೆಯ ಆಜ್ಞೆ: "ಆಶಿಸಬಾರದು" (13:9d; ನೋಡಿರಿ ವಿಮೋ 20:17). "ಆಶಿಸು"ವದು ಎಂದರೆ ಮತ್ತೊಬ್ಬನಿಗೆ ಸೇರಿದ ಒಂದನ್ನು ಕುರಿತು ಉತ್ಕಟವಾದ ಬಯಕೆ ಹೊಂದಿರುವದಾಗಿದೆ. ಈ ಆಜ್ಞೆಯು ಹೃದಯಕ್ಕೆ ಭದ್ರತೆಯನ್ನು ಒದಗಿಸುತ್ತದೆ.

ಪೌಲನು ಆಜ್ಞೆಗಳನ್ನು ವಿಮೋ 20ರಲ್ಲಿನ ಕ್ರಮದಂತೆ ಉಲ್ಲೇಖಿಸಲಿಲ್ಲ. ಅಲ್ಲದೆ, ಆತನು ಐದನೆಯ ಹಾಗೂ ಒಂಬತ್ತನೆಯ ಆಜ್ಞೆಗಳನ್ನು ಕೈಬಿಟ್ಟನು: "ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು" ಮತ್ತು "ಮತ್ತೊಬ್ಬನ ಮೇಲೆ ಸುಳ್ಳುಸಾಕ್ಷಿ ಹೇಳಬಾರದು."[44] (ಇವುಗಳು ಮತ್ತು ಇತರ ಆಜ್ಞೆಗಳು 9ನೇ ವಚನದಲ್ಲಿನ "ಈ ಮೊದಲಾದ ಕಟ್ಟಳೆಗಳು" ಎಂಬ ಸಾಮಾನ್ಯ ಪದಗುಚ್ಛದಲ್ಲಿ ಸೇರ್ಪಡೆಗೊಂಡಿರುತ್ತವೆ.) ಪೌಲನು ಈ ಆಜ್ಞೆಗಳನ್ನು ಅನುದ್ದಿಷ್ಟವಾಗಿ (ಸಾಂಧರ್ಭಿಕವಾಗಿ) ಮುಂದಿಡುವ ಮೂಲಕ ತಾನು ದಶಾಜ್ಞೆಗಳನ್ನು ಮರುಸ್ಥಾಪಿಸುವದಕ್ಕೆ ಯತ್ನಿಸುವವನಾಗಿರಲಿಲ್ಲ ಎಂಬುದನ್ನು ಸೂಚಿಸುತ್ತಾನೆ,[45] ಆದರೆ ಬದಲಾಗಿ ಆತನು ಒಂದು ಭಕ್ತಿ ಜೀವನ ನಡಿಸುವ ಕುರಿತು ಪ್ರಜ್ಞೆಯುಳ್ಳ ಬಹುತೇಕ ವ್ಯಕ್ತಿಗಳಿಂದ ಅಂಗೀಕರಿಸಲ್ಪಟ್ಟಿರುವ ನೈತಿಕ ಕಟ್ಟುಪಾಡುಗಳ ಪಟ್ಟಿಯನ್ನು ಮುಂದಿಡುವವನಾಗಿದ್ದನು.

ಈ ಮೊದಲಾದ ಕಟ್ಟಳೆಗಳೆಲ್ಲಾ "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬ ಒಂದೇ ಮಾತಿನಲ್ಲಿ ಅಡಕವಾಗಿವೆ" ಎಂದು ಪೌಲನು ಹೇಳಿದನು (13:9e). ಯೇಸುವಿಗೆ, "ಗುರುವೇ, ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆಯು ಮುಖ್ಯವಾದದ್ದು" ಎಂದು ಕೇಳಿದಾಗ (ಮತ್ತಾಯ 22:36), ಆತನು ಹೀಗೆ ಉತ್ತರಿಸಿದನು,

ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವದಂದರೆ–ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ" (ಮತ್ತಾಯ 22:37-39; ನೋಡಿರಿ ಧರ್ಮೋ 6:5; ಯಾಜ 19:18).

ಈ ವಾಕ್ಯಭಾಗದಲ್ಲಿ ಪೌಲನ ಕಳಕಳಿಯು ಇತರರೊಂದಿಗಿನ ಸಂಬಂಧದ ಕುರಿತಾಗಿತ್ತಾದ್ದರಿಂದ, ಯೇಸುವು "ಎರಡನೆಯ [ಮುಖ್ಯವಾದ ಆಜ್ಞೆ]" ಎಂದು ಹೇಳಿದ ಆಜ್ಞೆಯ ಮೇಲಷ್ಟೆ ಪೌಲನು ಮುಖ್ಯ ಗಮನವನ್ನು ಹರಿಸಿದನು: "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು." "ನೆರೆಯವನು" ಎಂಬುದರ ಅನುವಾದಿತ (πλησίον, *plēsion*) ಪದವು "ಹತ್ತಿರ" (πέλας, *pelas*) ಎಂದ ಪದದಿಂದ ಹುಟ್ಟಿರುವದಾಗಿದೆ.[46] "ನೆರೆಯವನು" ಎಂಬುದರ ಅಕ್ಷರಶಃ ಭಾವಾರ್ಥವೆಂದರೆ "ಹತ್ತಿರದಲ್ಲಿರುವವನು" ಎಂದಾಗುತ್ತದೆ.[47] ಹೇಗೂ, ಒಳ್ಳೇ ಸಮಾರ್ಯದವನ ಸಾಮ್ಯದಲ್ಲಿ, ಯೇಸು "ನೆರೆಯವನು" ಎಂಬುದು ಒಬ್ಬನ ವಾಸಸ್ಥಳದ ಹತ್ತಿರದಲ್ಲಿ ನೆಲೆಸಿರುವವನೆಂದಷ್ಟೇ ಅರ್ಥವಾಗಿರುವದಿಲ್ಲ ಎಂಬುದನ್ನು ಸ್ಪಷ್ಟಗೊಳಿಸಿದನು. ಅದರಲ್ಲಿ ನಮ್ಮ ಸಂಪರ್ಕಕ್ಕೆ ಬರುವಂತಹ ನಿಜವಾಗಿಯೂ ಅಗತ್ಯತೆಯಲ್ಲಿರುವ ಪ್ರತಿಯೊಬ್ಬನು ಸಹ ಸೇರಿರುತ್ತಾನೆ ಎಂದಾಗುತ್ತದೆ (ನೋಡಿರಿ ಲೂಕ 10:25-37).

"ನಿನ್ನಂತೆಯೇ" ಎಂಬ ಮಾತಿನ ತಾತ್ಪರ್ಯವು ನಿಮ್ಮನ್ನು ಪ್ರೀತಿಸಬೇಕೆಂದು ದೇವರು ಆಜ್ಞಾಪಿಸಿದ್ದಾನೆಂಬದಲ್ಲ. ಬದಲಾಗಿ, ನಿಯಮದಂತೆ, ಜನರು ತಮ್ಮನ್ನು ತಾವು "ಪ್ರೀತಿ" (ἀγαπάω, *agapaō*) ಮಾಡಿಕೊಳ್ಳುವದು ನಿಜವೇ ಎಂಬದನ್ನು ಈ ಆಜ್ಞೆಯು ಒಪ್ಪಿಕೊಳ್ಳುತ್ತದೆ ಎಂಬದೆ. ಅಂದರೆ, ಜನರು ತಮ್ಮ ಮೂಲಭೂತ ಅಗತ್ಯತೆಗಳು–ಆಹಾರ, ಬಟ್ಟೆ, ಮತ್ತು ಆಶ್ರಯಗಳಂತಹ–ಸಂಧಿಸಲ್ಪಡುವದನ್ನು ಖಾತ್ರಿಪಡಿಸಿಕೊಳ್ಳಲು ತಮಗೆ ಸಾಧ್ಯವಾದದ್ದನ್ನೆಲ್ಲಾ ಮಾಡುವರು (ಎಫೆಸ 5:29). ಅದೇ ರೀತಿಯಲ್ಲಿಯೇ, ಇತರರ ಬಗ್ಗೆ ಕಳಕಳಿಯಿಂದಿರುವ ಮೂಲಕ ಮತ್ತು ಅವರ ದೈಹಿಕ, ಭಾವಾನಾತ್ಮಕ, ಮತ್ತು ಆತ್ಮೀಕ ಅಗತ್ಯತೆಗಳನ್ನು ಸಂಧಿಸುವದಕ್ಕೆ ಶ್ರಮಿಸುವ ಮೂಲಕ ಅವರನ್ನು ಪ್ರೀತಿಸಬೇಕು (*agapaō*).

**ವಚನ 10.** ಇತರರನ್ನು ಪ್ರೀತಿಸುವ ಕುರಿತಾದ ಚರ್ಚೆಯು ಮುಂದುವರೆದಂತೆ, "ಪ್ರೀತಿಯು ಒಬ್ಬ ನೆರೆಯವನಿಗೆ ಒಳಿತನ್ನು ಮಾಡುತ್ತದೆ" ಎಂಬದಾಗಿ ಓದುತ್ತೇವೆಂದು ನಿರೀಕ್ಷಿಸಬಹುದು. ಬದಲಾಗಿ, ಪೌಲನು ಹೇಳಿದ್ದೇನೆಂದರೆ, **ಪ್ರೀತಿಯು ಮತ್ತೊಬ್ಬರಿಗೆ ಯಾವ ಕೇಡನ್ನೂ**[48] **ಮಾಡುವದಿಲ್ಲ.** ಆತನು ಧನಾತ್ಮಕದ ಬದಲಾಗಿ ನಿಷೇಧಾರ್ಥಕವನ್ನು ಏಕೆ ಉಪಯೋಗಿಸಿದನು? ಬಹುಶಃ ಆತನು ಆಗಷ್ಟೆ ಪಟ್ಟಿ ಮಾಡಿದ್ದ ಎಲ್ಲಾ ನಾಲ್ಕು ಆಜ್ಞೆಗಳು ಸಹ ನಿಷೇದಾರ್ಥಕದಿಂದ ಕೂಡಿದ್ದವು ಎಂಬ ಕಾರಣಕ್ಕಾಗಿ ಇರಬಹುದು: "ವ್ಯಭಿಚಾರ ಮಾಡ*ಬಾರದು*, ನರಹತ್ಯ ಮಾಡ*ಬಾರದು*, ಕದಿಯ*ಬಾರದು*, ಆಶಿಸ*ಬಾರದು"* (ಒತ್ತಿ ಹೇಳಿದ್ದು ನನ್ನದು). ನಾವು ಪ್ರೀತಿಸತಕ್ಕ ರೀತಿಯಲ್ಲಿ ಪ್ರೀತಿಸುವದಾದಲ್ಲಿ, ಈ ಎಲ್ಲಾ ಆಜ್ಞೆಗಳನ್ನು–ಮತ್ತು ಜೊತೆ ಮನುಷ್ಯನ ಕುರಿತಾದ ಇತರ ಯಾವದೇ ಆಜ್ಞೆಗಳನ್ನು–

ಕೈಕೊಂಡು ನಡೆಯುವೆವು. ಈ ಕಾರಣಕ್ಕಾಗಿಯೇ, ಪೌಲನು **ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ** ಎಂದು ಹೇಳಿದನು.

ಪೌಲನು 10ನೇ ವಚನದಲ್ಲಿ ಏನನ್ನು ಹೇಳ*ಲಿಲ್ಲ* ಎಂಬದರ ಬಗ್ಗೆ ಸ್ಪಷ್ಟವಾಗಿ ತಿಳಿಯೋಣ. ಆತನು "ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ" ಯಾದ್ದರಿಂದ, ಇನ್ನು ನಮಗೆ ದೇವರ ಕಟ್ಟಳೆಗಳ ಅಗತ್ಯವಿಲ್ಲ ಎಂಬದಾಗಿ ಆತನು ಹೇಳ*ಲಿಲ್ಲ*. ಸ್ವಲ್ಪ ಕಾಲದ ಹಿಂದೆ, ಈ ಘೋಷವಾಕ್ಯದೊಂದಿಗೆ ಒಂದು ಆಂದೋಲನ ನಡೆದಿತ್ತು: "ಪ್ರೀತಿಯೇ ಏಕೈಕ ಧರ್ಮಪ್ರಮಾಣ." ಈ ಆಂದೋಲನದಲ್ಲಿದ್ದವರು ತಮ್ಮನ್ನು ಎಲ್ಲಾ ಸಿದ್ಧಾಂತಿಕ ಹಾಗೂ ನೈತಿಕವಾದ ಬೈಬಲ್ ಆಜ್ಞೆಗಳಿಂದ ವಿಮುಕ್ತರೆಂದು ಘೋಷಿಸಿಕೊಂಡರು. ಪುನಃ, ಪೌಲನ ಉದ್ದೇಶವು ದೇವರಿಂದ ಕೊಡಲ್ಪಟ್ಟಿದ್ದ ಪ್ರತಿಯೊಂದು ಆಜ್ಞೆಯನ್ನು ಕೊನೆಗಾಣಿಸುವದಾಗಿರಲಿಲ್ಲ. ಅಂಥ ನಿರ್ಣಯಕ್ಕೆ ಬರುವದು ಪೌಲನು ರೋಮಾ 12-16 ಅಧ್ಯಾಯಗಳಲ್ಲಿ ಹೇಳಿದ್ದನ್ನು ನಿರರ್ಥಕಗೊಳಿಸಿದಂತಾಗುತ್ತದೆ. Stottನು ಅದನ್ನು ಈ ರೀತಿಯಾಗಿ ವಿವರಿಸುತ್ತಾನೆ:

> ಒಂದು ವಸ್ತುನಿಷ್ಠ ನೈತಿಕ ಮಾನದಂಡವಿಲ್ಲದೆಯೇ ಪ್ರೀತಿಯು ತನ್ನಷ್ಟಕ್ಕೆ ತಾನೇ ನಿಭಾಯಿಸಲಾರದು. ಆ ಕಾರಣದಿಂದಲೇ ಪೌಲನು 'ಪ್ರೀತಿಯಿಂದಲೇ ಧರ್ಮಪ್ರಮಾಣದ ಅಂತ್ಯ' ಎಂದಲ್ಲ ಆದರೆ 'ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ' ಎಂದು ಬರೆದನು. ಯಾಕೆಂದರೆ ಪ್ರೀತಿ ಮತ್ತು ಧರ್ಮಪ್ರಮಾಣಗಳು ಪರಸ್ಪರರ ಅಗತ್ಯತೆಯಲ್ಲಿರುತ್ತವೆ. ಪ್ರೀತಿಗೆ ತನ್ನ ಮಾರ್ಗದರ್ಶನಕ್ಕೆ ಧರ್ಮಪ್ರಮಾಣಕ್ಕೆ ಅಗತ್ಯವಾಗಿದ್ದರೆ, ಧರ್ಮಪ್ರಮಾಣಕ್ಕೆ ಅದರ ಸ್ಫೂರ್ತಿಗೋಸ್ಕರ ಪ್ರೀತಿಯ ಅಗತ್ಯವಿರುತ್ತದೆ.[49]

ನಮಗೆ ಇನ್ನು ಮೇಲೆ ದೇವರ ಕಟ್ಟಳೆಗಳ (ಹೊಸ ಒಡಂಬಡಿಕೆಯಲ್ಲಿರುವಂತಹ) ಅಗತ್ಯವಿಲ್ಲ ಎಂದು ಪೌಲನು ಹೇಳಿದನೋ? ಇಲ್ಲವಾದರೆ, ಆತನು ಬೇರೆ ಇನ್ನೇನನ್ನು ಹೇಳುವವನಾ*ಗಿದ್ದನು*? ಈಗಾಗಲೇ ತಿಳಿಸಿರುವ ಪ್ರಕಾರ, ಆತನು 9ನೇ ವಚನದಲ್ಲಿ ಪಟ್ಟಿ ಮಾಡಲಾಗಿರುವ ಆಜ್ಞೆಗಳನ್ನೆಲ್ಲಾ ಕೈಕೊಂಡು ನಡೆಯುವಂತೆ (ನೆರವೇರಿಸುವಂತೆ) ಪ್ರೀತಿಯು ನಮ್ಮನ್ನು ಸ್ಫೂರ್ತಿಗೊಳಿಸುತ್ತದೆ ಎಂದು ಆತನ ತಾತ್ಪರ್ಯವಾಗಿತ್ತು. ಒಬ್ಬನು ಸಹೋದರನನ್ನು ಪ್ರೀತಿಸುವದಾದರೆ, ಆತನು ಅವನಿಗೆ ಯಾವ ಕೇಡನ್ನೂ ಮಾಡುವದಿಲ್ಲ— ಮತ್ತು ಖಂಡಿತವಾಗಿಯೂ ಆತನ ಹತ್ಯೆಯನ್ನಂತೂ ಮಾಡುವದಿಲ್ಲ. ಇತರರನ್ನು ಪ್ರೀತಿಸುವವನು ಅವರಿಂದ ಕದಿಯುವದಿಲ್ಲ. ಇತರ ಜನರಿಗೆ ಒಳ್ಳೇ ಕಾರ್ಯಗಳು ಸಂಭವಿಸುವಾಗ ಆತನು ಸಂತೋಷ ಪಡುವನು ಮತ್ತು ಅವರಲ್ಲಿರುವದನ್ನು ಆಶಿಸುವದಿಲ್ಲ.

ನಾವು ಇದನ್ನು ಸಹ ಹೇಳಬೇಕಾಗುತ್ತದೇನೆಂದರೆ ಪ್ರೀತಿ ಮಾಡುವ ಒಬ್ಬ ವ್ಯಕ್ತಿಯು ದೇವರ ವಿಷಯದಲ್ಲಿ ಮತ್ತು ಇತರರ ವಿಷಯದಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾನೆಂಬುದನ್ನು ಕಲಿಸುವದಕ್ಕಾಗಿ ದೇವರು ಜನರಿಗೆ ಕಟ್ಟಳೆಗಳನ್ನು ನೀಡಿದನು ಎಂಬದೇ. ಆದುದರಿಂದ, ಒಬ್ಬ ವ್ಯಕ್ತಿಯು ಪ್ರೀತಿಸುವದನ್ನು ಕಲಿಯುವಾಗ, ಆತನು ದೇವರ ಧರ್ಮಪ್ರಮಾಣದ ಆ ಅತ್ಯಂತ ಮುಖ್ಯವಾದ ಉದ್ದೇಶವನ್ನು ನೆರವೇರಿಸುವವನಾಗಿದ್ದಾನೆ.

## ಒಂದು ಸಾರಾಂಶ (13:11-14)

**[11]ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗತಕ್ಕ ಕಾಲವೆಂದು ಅರಿತು ಇದನ್ನೆಲ್ಲಾ ಮಾಡಿರಿ. ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ವಿಮೋಚನೆಯು ಹತ್ತಿರವಾಯಿತು. [12]ಇರುಳು ಬಹಳ ಮಟ್ಟಿಗೆ ಕಳೆಯಿತು; ಹಗಲು ಸಮೀಪವಾಯಿತು. ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ. [13]ದುಂದೌತಣ ಕುಡಿಕತನಗಳಲ್ಲಿಯಾಗಲಿ ಕಾಮ ವಿಲಾಸ ನಿರ್ಲಜ್ಜಾಕೃತ್ಯಗಳಲ್ಲಿಯಾಗಲಿ ಜಗಳ ಹೊಟ್ಟೇಕಿಚ್ಚುಗಳಲ್ಲಿಯಾಗಲಿ ಕಾಲಕಳೆಯದೆ ಹಗಲು ಹೊತ್ತಿಗೆ ತಕ್ಕಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ. [14]ದೇಹದ ಆಶೆಗಳನ್ನು ಪೂರೈಸುವದಕ್ಕಾಗಿ ಚಿಂತಿಸದೆ ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ.**

ನಾವು 12:1ರಲ್ಲಿ ಆರಂಭವಾದ ಕ್ರೈಸ್ತ ಜೀವನದ ಕುರಿತಾದ ಅಭ್ಯಾಸ ವಿಭಾಗದ ಅಂತ್ಯಕ್ಕೆ ಬಂದಿದ್ದೇವೆ. ಈ ಸಾರಾಂಶದಲ್ಲಿ (13:11-14), ಪೌಲನು ತನ್ನ ವಾಚಕರಿಗೆ ರಾತ್ರಿಯ ಕತ್ತಲೆಯಲ್ಲಿ ಜೀವಿಸುವದರ ಬಲದಾಗಿ, ಎಚ್ಚರಗೊಳ್ಳಿರಿ ಮತ್ತು ಹಗಲಿನ ಬೆಳಕಿನಲ್ಲಿ ಜೀವಿಸಿರಿ ಎಂದು ಬುದ್ಧಿವಾದ ಹೇಳುತ್ತಾನೆ. ಅವರು ಕರ್ತನ ಪುನರಾಗಮನವನ್ನು ಎದುರುನೋಡುವವರಾಗಿ ಕಾಯುತ್ತಾ, ತಮ್ಮ ಕ್ರಿಸ್ತನಂಬಿಕೆಯನ್ನು ಕಾರ್ಯರೂಪದಲ್ಲಿ ಜೀವಿಸುವವರಾಗಿ ಇರಬೇಕಾಗಿತ್ತು.

**ವಚನ 11.** ಪೌಲನು ಒಬ್ಬ ಅಪ್ಪ ಅಥವಾ ಅಮ್ಮ ಮಗುವನ್ನು ನಿದ್ದೆಯಿಂದ ಎಬ್ಬಿಸಿ ಆತನಿಗೆ ಆ ದಿನಕ್ಕಾಗಿ ಸಲಹಾಸೂಚನೆಗಳನ್ನು ಕೊಡುವ ಸಾದೃಶ್ಯವನ್ನು ಉಪಯೋಗಿಸಿದನು. ವಿಭಾಗವು ಈ ಮಾತುಗಳೊಂದಿಗೆ ಆರಂಭಗೊಳ್ಳುತ್ತದೆ: **ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗತಕ್ಕ ಕಾಲವೆಂದು ಅರಿತು ಇದನ್ನೆಲ್ಲಾ ಮಾಡಿರಿ.**

"ಇದನ್ನೆಲ್ಲಾ ಮಾಡಿರಿ" ಎಂಬ ಪದವು ಹಿಂದೆ ಹೇಳಿದ ಮತ್ತು ಮುಂದೆ ಹೇಳಲಿರುವದನ್ನು ತೋರಿಸುವದಾಗಿದೆ. ಅದು ಈಗಷ್ಟೆ ಪ್ರೀತಿಸಬೇಕೆಂದು ಕೊಡಲಾದ ಕರೆಯನ್ನು ಸೂಚಿಸಬಹುದಾಗಿದೆ (13:8-10), ಅಥವಾ ಪೌಲನು 12ನೇ ಅಧ್ಯಾಯದ ಆರಂಭದಿಂದಲೂ ಹೇಳಿರುವಂಥ ಎಲ್ಲವನ್ನೂ ಸೂಚಿಸಬಹುದಾಗಿದೆ. ಅಲ್ಲದೆ ಭಕ್ತಿಜೀವನಗಳನ್ನು ನಡಿಸುವ ಕುರಿತಾಗಿ ಅಪೊಸ್ತಲನು ಮುಂದೆ ಹೇಳಲಿದ್ದ ವಿಷಯವನ್ನು ಸಹ ಸೂಚಿಸಬಹುದಾಗಿದೆ (13:11-14).

ವ್ಯಾಖ್ಯಾನಕಾರರು ಒಂದು ನಿರ್ದಿಷ್ಟವಾದ "ಕಾಲ"ವನ್ನು ಗುರುತಿಸುವದಕ್ಕೆ ಪ್ರಯತ್ನಗಳನ್ನು ಮಾಡಿದ್ದಾರೆ. ನಿರೋ ಕ್ರೈಸ್ತರನ್ನು ಹಿಂಸಿಸಿದ ಕಾಲದಿಂದ (ಕ್ರಿ.ಶ 64) ಯೆರೂಸಲೇಮಿನ ನಾಶನದ ಕಾಲದ (ಕ್ರಿ.ಶ. 70) ವರೆಗಿನ ಅಂತರದಲ್ಲೆಲ್ಲೋ ಎಂದು ಊಹಾಕಲ್ಪನೆಗಳನ್ನು ಮಾಡಲಾಗಿರುತ್ತದೆ. ಪದಗುಚ್ಛವನ್ನು ಬೇಕೆಂದೇ ಅಸ್ಪಷ್ಟವಾಗಿ ಬಿಡಲಾಗಿದೆ, ಹೀಗೆ ಆ ಮಾತುಗಳು ಪೌಲನ ದಿನದಲ್ಲಿದ್ದ ರೀತಿಯಲ್ಲಿಯೇ ಈ ದಿನಗಳಿಗೆ ಸಹ ಯುಕ್ತವಾಗಿರುತ್ತವೆ. ಆತ್ಮೀಕವಾಗಿ ನಿದ್ರಿಸುವ ಕುರಿತಾಗಿ ನೋಡುವದಾದರೆ, ನಾವು ಅತಿ ಶೀಘ್ರದಲ್ಲಿ ಎಚ್ಚರವಾಗಲಾರೆವು ಮತ್ತು ತಡವಾಗಿಯಾಗಲಿ ಎಚ್ಚರಗೊಳ್ಳುವದಕ್ಕೆ ಧೈರ್ಯಮಾಡದಿರೋಣ. "ಎಚ್ಚರವಾಗತಕ್ಕ" "ಕಾಲವು" ಯಾವಾಗಲೂ *ಈಗ* ಆಗಿರುತ್ತದೆ. ಒಬ್ಬ ತಂದೆಯು ನಿದ್ದೆಯಲ್ಲಿರುವ ತನ್ನ ಮಗನನ್ನು ದೊಡ್ಡ ಸ್ವರದಲ್ಲಿ, "ಸಮಯವಾಯಿತು,

ಎದ್ದೇಳಪ್ಪಾ!" ಎಂದು ಹಾಸಿಗೆಯನ್ನು ಅಲುಗಾಡಿಸುವ ದೃಶ್ಯವನ್ನು ಒಬ್ಬನು ಕಲ್ಪಿಸಿಕೊಳ್ಳಬಹುದು.

ಪೌಲನು ಮುಂದುವರೆದು ಹೇಳುತ್ತಾನೆ, **ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ವಿಮೋಚನೆಯು ಹತ್ತಿರವಾಯಿತು.** "ವಿಮೋಚನೆಯು" ಎಂಬುದು ಕರ್ತನು ಹಿಂದಿರುಗಿ ಬಂದು ನಮ್ಮನ್ನು ಆತನ ಸಂಗಡ ಪರಲೋಕದಲ್ಲಿರುವದಕ್ಕೆ ಕರೆದೊಯ್ಯುವ ಅಂತಿಮ ರಕ್ಷಣೆಯನ್ನು ಸೂಚಿಸುತ್ತದೆ (ನೋಡಿರಿ 1 ಪೇತ್ರ 1:5). ಕರ್ತನು ಹಿಂದಿರುಗಿ ಬರುವಾಗ ನಾವು ಈ ವಿಮೋಚನೆಯನ್ನು ಹೊಂದುತ್ತೇವಾದ್ದರಿಂದ (ಇಬ್ರಿಯ 9:28), ಅದು "ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ . . . ಹತ್ತಿರವಾಯಿತು." "ನಾವು ಮೊದಲು ನಂಬಿದ" ಎಂಬುದು ನಾವು ಕ್ರೈಸ್ತರಾದ ಸಮಯವನ್ನು ಸೂಚಿಸುತ್ತದೆ. ನಾವು ನಂಬಿಕೆಯಲ್ಲಿ ಮುಂದುವರೆಯುವದರಿಂದ, ಕೆಲವು ತರ್ಜುಮೆಗಳು "ಮೊದಲು" ಎಂಬ ಪದವನ್ನು ಸೇರ್ಪಡೆಗೊಳಿಸಿರುತ್ತವೆ: "ನಾವು ಕ್ರಿಸ್ತನನ್ನು *ಮೊದಲು* ನಂಬಿದ ಕಾಲದಲ್ಲಿ" (NIV; RSV; ಒತ್ತಿ ಹೇಳಿದ್ದು ನನ್ನದು). ಪೌಲನು ಅವರ ಸ್ಮರಣಶಕ್ತಿಗೆ (ಅವರು ಮೊದಲ ಬಾರಿಗೆ ಕ್ರಿಸ್ತನನ್ನು ನಂಬಿದ್ದನ್ನು ನೆನಪಿಗೆ ತರುತ್ತಿದ್ದಾನೆ) ಮತ್ತು ಅವರು ನಿರೀಕ್ಷೆಗೆ (ಬರಲಿರುವ ಅವರ ರಕ್ಷಣೆಯನ್ನು ಎದುರುನೋಡುವಿಕೆ) ನಿವೇದಿಸಿಕೊಳ್ಳುತ್ತಿದ್ದಾನೆ. Bell ಇದನ್ನು ಪೌಲನ "ತಳ್ಳು ಮತ್ತು ಎಳೆ" ಉತ್ತೇಜನ ಎಂದು ಕರೆಯುತ್ತಾನೆ.[50] ಪೌಲನ ಮಾತುಗಳಲ್ಲಿ ಸೂಚ್ಯಾರ್ಥವಾಗಿರುವದೇನೆಂದರೆ ಆತನ ವಾಚಕರು ಎಚ್ಚರವಾಗುವ ಅಗತ್ಯವಿದೆ ಯಾಕೆಂದರೆ ಕ್ರಿಸ್ತನು ಯಾವ ಗಳಿಗೆಯಲ್ಲಾದರೂ ಬರಬಹುದಾಗಿದೆ. ಅವರು ಆತ್ಮೀಕವಾಗಿ ನಿದ್ದೆಯಲ್ಲಿರುವದಾದರೆ, ಅವರು ಆತನ ಪುನರಾಗಮನಕ್ಕೆ ಸಿದ್ಧರಾಗಿರುವದಿಲ್ಲ.

ಕರ್ತನ ಪುನರಾಗಮನವು ಯಾವಾಗ ಸಂಭವಿ*ಸುವದು*? ಯೇಸು ಹೀಗೆ ಹೇಳಿದನು, "ಇದಲ್ಲದೆ ಆ ದಿನ ವಿಷಯವಾಗಲಿ ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು; ಮಗನಿಗೂ ತಿಳಿಯದು" (ಮಾರ್ಕ 13:32). ಪೌಲನಿಗೆ ನಿಖರವಾದ ಕಾಲವು ಗೊತ್ತಿರಲಿಲ್ಲ, ಆದರೆ ಆತನಿಗೆ ಇದಂತೂ ಗೊತ್ತಿತ್ತು: ವಾಚಕರು ದೀಕ್ಷಾಸ್ನಾನ ಮಾಡಿಸಿಕೊಂಡ ಕಾಲದಲ್ಲಿ ಇದ್ದದ್ದಕ್ಕಿಂತಲೂ ಈಗ ಅದು ಹತ್ತಿರವಾಗಿರುತ್ತದೆ.[51] ಅಪೊಸ್ತಲನ ಕಾಲದಲ್ಲಿ ಅದು ಸತ್ಯವಾಗಿದ್ದಿದ್ದರೆ, ನಮ್ಮ ದಿನಗಳಲ್ಲಿ ಅದು ಇನ್ನು ಎಷ್ಟೋ ಸತ್ಯವಾಗಿರುವದಲ್ಲವೇ! ಪೌಲನು ರೋಮಾಪುರದವರಿಗೆ ಪತ್ರಿಕೆಯನ್ನು ಬರೆದ ಕಾಲದಲ್ಲಿದ್ದಕ್ಕಿಂತ ಈಗ ಎರಡನೆಯ ಬರೋಣವು ಸುಮಾರು ಎರಡು ಸಾವಿರ ವರ್ಷಗಳಷ್ಟು ಹತ್ತಿರವಾಗಿರುತ್ತದೆ!

ಕರ್ತನ ಬರೋಣವು "ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ . . . ಹತ್ತಿರವಾಯಿತು" ಆದ್ದರಿಂದ, ಕ್ರೈಸ್ತರು ಮಾಡಬೇಕೆಂದು ಮುಂಬರುವ ವಚನಗಳಲ್ಲಿ ಪೌಲನು ಆಜ್ಞಾಪಿಸಿರುವದನ್ನೆಲ್ಲಾ ನಾವು ಮಾಡತಕ್ಕದ್ದು—ಮತ್ತು ಅಲ್ಲದೆ ನಾವು ಆತನು ಮುಂಚೆ ನೀಡಿದ ಬೋಧನೆಗೆ ಸಹ ನಾವು ಕಿವಿಗೊಡಬೇಕು. "ಇದನ್ನೆಲ್ಲಾ ಮಾಡಿರಿ" ಎಂಬುದು 12:1 ರಿಂದ 13:14 ವರೆಗಿನ ಎಲ್ಲವನ್ನೂ ಸೂಚಿಸಬಹುದಾಗಿದೆ.

ಕರ್ತನು ಹಿಂದಿರುಗಿ ಬರುವನು ಎಂಬ ವಾಸ್ತವಾಂಶವು ಮೊದಲ—ಶತಮಾನದ

ಕ್ರೈಸ್ತರ ಮನಸ್ಸುಗಳಲ್ಲಿ ನಿರಂತರವಾಗಿ ಹರಿದಾಡುತ್ತಿತ್ತು. ಅವರು "ಮಾರಾನಾಥ" ಎಂದು ಕೂಗುತ್ತಿದ್ದರು (1 ಕೊರಿಂಥ 16:22), ಅದು ಅರಾಮಿಕ್ ಭಾಷೆಯ ಒಂದು ಪದವಾಗಿದ್ದು ಅದರರ್ಥವು "ಓ. ಕರ್ತನೇ, ಬಾ!" ಎಂದಾಗಿರುತ್ತದೆ. ಅವರು ಅತ್ಯುತ್ಸಾಹದಿಂದ "ಕರ್ತನಾದ ಯೇಸುವೇ, ಬಾ" ಎಂದು ಪ್ರಾರ್ಥಿಸುತ್ತಿದ್ದರು (ಪ್ರಕಟನೆ 22:20). ಅವರು ಏನೇ ಕೆಲಸ ಮಾಡುತ್ತಿದ್ದರೂ, ಅದನ್ನು ನಿಲ್ಲಿಸಿ ಆಗಾಗ್ಗೆ ಆಕಾಶವನ್ನೊಮ್ಮೆ ನೋಡುತ್ತಿದ್ದರು ಎಂದು ಹೇಳಲಾಗುತ್ತದೆ. ಅಂತೂ, ಯೇಸು ತಾನು "ಬಹು ಬಲದಿಂದಲೂ ಮಹಿಮೆಯಿಂದಲೂ ಮೇಘಗಳಲ್ಲಿ" ಬರುವನು ಎಂದು ಹೇಳಿದ್ದನ್ನಷ್ಟೆ (ಮಾರ್ಕ 13:26; ನೋಡಿರಿ ಮತ್ತಾಯ 24:30; 26:64; ಮಾರ್ಕ 14:62; 1 ಥೆಸಲೋನಿಕ 4:17; ಪ್ರಕಟನೆ 1:7). ಎರಡನೆಯ ಬರೋಣದ ಖಚಿತತೆಯು ಆದಿ ಕ್ರೈಸ್ತರಿಗೆ ಒಂದು ಬಲವಾದ ಪ್ರೇರಕವಾಗಿತ್ತು. ಅಲ್ಲದೆ ಅದು ನಮಗೂ ಸಹ ನಾವು ಏನಾಗಿರತಕ್ಕದ್ದೋ ಅದಾಗಿರುವಂತೆಯೂ ನಾವು ಏನು ಮಾಡತಕ್ಕದ್ದೋ ಅದನ್ನು ಮಾಡುವವರಾಗುವಂತೆಯೂ ಒಂದು ಬಲವಾದ ಪ್ರೇರಕವಾಗಿರಬೇಕು.

**ವಚನ 12.** ಪೌಲನು "ಎಚ್ಚರವಾಗತಕ್ಕ" ಅಗತ್ಯತೆಯ ಕುರಿತು ಒತ್ತು ಕೊಡುವಿಕೆಯನ್ನು ಮುಂದುವರೆಸುತ್ತಾನೆ: **ಇರುಳು ಬಹಳ ಮಟ್ಟಿಗೆ ಕಳೆಯಿತು; ಹಗಲು ಸಮೀಪವಾಯಿತು.** ವ್ಯಾಖ್ಯಾನಕಾರರು "ಇರುಳು" ಮತ್ತು "ಹಗಲು"ಗಳ ಅರ್ಥನಿರೂಪಣೆ ಮಾಡುವದರಲ್ಲಿ ಅತ್ಯಂಥ ಸೃಜನಶೀಲತೆಯನ್ನು ಪ್ರದರ್ಶಿಸುತ್ತಾರೆ,[52] ಆದರೆ ಪೌಲನು ಬಹುಶಃ ತನ್ನ ಸಾದೃಶ್ಯವನ್ನು ಮುಂದುವರೆಸುವನಾಗಿದ್ದನಷ್ಟೆ ಎಂದು ತೋರುತ್ತದೆ. ಆ ಪರಿಭಾಷೆಯ ಅರ್ಥವು ಕೇವಲ ಎಚ್ಚರಗೊಂಡು ಕೆಲಸದಲ್ಲಿ ನಿರತರಾಗುವದಕ್ಕೆ ಸಮಯವಾಗಿದೆ ಎಂದಷ್ಟೆ ಅರ್ಥವನ್ನು ಹೊಂದಿರುತ್ತದೆ. ನಮ್ಮ ಗಮನವು ಪುನಃ ತಂದೆಯು ನಿದ್ದೆಯಲ್ಲಿರುವ ತನ್ನ ಮಗನ ಹಾಸಿಗೆಯನ್ನು ಅಲುಗಾಡಿಸುತ್ತಾ "ಸಮಯವಾಯಿತು, ಎದ್ದೇಳಪ್ಪಾ!" ಎಂದು ಹೇಳುವ ಸಾದೃಶ್ಯಕ್ಕೆ ಹಿಂದಿರುಗುತ್ತದೆ. ಮಗನು ಹೊದಿಕೆಯನ್ನು ತಲೆಯ ಮೇಲೆ ಎಳೆದುಕೊಳ್ಳುತ್ತಾ, "ಓ, ಅಪ್ಪಾ, ನನಗೆ ಇನ್ನು ಐದು ನಿಮಿಷಗಳ ವರೆಗೆ ನಿದ್ರಿಸಲು ಬಿಡು" ಎಂದು ಹೇಳುವ ಚಿತ್ರಣವನ್ನು ನಾವು ಕಲ್ಪಿಸಿಕೊಳ್ಳಬಹುದು. ತಂದೆಯು ಅದಕ್ಕೆ, "ಇನ್ನು ಒಂದು ಸೆಕೆಂಡು ಸಹ ಕೊಡುವದಿಲ್ಲ! ಈಗ ಸಮಯವಾಗಿದೆ, ಎದ್ದೇಳು!" ಎಂದು ಪ್ರತ್ಯುತ್ತರ ನೀಡುತ್ತಾನೆ. ಪೌಲನು ಹೇಳುವ ಮಾತುಗಳ ತಾತ್ಪರ್ಯವು ಅದೇ ಆಗಿತ್ತು.

ಒಮ್ಮೆ ನಾವು ಎಚ್ಚರಗೊಂಡೆವೆಂದರೆ, ಮುಂದೆ ನಾವು ಏನು ಮಾಡತಕ್ಕದ್ದು? ನಂತರ, ನಾವು ಬಟ್ಟೆಯನ್ನು ಧರಿಸಿಕೊಂಡು ಸಿದ್ಧರಾಗಬೇಕೆಂದು ಪೌಲನು ಹೇಳುತ್ತಾನೆ: **ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ.** ಒಬ್ಬನು ಬಟ್ಟೆಗಳನ್ನು ತೆಗೆದು ಬಿಟ್ಟು ಹೊಸ ಬೇರೆ ಬಟ್ಟೆಯನ್ನು ಧರಿಸಿಕೊಳ್ಳುವ ರೀತಿಯಲ್ಲಿ ಪೌಲನು ಅನೇಕ ಸಾರಿ "ತೆಗೆದು ಬಿಟ್ಟು" ಮತ್ತು "ಧರಿಸಿಕೊಂಡು" ಎಂಬ ಸಾದೃಶ್ಯಗಳನ್ನು ಉಪಯೋಗಿಸುತ್ತಾನೆ (ನೋಡಿರಿ ಎಫೆಸ 4:22-24; ಕೊಲೊಸ್ಸೆ 3:8-14). 12ನೇ ವಚನದಲ್ಲಿ, ತತ್ಪರಿಣಾಮವಾಗಿ, ನಾವು ನಮ್ಮ ಮಲಗುವ ಉಡುಪುಗಳನ್ನು ತೆಗೆದು ಬಿಟ್ಟು ಹಗಲಿನ ಕೆಲಸಗಳಿಗೆ ಸೂಕ್ತವಾದಂಥ ಉಡುಪುಗಳನ್ನು ಧರಿಸಿಕೊಳ್ಳಬೇಕೆಂದು ನಮಗೆ ಕರೆ ಕೊಡಲಾಗಿರುತ್ತದೆ.

"ಕತ್ತಲೆಗೆ ಅನುಗುಣವಾದ ಕೃತ್ಯಗಳು" ಎಂಬ ಪದಗುಚ್ಛವು ಪಾಪ ಕೃತ್ಯಗಳನ್ನು

ಸೂಚಿಸುತ್ತದೆ. ಅವುಗಳು "ಕತ್ತಲೆಗೆ ಅನುಗುಣವಾದ ಕೃತ್ಯಗಳೆಂದು" ಕರೆಯಲ್ಪಟ್ಟಿವೆ ಯಾಕೆಂದರೆ ಅವುಗಳು ಬಹುತೇಕ ರಾತ್ರಿಯಲ್ಲಿ ಅಥವಾ ಕತ್ತಲೆಯ ಮರೆಯಲ್ಲಿ ಮಾಡಲ್ಪಡುವಂತಹ ಕೃತ್ಯಗಳಾಗಿರುತ್ತವೆ (ನೋಡಿರಿ ಯೋಹಾನ 3:19; 1 ಥೆಸಲೋನಿಕ 5:7). ಪೌಲನು *ಕ್ರೈಸ್ತರಿಗೆ* ಈ ಮಾತುಗಳನ್ನು ಹೇಳುತ್ತಿದ್ದಾನೆಂಬುದನ್ನು ಮರೆಯಬೇಡಿರಿ. ಕ್ರೈಸ್ತರು ಎಂದಾದರೂ ಅನೈತಿಕತೆಯಲ್ಲಿ ತೊಡಗಿದ ಅಪರಾಧಕ್ಕೊಳಗಾದವರೋ? ಹೌದು, ಅಪರಾಧಕ್ಕೊಳಗಾದವರೇ—ಮತ್ತು ಅವರು ಹಾಗೆ ಮಾಡುವಾಗ, ಅವರಿಗೆ ಕರೆ ಕೊಡುವದು ಅಗತ್ಯವಿರುತ್ತದೆ: "ಆ ಭಕ್ತಿಹೀನತೆಯನ್ನು ನಿಮ್ಮ ಜೀವನದೊಳಗಿಂದ ಕಿತ್ತು ಹಾಕಿರಿ! ಅದನ್ನು ತೊಲಗಿಸಿಕೊಳ್ಳಿರಿ!" Phillips ತರ್ಜುಮೆಯಲ್ಲಿ ಹೀಗಿದೆ, "ಮನುಷ್ಯರು ಕತ್ತಲೆಯಲ್ಲಿ ಮಾಡುವಂಥದ್ದನ್ನು ದೂರಕ್ಕೆ ಬಿಸಾಡಿರಿ."

ಖಂಡಿತವಾಗಿಯೂ, ರಾತ್ರಿಯ ಉಡುಪುಗಳನ್ನು ತೆಗೆದು ಹಾಕಿಬಿಟ್ಟರೆ ಸಾಕಾಗುವದಿಲ್ಲ; ನಾವು ಹಗಲಿನಲ್ಲಿ ಹಾಕಿಕೊಳ್ಳುವ ಉಡುಪುಗಳನ್ನು ಸಹ ಧರಿಸಿಕೊಳ್ಳಬೇಕಾಗಿರುತ್ತದೆ. ಪೌಲನು "ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ" ಎಂದು ಹೇಳುತ್ತಾನೆ. "ಆಯುಧ" ಎಂದು (ὅπλον, *hoplon ಎಂಬುದರಿಂದ*) ಅನುವಾದಿಸಲ್ಪಟ್ಟಿರುವ ಪದವು, ತನ್ನ ಬಹುವಚನ ರೂಪದಲ್ಲಿ "ಯುದ್ಧಾಯುಧಗಳು" ಎಂಬುದನ್ನು ಸೂಚಿಸುತ್ತದೆ.[53] ಪತ್ರಿಕೆಯ ಆರಂಭದಲ್ಲಿ "ದುಷ್ಟತ್ವವನ್ನು ನಡಿಸುವ ಸಾಧನಗಳು" ಮತ್ತು "ನೀತಿಕೃತ್ಯಗಳನ್ನು ನಡಿಸುವ ಸಾಧನಗಳು" ಎಂಬ ಪದಗುಚ್ಛಗಳಲ್ಲಿ ಇದೇ ಪದವು ಉಪಯೋಗಿಸಲ್ಪಟ್ಟಿರುತ್ತದೆ (6:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಾವು ಬಿಡುವಿನಿಂದ ವಿಹರಿಸುವದಕ್ಕಾಗಿ ಉಡುಪು ಧರಿಸಿಕೊಳ್ಳುತ್ತಿಲ್ಲ, ಆದರೆ ನಾವು "ಕ್ರಿಸ್ತನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟ"ವನ್ನು ಮಾಡುವದಕ್ಕೆ ಸಿದ್ಧಗೊಳ್ಳುತ್ತಿದ್ದೇವೆ (1 ತಿಮೊಥೆ 6:12).

**ವಚನ 13.** ಒಮ್ಮೆ ನಾವು ಎಚ್ಚರಗೊಂಡು ಉಡುಪುಗಳನ್ನು ಧರಿಸಿಕೊಂಡ ಮೇಲೆ, ಮುಂದೆ ನಾವೇನು ಮಾಡಬೇಕು? ನಾವು ನಮ್ಮ ಸೃಷ್ಟಿಕರ್ತ ಮತ್ತು ರಕ್ಷಕನಿಗೆ ಮಹಿಮೆಯುಂಟು ಮಾಡುವಂತಹ ಜೀವಿತಗಳನ್ನು ನಡಿಸುವವರಾಗಬೇಕು. **ಹಗಲು ಹೊತ್ತಿಗೆ ತಕ್ಕಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ.** "ಹಗಲು ಹೊತ್ತಿಗೆ ತಕ್ಕಹಾಗೆ" ಎಂಬುದು ನಾವು ನಮ್ಮ ಜೀವಿತಗಳನ್ನು ಮುಚ್ಚುಮರೆಯಿಲ್ಲದೆ, ಅವುಗಳನ್ನು ಪರೀಕ್ಷಿಸುವಂತೆ ಎಲ್ಲರಿಗೂ ಬಿಡುವದಕ್ಕೆ ನಾಚಿಕೆಪಟ್ಟುಕೊಳ್ಳದೆ ಜೀವಿಸುವವರಾಗಿರತಕ್ಕದ್ದು.

"ಮಾನಸ್ಥರಾಗಿ ನಡೆದುಕೊಳ್ಳುವ" ವಿಷಯದಲ್ಲಿ, ನಾವು ದೂರವಿರಬೇಕಾದ "ಕತ್ತಲೆಗೆ ಅನುಗುಣವಾದ ಕೃತ್ಯಗಳ" ಆರು ಉದಾಹರಣೆಗಳನ್ನು ಪೌಲನು ಕೊಡುತ್ತಾನೆ: **ದುಂದೌತಣ ಕುಡಿಕತನಗಳಲ್ಲಿಯಾಗಲಿ ಕಾಮ ವಿಲಾಸ ನಿರ್ಲಜ್ಜಾಕೃತ್ಯಗಳಲ್ಲಿಯಾಗಲಿ ಜಗಳ ಹೊಟ್ಟೇಕಿಚ್ಚುಗಳಲ್ಲಿಯಾಗಲಿ ಕಾಲಕಳೆಯದೆ.** ಇದು "ಕತ್ತಲೆಗೆ ಅನುಗುಣವಾದ ಕೃತ್ಯಗಳ" ಸಂಪೂರ್ಣವಾದ ಪಟ್ಟಿಯಾಗಿರುವದಿಲ್ಲ; ಇದೊಂದು ಪ್ರಾತಿನಿಧಿಕ ಪಟ್ಟಿಯಾಗಿದೆಯಷ್ಟೆ. ಅಂಥ ಪಟ್ಟಿಗಳಿಗೆ, ಪೌಲನು ಗಲಾತ್ಯ 5:19-21ರಲ್ಲಿ (KJV) ಸೇರಿಸಿದ ರೀತಿಯಲ್ಲಿಯೇ, ನಾವು "ಇಂಥವುಗಳೇ" ಎಂದು ಸೇರ್ಪಡೆಗೊಳಿಸಬಹುದು. ನಮ್ಮ ವಾಕ್ಯಭಾಗದಲ್ಲಿ ಆರು ಉದಾಹರಣೆಗಳು ಮೂರು ಗುಂಪುಗಳಲ್ಲಿ ಜೋಡಿಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ.

ಮೊದಲ ಜೋಡಿಯು "ದುಂದೌತಣ ಕುಡಿಕತನ." "ದುಂದೌತಣ" ಎಂಬುದು κῶμος

(*kōmos*) ಎಂಬ ಪದದಿಂದ ಬಂದದ್ದು, ಅದು 13ನೇ ವಚನದಲ್ಲಿ, "ಅತಿಯಾದ ಭೋಜನಕೂಟ . . . , ಅತಿಯಾದ ಕುಡಿತ, ಭಾರಿಮೋಜು" ಎಂಬುದನ್ನು ಸೂಚಿಸುತ್ತದೆ.[54] NIV ಯಲ್ಲಿ "ಸ್ವಚ್ಛಂದ ಕಾಮಕೇಳಿ" ಎಂದಿರುತ್ತದೆ. *Kōmos* ಎಂಬುದು "ಮನಷ್ಯನ ಸ್ವಾಭಿಮಾನವನ್ನು ತಗ್ಗಿಸುವಂಥ ಮತ್ತು ಇತತರಿಗೆ ಕಿರಿಕಿರಿಯನ್ನುಂಟು ಮಾಡುವಂತಹ ಭಾರಿಮೋಜಿನ ಕೂಟವನ್ನು ಬಣ್ಣಿಸುತ್ತದೆ."[55] ಇದು "ಕತ್ತಲೆಯಿಂದಾದ ಪರಿಣಾಮ ವಾಗಿತ್ತು,"[56] ಆದ್ದರಿಂದ ಅದು "ಕತ್ತಲೆಯ" (μέθη, *methē*, "ಅಮಲೇರುವಿಕೆ") ಪಾಪದೊಂದಿಗೆ ಸಂಬಂಧಗೊಳಿಸಲ್ಪಟ್ಟಿರುತ್ತದೆ.

ನಂತರದಲ್ಲಿ ಇರುವದು "ಕಾಮ ವಿಲಾಸ ನಿರ್ಲಜ್ಜಾಕೃತ್ಯಗಳಲ್ಲಿಯಾಗಲಿ." "ಕಾಮ ವಿಲಾಸ" ಎಂಬುದು ಲೈಂಗಿಕ ಪಾಪವನ್ನು (πορνεία, *porneia*) ಸೂಚಿಸುವದಕ್ಕೆ ಸಾಮಾನ್ಯವಾಗಿ ಉಪಯೋಗಿಸುವ ಪದದಿಂದ ಅನುವಾದಿಸಲ್ಪಟ್ಟಿರುವದಿಲ್ಲ, ಆದರೆ κοίτη (*koitē*) ಎಂಬುದರ ಬಹವಚನ ರೂಪದ ಪದದಿಂದ ಅನುವಾದಿಸಲ್ಪಟ್ಟಿದೆ, ಅದು "ಹಾಸಿಗೆ" ಎಂಬುದಕ್ಕಿರುವ ಪದವಾಗಿದೆ. *Koitē* ಎಂಬ ಪದವನ್ನು ಸೌಮೋಕ್ತಿಯಲ್ಲಿ "ಲೈಂಗಿಕ ಸಂಭೋಗ" ಎಂಬುದಕ್ಕೆ ಉಪಯೋಗಿಸಲಾಗಿದೆ.[57] ಇಂದು "ಹಾಸಿಗೆ" ಎಂಬುದು ಸಹ ಕೆಲವು ಸಾರಿ ಅದೇ ರೀತಿಯಲ್ಲಿ ಬಳಸಲ್ಪಡುತ್ತದೆ, "ಅವರು ಒಟ್ಟಿಗೆ ಹಾಸಿಗೆಯನ್ನು ಹಂಚಿಕೊಂಡರು" ಎಂದು ಹೇಳುವ ಪ್ರಕಾರವಾಗಿ. *Koitē* ಯ ಬಹುವಚನ ರೂಪವು ("ಹಾಸಿಗೆಗಳು") ಎಂಬುದು ಇಲ್ಲಿ ಅನ್ಯೆತಿಕ ಲೈಂಗಿಕ ಚಟುವಟಿಕೆಯನ್ನು ಸೂಚಿಸುತ್ತದೆ.

"ಕಾಮ ವಿಲಾಸ"ದ ಜೊತೆಗೆ "ನಿರ್ಲಜ್ಜಾಕೃತ್ಯಗಳು" ಎಂಬುದು ಜೊತೆಗೂಡಿಸಲ್ಪಟ್ಟಿದೆ, ಅದು ἀσέλγεια (*aselgeia*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ. ಈ ಗ್ರೀಕ್ ಪದವು ಸೂಚಿಸುವದೇನೆಂದರೆ "'ಅತಿಯಾದ, ಸ್ವಚ್ಛಂದತೆ, ತಡೆಯಿಲ್ಲದಿರುವಿಕೆ, ಅಸಭ್ಯತೆ, ಚಪಲತೆ'. . . ಇಲ್ಲಿ ಪ್ರಮುಖವಾಗಿ ಕಾಣುವ ವಿಚಾರವೆಂದರೆ ನಾಚಿಕೆಯಿಲ್ಲದ ನಡವಳಿಕೆಯೇ."[58] Barclay ಹೀಗೆ ಬರೆಯುತ್ತಾನೆ, "*Aselgeia* ಎಂಬುದು ಗ್ರೀಕ್ ಭಾಷೆಯಲ್ಲಿಯೇ ಅತ್ಯಂತ ಅಸಹ್ಯವಾದ ಪದಗಳಲ್ಲೊಂದಾಗಿದೆ. ಅದು ಅನೈತಿಕತೆಯನ್ನು ಬಣ್ಣಿಸುವದು ಮಾತ್ರವಲ್ಲ; ಅದು ಲಜ್ಜೆತನಕ್ಕೆ ಸೋತು ಹೋಗಿರುವಂಥ ಮನುಷ್ಯನನ್ನು ಬಣ್ಣಿಸುತ್ತದೆ"[59] John MacArthur ಹೀಗೆ ಹೇಳುತ್ತಾನೆ, "ಅದು ಬಹುಪಾಲು ಆಧುನಿಕ ಸಮಾಜದಲ್ಲಿ ಕಂಡುಬರುವಂತಹ ಮತ್ತು ಅನೇಕ ಸಾರಿ ಭಿನ್ನತೆಯ ಒಂದು ಲಾಂಛನವೆಂಬಂತೆ ಪ್ರದರ್ಶಿಸುವಂತಹ ಲೈಂಗಿಕ ಹಾದರ ಮತ್ತು ಸ್ವಚ್ಛಂದ ನಡವಳಿಕೆಯನ್ನು ಸೂಚಿಸುತ್ತದೆ."[60]

ಮೊದಲ ಎರಡು ಪಾಪದ ಜೋಡಿಗಳು ನಿಮಗೆ ಮನವರಿಕೆ ಮಾಡಲಿಲ್ಲವಾದಲ್ಲಿ, ಮೂರನೆಯದು ಮನವರಿಕೆಯನ್ನು ಮಾಡಬಹುದು: "ಜಗಳ ಹೊಟ್ಟೆಕಿಚ್ಚುಗಳಲ್ಲಿಯಾಗಲಿ." "ಜಗಳ" ಎಂಬುದು ἔρις (*eris*) ಎಂಬ ಪದದಿಂದ ಬಂದದ್ದು, ಅದು ಕಿತ್ತಾಟವನ್ನು ಸೂಚಿಸುತ್ತದೆ, ಅದು "ವೈರತ್ವ" ಎಂದಾಗಿರುತ್ತದೆ.[61] *Eris* "ತನಗಾಗಲಿ ಅಥವಾ ಬೇರೆಯವರಿಗಾಗಲಿ ಹಾನಿಯಾದರೂ ಚಿಂತೆಯಿಲ್ಲ, ನಾನಂದುಕೊಂಡದ್ದೇ ನಡೆಯಬೇಕೆಂದು ಹಗೆತನದೊಂದಿಗೆ ಪೈಪೋಟಿ ನಡಿಸುವ ಮನೋಭಾವವನ್ನು ಪ್ರತಿಬಿಂಬಿಸುತ್ತದೆ."[62] ಅದು "ಹೊಟ್ಟೇಕಿಚ್ಚು" (ζῆλος, *zēlos*[63]) ಯೊಂದಿಗೆ ಸಂಬಂಧಪಟ್ಟಿರುತ್ತದೆ, ಅದು "ತನ್ನಲ್ಲಿರುವದರಲ್ಲಿ ಸಂತೃಪ್ತನಾಗದೆ ತನಗೆ ಕೊಡಲ್ಪಡದೆ

ಬೇರೆಯವರಿಗೆ ಅನುಗ್ರಹಿಸಲ್ಪಟ್ಟಿರುವ ಪ್ರತಿಯೊಂದು ಆಶೀರ್ವಾದವನ್ನು ಅಸೂಯೆಯ ದೃಷ್ಟಿಯಿಂದ ನೋಡುವ ಮನೋಭಾವವನ್ನು" ಬಣ್ಣಿಸುತ್ತದೆ.[64]

ಕೆಲವರು ಮೊದಲ ನಾಲ್ಕು ಪಾಪಗಳನ್ನು—ದುಂದೌತಣ, ಕುಡಿಕತನ, ಕಾಮ ವಿಲಾಸ, ಮತ್ತು ನಿರ್ಲಜ್ಜಾಕೃತ್ಯಗಳು—"ಕೆಟ್ಟ ಪಾಪಗಳು" ಎಂದು ಪರಿಗಣಿಸುತ್ತಾರೆ, ಆದರೆ "ಜಗಳ, ಹೊಟ್ಟೇಕಿಚ್ಚು"ಗಳನ್ನು "ಅಷ್ಟೊಂದು ಕೆಟ್ಟದ್ದಲ್ಲ" ಎಂಬ ವರ್ಗಕ್ಕೆ ಸೇರಿಸುತ್ತಾರೆ. ಹೇಗೂ, ಪೌಲನು ಕಡೇ ಎರಡು ಸಂಗತಿಗಳನ್ನು ಇತರೆ ಪಾಪಗಳ ಪಟ್ಟಿಯೊಂದಿಗೆ ಸೇರಿಸಿದ್ದಾನೆಂಬ ವಾಸ್ತವಾಂಶವು ಅವುಗಳು ಸಹ ದೇವರಿಗೆ ಅಸಹ್ಯವಾದವುಗಳೆಂಬುದನ್ನು ಸೂಚಿಸುತ್ತದೆ. ಜಗಳ ಮತ್ತು ಹೊಟ್ಟೇಕಿಚ್ಚುಗಳು ಸಹ ಮೊದಲ ನಾಲ್ಕು ಪಾಪಗಳಲ್ಲಿರುವ "ಅದೇ ಪಾಪಭರಿತ [ಮತ್ತು ಸ್ವಾರ್ಥ] ಕೃತ್ಯವನ್ನು ಹೆಚ್ಚು ನಾಗರಿಕ ರೀತಿಯಲ್ಲಿ ವ್ಯಕ್ತಪಡಿಸುವದಷ್ಟೇ" ಆಗಿರುತ್ತದೆ.[65] ನಮ್ಮಲ್ಲಿ ಕೆಲವರು ಇತರ ಪಾಪಗಳನ್ನು ಬಿಟ್ಟು ಬಿಟ್ಟರೂ ಈ ಪಾಪಗಳನ್ನು ತೊಲಗಿಸಿಕೊಳ್ಳುವದಕ್ಕೆ ಕಠಿಣತೆಯನ್ನು ಅನುಭವಿಸುತ್ತೇವೆಂಬ ಕಾರಣಕ್ಕೆ ಪೌಲನು ಅವುಗಳನ್ನು ಪಟ್ಟಿಯಲ್ಲಿ ಕೊನೆಗೆ ಸೇರ್ಪಡೆಗೊಳಿಸಿರಬಹುದಾಗಿದೆ.

**ವಚನ 14.** ನಾವು "ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು" ಹೇಗೆ ಮಾಡದಂತೆ ಇರಬಲ್ಲೆವು? ಪೌಲನು ಎರಡು ಆಜ್ಞೆಗಳನ್ನ ಕೊಟ್ಟನು, ಒಂದು ಧನಾತ್ಮಕವಾದದ್ದು ಮತ್ತು ಇನ್ನೊಂದು ನಕಾರಾತ್ಮಕವಾದದ್ದು. ಮೊದಲನೆಯದಾಗಿ, ಧನಾತ್ಮಕವಾದದ್ದನ್ನು ನೋಡೋಣ: 12ನೇ ವಚನದಲ್ಲಿ, ಅಪೊಸ್ತಲನು ತನ್ನ ವಾಚಕರಿಗೆ "ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳಲು" ಹೇಳಿದ್ದನು; ಈಗ, 14ನೇ ವಚನದಲ್ಲಿ, ಆತನು ಅವರಿಗೆ **ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ** ಎಂದು ಹೇಳುತ್ತಾನೆ. NEB ಯು ಎರಡು ವಚನಗಳಲ್ಲಿನ ಸವಾಲಿನ ನಡುವಿನ ಸಂಬಂಧವನ್ನು ಸೂಚಿಸುತ್ತದೆ: "ನೀವು ಧರಿಸುವ ಆಯುಧವು ಸ್ವತಃ ಕ್ರಿಸ್ತ ಯೇಸುವೇ ಆಗಿರಲಿ."

ಕ್ರಿಸ್ತನನ್ನು "ಧರಿಸಿಕೊಳ್ಳಿರಿ" (ἐνδύω, *enduō* ಎಂಬದರಿಂದ ಬಂದದ್ದು) ಎಂಬುದರ ಅರ್ಥವೇನು? 6ನೇ ಅಧ್ಯಾಯದಲ್ಲಿ, ನಾವು "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ" ದೀಕ್ಷಾಸ್ನಾನ ಮಾಡಿಸಿಕೊಂಡೆವು, ಮತ್ತು "ಆತನಲ್ಲಿ ಐಕ್ಯವಾದೆವು" ಎಂಬದಾಗಿ ಹೇಳಲ್ಪಟ್ಟಿತು (6:3, 5). ಮುಂಚಿನ ಒಂದು ಪತ್ರಿಕೆಯಲ್ಲಿ, ಪೌಲನು ಬರೆದದ್ದೇನೆಂದರೆ, "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:27). ನಾವು ದೀಕ್ಷಾಸ್ನಾನ ಮಾಡಿಸಿಕೊಂಡು ಕ್ರೈಸ್ತರಾಗುವಾಗ ಕ್ರಿಸ್ತನನ್ನು "ಧರಿಸಿಕೊಳ್ಳುತ್ತೇವೆ"—ಆದರೆ ನಾವು "ಕ್ರಿಸ್ತನನ್ನು ಧರಿಸಿಕೊಂಡಿರುವ" ಜನರಾಗಿ *ಜೀವಿಸುವದಕ್ಕೆ* ಕಲಿತುಕೊಳ್ಳತಕ್ಕದ್ದು. ನಾವು ನಮ್ಮನ್ನು ದಯೆ, ಉಪಕಾರ, ಮತ್ತು ಕರ್ತನ ಬಲದಿಂದ ಧರಿಸಿಕೊಳ್ಳುವ ಅಗತ್ಯವಿರುತ್ತದೆ. ನಾವು ಹೀಗೆ ಮಾಡುವದಾದರೆ, 13ನೇ ವಚನದಲ್ಲಿ ಪಟ್ಟಿ ಮಾಡಲಾಗಿರುವಂತಹ ರೀತಿಯ ಪಾಪಗಳಿಂದ ದೂರವಿರುವೆವು.

ನಂತರ ಪೌಲನ ನಕಾರಾತ್ಮಕ ಆಜ್ಞೆಯು ಬರುತ್ತದೆ; ಅದು ಕಾರ್ಯರೂಪದ ಆಜ್ಞೆಯಾಗಿದೆ: **ದೇಹದ ಆಶೆಗಳನ್ನು ಪೂರೈಸುವದಕ್ಕೆ ಚಿಂತಿಸದೆ.** "ಚಿಂತಿಸದೆ" ಎಂಬುದು πρόνοια (*pronoia*) ಎಂಬದರಿಂದ ಬಂದದ್ದಾಗಿದೆ, ಅದು πρό (*pro*, "ಮುಂಚೆ") ಎಂಬ ಪದವನ್ನು νοέω (*noeō*, "ಯೋಚಿಸು") ಎಂಬದರೊಂದಿಗೆ ಜೋಡಿಸುವದಾಗಿದೆ. ಆ ಪದದ ಅರ್ಥವು "ಮುಂದಾಗಿ ಯೋಚಿಸಿದ್ದು" ಎಂದಾಗಿರುತ್ತದೆ. *Pronoia* ಯು "ποιέω [*poieō,*

'ಮಾಡಲು'] ಎಂಬದರೊಂದಿಗೆ ಬಳಸಲ್ಪಟ್ಟಾಗ ಅಲ್ಲಿ ಒಂದಕ್ಕಾಗಿ ದಾರಿಯನ್ನು ಮಾಡಿಕೊಡುವದು ಎಂಬ ವಿಚಾರವಿರುತ್ತದೆ."[66] Kenneth J. Foremanನು 14ನೇ ವಚನದ ಕಡೇ ಭಾಗವನ್ನು ಹೀಗೆ ಭಾವಾನುವಾದಗೊಳಿಸುತ್ತಾನೆ: "ಪಾಪ ಮಾಡುವದಕ್ಕೆ ಯೋಜನೆ ಮಾಡದಿರಿ; ಅದಕ್ಕೆ ಸ್ವಾಗತ ಕೊಡಬೇಡಿರಿ; ಅದಕ್ಕೆ ಯಾವದೇ ಅವಕಾಶವನ್ನು ಕೊಡದಿರಿ. ಪಾಪವನ್ನು ನಿಮ್ಮ ಹೊಸ್ತಿಲದಿಂದ ಒದ್ದು ಓಡಿಸಿರಿ ಮತ್ತು ಆಗ ಅದು ನಿಮ್ಮ ಮನೆಯೊಳಗೆ ಇರುವದಿಲ್ಲ."[67]

ರೋಮಾ 13:11-14ನ್ನು ನಿದ್ದೆಯ ಮಂಪರಿನಲ್ಲಿರುವ ಕ್ರೈಸ್ತರಿಗೆ "ದೇವರ ಒಂದು ಎಚ್ಚರಿಕೆಯ ಕರೆ" ಎಂದು ಕರೆಯಲ್ಪಟ್ಟಿದೆ. ಈ ವಾಕ್ಯಭಾಗವನ್ನು ಸಾರಾಂಶಗೊಳಿಸ ಬಹುದಾದ ಒಂದು ಸರಳವಾದ ವಿಧವೆಂದರೆ, ಕರ್ತನು ಬರುವ ತನಕ, ನಾವು ಆತನ ಸಾರೂಪ್ಯವುಳ್ಳವರಾಗುವದಕ್ಕೆ ಶ್ರಮಿಸಬೇಕು ಎಂದು ಹೇಳುವದೇ: ನಾವು ಪ್ರೀತಿಸುವ ಜನರಾಗಿರಬೇಕು (13:8-10), ಮತ್ತು ನಾವು ಭಕ್ತಿವಂತ ಜನರಾಗಿರಬೇಕು (13:11-14), ಕರ್ತನು ಯಾವ ಗಳಿಗೆಯಲ್ಲಾದರೂ ಬರಬಲ್ಲನಾದ್ದರಿಂದ, ನಮ್ಮಲ್ಲಿ ಒಬ್ಬೊಬ್ಬರು ಸಹ "ಆತನು ಬರುವದಕ್ಕಾಗಿ ನಾನು ಸಿದ್ಧನಾಗಿದ್ದೇನೋ?" ಎಂದು ನಮ್ಮನ್ನು ಕೇಳಿಕೊಳ್ಳತಕ್ಕದ್ದು.

# ಅನ್ವಯಿಸುವಿಕೆ

## ಹಗೆತನದಿಂದ ಕೂಡಿರುವ ಲೋಕದಲ್ಲಿ ಹೇಗೆ ಜೀವಿಸುವದು (13ನೇ ಅಧ್ಯಾಯ)

Coy Roperನು "ಒಂದು ಹಗೆತನದಿಂದ ತುಂಬಿರುವ ಲೋಕದಲ್ಲಿ ಹೇಗೆ ಜೀವಿಸುವದು" ಎಂಬ ಶಿರೋನಾಮೆಯುಳ್ಳ ಪ್ರಸಂಗದಲ್ಲಿ ರೋಮಾ 13ನೇ ಅಧ್ಯಾಯವನ್ನು ಪೂರ್ತಿಯಾಗಿ ಅಳವಡಿಸಿಕೊಂಡಿರುತ್ತಾನೆ. ಆತನು ಪ್ರಮುಖ ಅಂಶಗಳು ಯಾವವೆಂದರೆ (1) "ಸರ್ಕಾರದ ವಿಷಯದಲ್ಲಿ: ಗೌರವದಿಂದ" (13:1-7); (2) "ನಮ್ಮ ನೆರೆಯವರ ವಿಷಯದಲ್ಲಿ: ಪ್ರೀತಿಯಿಂದ" (13:8-10); (3) "ಲೋಕದ ವಿಷಯದಲ್ಲಿ: ನಿರ್ಮಲತ್ವದಿಂದ" (13:11-14).[68]

## ಸರ್ಕಾರಕ್ಕೆ ಅಧೀನರಾಗಿರುವದು (13:1-7)

ಮನುಷ್ಯ ಸರ್ಕಾರದ ವಿಷಯದಲ್ಲಿ, ಕೆಲವು ವಿಶೇಷ ಟಿಪ್ಪಣಿಗಳು ಇಲ್ಲಿ ಸೂಕ್ತವಾಗಿರುತ್ತವೆ. ಮೊದಲನೆಯದಾಗಿ, ಸೈತಾನನು ಅನೇಕ ಸಾರಿ ತನ್ನ ಸ್ವಂತ ಉದ್ದೇಶಗಳಿಗೋಸ್ಕರ ಸರ್ಕಾರಗಳನ್ನು ಉಪಯೋಗಿಸುತ್ತಾನೆಂಬುದು ನಮಗೆ ತಿಳಿದಿರುವ ಅಗತ್ಯವಿದೆ. ಆತನು ಉಪಯೋಗಿಸುತ್ತಿದ್ದರೂ, ದೇವರು ಆಗಲೂ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಟ್ಟುಕೊಂಡು ತನ್ನ ಉದ್ದೇಶಗಳನ್ನು ನೆರವೇರಿಸಬಲ್ಲನು. ಉದಾಹರಣೆಗೆ, ಸೈತಾನನು ಯೇಸುವನ್ನು ಮರಣಕ್ಕೆ ಒಳಪಡಿಸುವದಕ್ಕಾಗಿ ಯೆಹೂದಿ ಹಾಗೂ ರೋಮನ್ ಅಧಿಕಾರಿಗಳನ್ನು ಬಳಸಿಕೊಂಡನು. ಹೇಗಿದ್ದರೂ, ದೇವರು ನಿಯಂತ್ರಣವನ್ನು ಕಳೆದುಕೊಳ್ಳಲಿಲ್ಲ ಯಾಕೆಂದರೆ ಶಿಲುಬೆಯ ಮರಣವು ಆತನ ನಿತ್ಯ ಯೋಜನೆಯಲ್ಲಿನ ಒಂದು ಅತ್ಯಾವಶ್ಯಕವಾದ ಭಾಗವಾಗಿತ್ತು. ಅದೇ ರೀತಿಯಲ್ಲಿಯೇ, ಪೌಲ ಮತ್ತು ಸೀಲರನ್ನು ಹೊಡೆದು ಸೆರೆಮನೆಗೆ ಹಾಕುವಂತೆ ಸೈತಾನನು ರೋಮನ್ ಅಧಿಕಾರಿಗಳನ್ನು

ಉಪಯೋಗಿಸಿದನು, ಆದರೆ ದೇವರು ಆ ಸಂದರ್ಭವನ್ನು ಉಪಯೋಗಿಸಿ ಸೆರೆಮನೆ ಅಧಿಕಾರಿ ಹಾಗೂ ಆತನ ಕುಟುಂಬವು ಪರಿವರ್ತನೆಗೊಳ್ಳುವಂತೆ ಮಾಡಿದನು (ಅಪೊಸ್ತಲರ ಕೃತ್ಯಗಳು 16:16-34).

ಪೌಲನನ್ನು ಅನೇಕ ವರ್ಷಗಳ ಕಾಲ ಸೆರೆಮನೆಗೆ ಹಾಕಲ್ಪಡುವಂತೆ ರೋಮನ್ ಅಧಿಕಾರಿಗಳನ್ನು ಉಪಯೋಗಿಸುವ ಮೂಲಕ ತಾನು ಆತನನ್ನು ತಟಸ್ಥಗೊಳಿಸುತ್ತಿದ್ದೇನೆ ಎಂದು ಸೈತಾನನು ಭಾವಿಸಿಕೊಂಡನೆಂಬುದರಲ್ಲಿ ಸಂಶಯವಿಲ್ಲ. ಹೇಗೂ, ಪೌಲನು ಸೆರೆಮನೆಗೆ ಹಾಕಲ್ಪಟ್ಟಿದ್ದರಿಂದ ಅದು ಆತನಿಗೆ ಪ್ರಭುಗಳಿಗೂ ಅರಸನಿಗೂ ಸುವಾರ್ತೆಯನ್ನು ಸಾರುವ ಅವಕಾಶವನ್ನು ಒದಗಿಸಿತ್ತು (ಅಪೊಸ್ತಲರ ಕೃತ್ಯಗಳು 24:24, 25; 25:23; 26:1-29). ಬಳಿಕ ಪೌಲನನ್ನು ರೋಮಾಪುರಕ್ಕೆ ಕರದೊಯ್ಯಲಾಯಿತು, ಅಲ್ಲಿ ಆತನು ಕೈದಿಯಾಗಿದ್ದುಕೊಂಡು ಸುವಾರ್ತೆಯನ್ನು ಸಾರಿದನು—ಅದರ ಫಲಿತವಾಗಿ ಸುವಾರ್ತೆಯು ಕೈಸರನ ಕುಟುಂಬ ವರ್ಗದವರಿಗೆ ಸಹ ತಲುಪಿತ್ತು (ಫಿಲಿಪ್ಪಿ 4:22).

ರೋಮಾ 13:1-7ರಲ್ಲಿ, ದೇವರು ಹಿತವಾದದ್ದನ್ನು ಸಾಧಿಸುವದಕ್ಕೆ ಪೈಶಾಚಿಕ ಸರ್ಕಾರಗಳ ವಿಷಯದಲ್ಲಿ ಹೇಗೆ ಕ್ರಮ ಕೈಗೊಳ್ಳುತ್ತಾನೆ ಅಥವಾ ಅವುಗಳ ಹೊರತಾಗಿಯೂ ತನ್ನ ಯೋಜನೆಗಳನ್ನು ನೆರವೇರಿಸಿಕೊಳ್ಳಬಲ್ಲನು ಎಂಬ ಕ್ಲೇಷ್ಟಕರ ವಿಷಯದ ಬಗ್ಗೆ ವಿವರಿಸುವದು ಪೌಲನ ಉದ್ದೇಶವಾಗಿರಲಿಲ್ಲ. ಅಪೊಸ್ತಲನು ಕೇವಲ ನಾಗರಿಕ ಸರ್ಕಾರವನ್ನು ಸ್ಥಾಪಿಸಿದವನು ದೇವರೇ ಆಗಿದ್ದು ಆತನು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕೆ ಅದನ್ನು ಉಪಯೋಗಿಸುತ್ತಾನೆಂಬುದನ್ನು ಒತ್ತಿ ಹೇಳುವವನಾಗಿದ್ದನಷ್ಟೆ.

ತುಲನಾತ್ಮಕವಾಗಿ ನೋಡುವದಾದರೆ ನಾನು ಜೀವಿಸುವ ದೇಶದಲ್ಲಿ ಸರ್ಕಾರದ ಅಧಿಕಾರಿಗಳನ್ನು ಗೌರವಿಸುವದು ಮತ್ತು ಅಧೀನವಾಗುವದು ಸುಲಭವಾಗಿರುತ್ತದೆ, ಆದರೆ ಕೆಲವು ದೇಶಗಳಲ್ಲಿ ಪೌಲನ ಸಲಹಾಸೂಚನೆಗಳನ್ನು ಅನುಸರಿಸುವದು ಹೆಚ್ಚು ಕಠಿಣವಾಗಿರುತ್ತದೆಂಬುದು ನನಗೆ ಗೊತ್ತಿದೆ. ನೀವು ಕೇಳಬಹುದಾದ ಪ್ರತಿಯೊಂದು ಪ್ರಶ್ನೆಗೆ ಉತ್ತರಿಸಲು ನನಗೆ ಸಾಧ್ಯವಿಲ್ಲ. ಪೌಲನ ಉಪದೇಶವನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ತಿಳಿಯಪಡಿಸುವದಷ್ಟನ್ನೇ ನಾನು ಮಾಡಬಲ್ಲೆನು. ಅದಾದ ಮೇಲೆ ಆ ಉಪದೇಶವನ್ನು ನಿಮ್ಮ ಸ್ವಂತ ಪರಿಸ್ಥಿತಿಗೆ ಅನ್ವಯಿಸಿಕೊಳ್ಳುವದೋ ಬೇಡವೋ ಎಂಬುದು ನಿಮಗೆ ಬಿಟ್ಟ ವಿಚಾರ. ಆ ಕಾರ್ಯದಲ್ಲಿ ದೇವರು ನಿಮ್ಮೊಂದಿಗಿರಲಿ.

## ಅಧಿಕಾರಿಗೆ ಮರ್ಯಾದೆ ಸಲ್ಲಿಸಿರಿ (13:7)

ರೋಮಾ 13:7 ನಮಗೆ ಕಲಿಸುವದೇನೆಂದರೆ ನಾವು ಪ್ರತಿಯೊಬ್ಬರಿಗೂ ಸಲ್ಲತಕ್ಕ ಭಯವನ್ನು (ಗೌರವವನ್ನು) ಸಲ್ಲಿಸಬೇಕು ಎಂಬದೆ. ಸನ್ನಿವೇಶವು ಸರ್ಕಾರಿ ಅಧಿಕಾರಿಗಳ ವಿಷಯದಲ್ಲಿ ನಡೆದುಕೊಳ್ಳುವ ವಿಧದ ಕುರಿತಾಗಿರುತ್ತದಾದರೂ, ಇತರ ಅಧಿಕಾರದ ಸ್ಥಾನದಲ್ಲಿರುವವರ ವಿಷಯದಲ್ಲಿ ಸಹ ಅನ್ವಯಿಕೆಯನ್ನು ಮಾಡಿಕೊಳ್ಳಬಹುದಾಗಿದೆ. ಇವರಲ್ಲಿ ಸೇರ್ಪಡೆಗೊಂಡಿರುವವರೆಂದರೆ: ತಂದೆತಾಯಿಗಳು, ಶಾಲೆಯ ಅಧಿಕಾರಿಗಳು, ಉದ್ಯೋಗದಲ್ಲಿನ ಮಾಲೀಕರು, ಹಿರಿಯರು, ಮತ್ತು ಗಂಡರು. ಪ್ರತಿಯೊಂದು ಸಮಾಜದಲ್ಲಿ, ಅಧಿಕಾರದಲ್ಲಿರುವವರ ಬಗ್ಗೆ ಸ್ವಲ್ಪ ಅಥವಾ ಯಾವದೇ ಭಯವನ್ನು (ಗೌರವವನ್ನು) ಸಹ

ಸಲ್ಲಿಸದಂಥ ಜನರು ಇರುತ್ತಾರೆ. ಪೌಲನು ಹೀಗೆ ಹೇಳುವನು, "*ಅವರವರಿಗೆ* ಸಲ್ಲತಕ್ಕದ್ದನ್ನು ಸಲ್ಲಿಸಿರಿ; . . . ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ" (13:7; NIV; ಒತ್ತಿ ಹೇಳಿದ್ದು ನನ್ನದು).

## ಹಣಕಾಸಿನ ಕುರಿತು ಒಂದು ಎಚ್ಚರಿಕೆ (13:8)

"ಬೇರೆ ಯಾವ ಸಾಲವೂ ನಿಮಗೆ ಇರಬಾರದು" (13:8) ಎಂಬುದರ ಅರ್ಥವೇನೆಂದರೆ ಒಬ್ಬನು ತನಗಿರುವ ಸಾಲಗಳನ್ನು ತೀರಿಸಿಕೊಳ್ಳಬೇಕು ಎಂದಾಗಿರುತ್ತದೆ. NIVಯಲ್ಲಿ "ಯಾವ ಸಾಲವೂ ಬಾಕಿಯಾಗಿ ಉಳಿಯದಿರಲಿ" ಎಂದಿರುತ್ತದೆ. ಈ ವಚನದ ಬಗ್ಗೆ ಚರ್ಚಿಸುವಾಗ, ಕೆಲವು ಕ್ರೈಸ್ತರು ಕೇಳಿಕೊಳ್ಳುವದೆಲ್ಲಾ ಇಷ್ಟೇ: "ನೀವು ಹಿಂದಕ್ಕೆ ಕೊಡಬೇಕಾಗಿರುವದನ್ನು ತೀರಿಸುವದಾದರೆ ಸಾಲವನ್ನು ಮಾಡುವದರಲ್ಲಿ ಯಾವದೇ ತಪ್ಪಿಲ್ಲ." ಆದ್ದರಿಂದ ಅವರು ಒಂದಿಲ್ಲಾ ಒಂದು ವಿಧದಲ್ಲಿ ತೆಗೆದುಕೊಂಡ ಸಾಲವನ್ನು ಹಿಂದಕ್ಕೆ ಕೊಟ್ಟು ತೀರಿಸುವದಕ್ಕೆ ಶಕ್ತರಾಗುವ ತನಕವೂ ಆರ್ಥಿಕವಾಗಿ ಅತಿಯಾದ ಹೊರೆ ಮಾಡಿಕೊಳ್ಳುವದರಲ್ಲಿ ತಪ್ಪೇನೂ ಇಲ್ಲವೆಂದು ಯೋಚಿಸುತ್ತಾರೆ.[69] ತತ್ಫಲಿತವಾಗಿ, ಅವರ ಸಾಲವನ್ನು ತೀರಿಸುವದಕ್ಕೆ ತಮ್ಮೆಲ್ಲಾ ಸಮಯ ಮತ್ತು ಶಕ್ತಿಯನ್ನು ವ್ಯಯಿಸುತ್ತಾರೆ—ಅವರಿಗೆ ಕರ್ತನಿಗೋಸ್ಕರ, ತಮ್ಮ ಕುಟುಂಬಗಳಿಗೋಸ್ಕರ, ಮತ್ತು ಇತರರಿಗೋಸ್ಕರ ಕಳೆಯಲು ಸಮಯ ಹಾಗೂ ಶಕ್ತಿಯೇ ಉಳಿದಿರುವದಿಲ್ಲ. ಹಣಕಾಸಿನ ವಿಷಯದಲ್ಲಿ ನಡೆದುಕೊಳ್ಳುವ ವಿಧವು ಬೈಬಲಿನ ಅನೇಕ ಮೂಲತತ್ವಗಳನ್ನು ಉಲ್ಲಂಘಿಸುತ್ತದೆ, ಅದರಲ್ಲಿ 8ನೇ ವಚನದಲ್ಲಿರುವ ಭಾಗವೂ ಸೇರಿರುತ್ತದೆ: "ಒಬ್ಬರನ್ನೊಬ್ಬರು ಪ್ರೀತಿಸಿರಿ." MSGಯು ವಚನದ ಮೊದಲ ಭಾಗವನ್ನು ಹೀಗೆ ಭಾವಾನುವಾದಗೊಳಿಸುತ್ತದೆ: "ಸಾಲುಸಾಲಾಗಿ ಸಾಲಗಳನ್ನು ಮಾಡಿಕೊಳ್ಳಬೇಡಿರಿ."

## "ದೇಹದ ಆಶೆಗಳನ್ನು ಪೂರೈಸುವದಕ್ಕೆ ಚಿಂತಿಸದಿರಿ" (13:14)

"ದೇಹದ ಆಶೆಗಳನ್ನು ಪೂರೈಸುವದಕ್ಕೆ ಚಿಂತಿಸುವದು" ಎಂದರೇನು (13:14)? ಯಾವದಾದರೂ ಒಂದಕ್ಕಾಗಿ—ಏನಾದರೂ ಸರಿಯೇ—ಸಿದ್ಧತೆ ಮಾಡಿಕೊಳ್ಳುವ ಬಗ್ಗೆ ಯೋಚಿಸಿರಿ. ಬಹುಶಃ ಅದು ಮುಂಬರಲಿರುವ ಪ್ರವಾಸ ಆಗಿರಬಹುದು . . . ಅಥವಾ ಬರಲಿರುವ ಚಳಿಗಾಲ . . . ಅಥವಾ ಒಟ್ಟಾರೆಯಾಗಿ ಭವಿಷ್ಯದ ಕುರಿತು ಆಗಿರಬಹುದು. ಈ ಪ್ರತಿಯೊಂದು ಕಾರ್ಯಕ್ಕಾಗಿ ನೀವು ಹೇಗೆ ಚಿಂತಿಸುವಿರಿ? ನಾನು ನಿಮಗೆ ಒಂದು ಸರಳವಾದ ಉದಾಹರಣೆಯನ್ನು ಹಂಚಿಕೊಳ್ಳುತ್ತೇನೆ. ನೀವು ಕಾಡಿನಲ್ಲಿ ನಡೆದು ಸಾಗಿರುವಿರಿ ಮತ್ತು ಏಕಾಏಕಿ ಬೆಂಕಿಯನ್ನು ಹೊತ್ತಿಸಬೇಕೆಂದು ಯೋಚಿಸುವಿರಿ. ನೀವು ಅದಕ್ಕಾಗಿ ಹೇಗೆ "ದಾರಿ ಮಾಡುವಿರಿ [ಚೀಂತಿಸುವಿರಿ]"? ಮೊದಲನೆಯದಾಗಿ, ನೀವು ಕಟ್ಟಿಗೆಗಳನ್ನು ಮತ್ತು ಉರಿಯಬಲ್ಲ ಇತರೆ ಸಾಮಗ್ರಿಗಳನ್ನು ಶೇಖರಿಸಬೇಕಾಗುತ್ತದೆ, ಆದ್ದರಿಂದ ನೀವು ಅದನ್ನೆಲ್ಲಾ ಕೂಡಿಸಿಟ್ಟುಕೊಳ್ಳುವಿರಿ. ಬಳಿಕ, ಬೆಂಕಿಯನ್ನು ಹೊತ್ತಿಸುವದಕ್ಕೆ ನಿಮಗೆ ಏನಾದರೂ ಅಗತ್ಯವಿರುತ್ತದೆ; ಬಹುಶಃ ನಿಮ್ಮ ಜೇಬಿನಲ್ಲಿ ಬೆಂಕಿ ಪೊಟ್ಟಣವಿರಬಹುದು. ಕಟ್ಟಿಗೆ ಮತ್ತು ಒಂದು ಉರಿಯು ಲಭ್ಯವಾಗುವದರೊಂದಿಗೆ, ನೀವು ನಿಮಗೆ ಬೇಕಾದ ಬೆಂಕಿಗೆ "ದಾರಿಯನ್ನು ಮಾಡಿರುವಿರಿ"? ಹೇಗೂ, ನೀವು ಕಟ್ಟಿಗೆ ಹಾಗೂ

ಉರಿಯನ್ನು ಅಳಿಸಿ ಹಾಕಿಬಿಟ್ಟರೆ, ಬೆಂಕಿಯೇ ಇರುವದಕ್ಕೆ ಸಾಧ್ಯವಿಲ್ಲ. ತತ್ಪರಿಣಾಮವಾಗಿ, ಪೌಲನು, "ನಿಮ್ಮ ದೇಹದ ಅಭಿಲಾಷೆಗಳಿಗೆ ಬೆಂಕಿ ಹೊತ್ತಿಸುವದರಿಂದ ದೂರವಿರಿ, ನಿಮ್ಮ ಬೆಂಕಿ ಪೊಟ್ಟಣವನ್ನು ಬಿಸಾಡಿ ಬಿಟ್ಟು ಕಟ್ಟಿಗೆ ಸೇರಿಸುವದನ್ನು ನಿಲ್ಲಿಸಿರಿ" ಎಂದು ಹೇಳುತ್ತಾನೆ!

ಪರಿವರ್ತನೆ ಹೊಂದಿರುವ ಕುಡಿಕನು ತನ್ನ ಮನೆಯನ್ನು ಮದ್ಯವನ್ನಿಟ್ಟು ಕೊಳ್ಳುವದಾದಲ್ಲಿ ಮತ್ತು ತನ್ನ ಹಿಂದಿನ ಕುಡುಕ ಸಹಪಾಠಿಗಳೊಂದಿಗೆ ಸಹವಾಸವನ್ನು ಮುಂದುವರೆಸುವದಾದಲ್ಲಿ, ಆತನು ಅಮಲೇರುವದಕ್ಕೆ ದಾರಿಯನ್ನು ಮಾಡಿ ಕೊಡುತ್ತಿದ್ದಾನೆಂದಾಗುತ್ತದೆ. ನೀವು ಶನಿವಾರ ರಾತ್ರಿಯೆಲ್ಲಾ ಹೆಚ್ಚು ಹೊತ್ತು ಎಚ್ಚರವಾಗಿರುವದಾದರೆ, ಮರುದಿನ ನಡೆಯುವ ಆರಾಧನೆಗೆ ಹೋಗಬೇಕಲ್ಲಾ, ವಿಶ್ರಾಂತಿ ಪಡೆಯೋಣ ಎಂಬ ಆಲೋಚನೆಯನ್ನೇ ಮಾಡದಿದ್ದಲ್ಲಿ, ನೀವು ಸಭೆಗೆ ಗೈರಾಗುವದಕ್ಕೆ ದಾರಿಯನ್ನು ಮಾಡಿ ಕೊಡುವವರಾಗಿರುತ್ತೀರಿ.

ನಿಮ್ಮನ್ನು ಹೀಗೆ ಕೇಳಿಕೊಳ್ಳಿರಿ, "ನನಗಿರುವ ಆತ್ಮೀಕ ಬಲಹೀನತೆಗಳಾವವು?" (ನೀವು ಅವುಗಳನ್ನು ಅರಿತುಕೊಳ್ಳುವ ಅಗತ್ಯವಿರುತ್ತದೆ ಯಾಕೆಂದರೆ ಸೈತಾನನಿಗೆ ಅದೆಲ್ಲಾ ತಿಳಿದದೆ.) ಬಳಿಕ, ಹೀಗೆ ಕೇಳಿಕೊಳ್ಳಿರಿ, "ನನ್ನನ್ನು ಶೋಧನೆಗೆ ಒಳಪಡುವಂತೆ ಹೆಚ್ಚಾಗಿ ಪ್ರೋತ್ಸಾಹಗೊಳಿಸುವ ಜನರು, ಸ್ಥಳಗಳು, ಚಟುವಟಿಕೆಗಳು, ಮತ್ತು ಪರಿಸ್ಥಿತಿಗಳು ಯಾವವು?" ಒಮ್ಮೆ ನೀವು ಆ ಪ್ರಶ್ನೆಗೆ ಉತ್ತರ ನೀಡುವದಾದರೆ, ಅಂಥ ಜನರಿಂದ, ಸ್ಥಳಗಳಿಂದ, ಚಟುವಟಿಕೆಗಳಿಂದ, ಮತ್ತು ಪರಿಸ್ಥಿತಿಗಳಿಂದ ದೂರವಿರುವದಕ್ಕೆ ಸಕಲ ಪ್ರಯತ್ನವನ್ನೂ ಮಾಡಿರಿ. ಹಾಗಲ್ಲದೆ ಅದಕ್ಕೆ ವಿರುದ್ಧವಾದದ್ದನ್ನು ಮಾಡುವದಾದರೆ ಅದು "ದೇಹದ ಆಶೆಗಳನ್ನು ಪೂರೈಸುವದಕ್ಕಾಗಿ ಚಿಂತಿಸುವ" ರೀತಿಯಾಗಿರುತ್ತದೆ.

ಸಭಾಚರಿತ್ರೆಯಲ್ಲಿ ಬಹಳ-ಚೆನ್ನಾಗಿ ಪರಿಚಿತವಿರುವ ಹೆಸರು ಎಂದರೆ Augustine (ಅಗಸ್ಟೈನ್). *Confessions* ಎಂಬ ಪುಸ್ತಕದಲ್ಲಿ, ಆತನು ತಾನು ಪರಿವರ್ತನೆಗೊಂಡ ಕುರಿತಾಗಿ ಹೇಳುತ್ತಾನೆ. ಕ್ರಿ.ಶ. 386ರ ಬೇಸಿಗೆ ಕಾಲದಲ್ಲಿ, ಇಟಲಿಯ ಮಿಲಾನಿನಲ್ಲಿ ಒಬ್ಬ ಭಾಷಣ ಶಾಸ್ತ್ರದ ಗೌರವಾನ್ವಿತ ಪ್ರಾಧ್ಯಾಪಕನಾಗಿದ್ದ ಆತನು, ಆತನು ಹೆಚ್ಚುಕಡಿಮೆ ಕ್ರೈಸ್ತನಾಗುವಂತೆ ಮನವೋಲಿಸಲ್ಪಟ್ಟಿದ್ದನು. ಹೇಗೂ, ಆತನು ತನ್ನ ಹಳೇ ಪಾಪದ ಜೀವಿತದಿಂದ ಹೊರ ಬರುವದಕ್ಕೆ ಅಶಕ್ತನಾಗಿದ್ದನು. ಒಂದು ದಿನ ಆತನು ತನ್ನ ಮಿತ್ರನೊಬ್ಬನ ತೋಟದಲ್ಲಿದ್ದಾಗ ಆತನಿಗೆ ಆಟವಾಡುತ್ತಿದ್ದ ಒಂದು ಮಗುವು ಹೀಗೆ ಹೇಳುವದನ್ನು ಕೇಳಿಸಿಕೊಂಡನು, "ಅದನ್ನು ತೆಗೆದುಕೊಂಡು ಓದು, ಅದನ್ನು ತೆಗೆದುಕೊಂಡು ಓದು." ಹತ್ತಿರದಲ್ಲಿದ್ದ ಒಂದು ಆಸನದ ಮೇಲೆ ಪೌಲನು ಪತ್ರಿಕೆಗಳೊಂದರ ಪ್ರತಿ ಇತ್ತು. ಅಗಸ್ಟೈನ್ ಅದನ್ನು ಎತ್ತಿಕೊಂಡನು, ಮತ್ತು ಆತನು ನೋಡಿದ ಮೊದಲ ಪದಗಳು ಇವಾಗಿದ್ದವು: "ದುಂದೌತಣ ಕುಡಿಕತನಗಳಲ್ಲಿಯಾಗಲಿ ಕಾಮ ವಿಲಾಸ ನಿರ್ಲಜ್ಜಾಕೃತ್ಯಗಳಲ್ಲಿಯಾಗಲಿ ಜಗಳ ಹೊಟ್ಟೇಕಿಚ್ಚುಗಳಲ್ಲಿಯಾಗಲಿ ಕಾಲಕಳೆಯದೆ . . . ದೇಹದ ಆಶೆಗಳನ್ನು ಪೂರೈಸುವದಕ್ಕಾಗಿ ಚಿಂತಿಸದೆ ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ" (13:13, 14).[70] ಆತನು ಹೀಗೆ ಬರೆದನು, "ನನಗೆ ಇನ್ನು ಮುಂದೆ ಓದುವ ಬಯಕೆಯಿರಲಿಲ್ಲ ಮತ್ತು ಅದರ ಅಗತ್ಯವೂ ಇರಲಿಲ್ಲ. ಒಂದು ಕ್ಷಣದಲ್ಲಿಯೇ, ನಾನು ವಾಕ್ಯಸಾಲಿನ ಅಂತ್ಯಕ್ಕೆ ಬರುತ್ತಿದ್ದಂತೆ, ನನ್ನ ಹೃದಯದಲ್ಲಿ ದೃಢವಿಶ್ವಾಸದ ಬೆಳಕು ಪ್ರಕಾಶಿಸಿ ಸಂಶಯದ ಕತ್ತಲು ಓಡಿಸಲ್ಪಟ್ಟಿತೋ ಎಂಬಂತಾಗಿತ್ತು."[71]

ಪೌಲನು ಮಾತುಗಳು ಮಾರ್ಪಡುವಂತೆ ಅಗಸ್ಟೈನ್‌ಗೆ ಸಹಾಯ ಮಾಡಿದವು, ಮತ್ತು ಅವುಗಳು ನಿಮಗೆ ಸಹ ಬದಲಾಗುವಂತೆ ಸಹಾಯ ಮಾಡಬಲ್ಲವು. ಇಂದಿನಿಂದ ಕರ್ತನು ಬರುವ ತನಕವೂ, ನೀವು ಒಂದು ಭಕ್ತಿವಂತ ಜೀವನವನ್ನು ನಡಿಸುವದು ಪ್ರಾಮುಖ್ಯವಾಗಿರುತ್ತದೆ.

---

## ಅಡಿಟಿಪ್ಪಣಿಗಳು

[1]ಆ ಕಾಲದಲ್ಲಿ, ರೋಮನ್ ಸರ್ಕಾರವು ಯೆಹೂದ್ಯರು ಹಾಗೂ ಕ್ರೈಸ್ತರ ನಡುವೆ ಯಾವದೇ ವ್ಯತ್ಯಾಸವನ್ನು ಮಾಡುತ್ತಿರಲಿಲ್ಲ. ಅಪೊಸ್ತಲರ ಕೃತ್ಯಗಳು 18:2 ಮತ್ತು ಇತರ ಲೌಕಿಕ ದಾಖಲೆಗಳಲ್ಲಿ ಯೆಹೂದ್ಯರನ್ನು ಮಾತ್ರವೇ ಉಲ್ಲೇಖಿಸಲಾಗಿರುತ್ತದೆ, ಆದರೆ ಯೆಹೂದ್ಯರು ಮತ್ತು ಕ್ರೈಸ್ತರು ಇಬ್ಬರೂ ರೋಮಾಪುರದಿಂದ ಹೊರಕ್ಕೆ ಓಡಿಸಲ್ಪಟ್ಟಿರಬಹುದಾಗಿದೆ. ನೋಡಿರಿ James C. Walters, *Ethnic Issues in Paul's Letter to the Romans* (Valley Forge, Pa.: Trinity Press International, 1993), 56-59. [2]ಕೆಲವು ಬರಹಗಾರರು ವಾದಿದುವದೇನೆಂದರೆ ರೋಮಾ 13:1-7 ವಚನಗಳನ್ನು ಪೌಲನು ಬರೆದಿಲ್ಲ ಆದರೆ ಬೇರೆ ಯಾರೋ ಬರೆದು ಪತ್ರಿಕೆಯೊಳಗೆ ಸೇರ್ಪಡೆಗೊಳಿಸಿದ್ದಾರೆ ಎಂಬದೆ. ಹೇಗೂ, ಈ ವಿಚಾರಕ್ಕೆ ಬೆಂಬಲವಾಗಿ ಯಾವದೇ ಹಸ್ತಪ್ರತಿಯ ಪುರಾವೆಯೂ ಇರುವದಿಲ್ಲ. ಈ ವಿಭಾಗದಲ್ಲಿ ಪ್ರತಿಯೊಬ್ಬ ಕ್ರೈಸ್ತನಿಗೂ ಅಗತ್ಯವಾಗಿರುವಂತಹ ಕಾರ್ಯರೂಪದ ಬೋಧನೆಯು ಇರುತ್ತದೆ, ಮತ್ತು ಕೆಲವು ವಿಷಯಗಳು ಅಧಿಕಾರಕ್ಕೆ ಅಧೀನರಾಗಿರುವದಕ್ಕಿಂತಲೂ ಹೆಚ್ಚು ಕಾರ್ಯರೂಪದವುಗಳಾಗಿರುತ್ತವೆ. [3]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 45. [4]Ibid., 33-34. [5]ನಿರ್ದಿಷ್ಟವಾಗಿ ಆತನು ಯಾವಾಗ ಮತ್ತು ಹೇಗೆ ಇದನ್ನು ಮಾಡಿದನೆಂಬುದು ನಮಗೆ ತಿಳಿದು ಬಂದಿರುವದಿಲ್ಲ. ಆದಿಕಾಮಡ 9:1-7 ವಚನಗಳು ಮನುಷ್ಯ ಸರ್ಕಾರಕ್ಕೆ ಮೂಲಾಧಾರವನ್ನು ಒದಗಿಸುತ್ತದೆಂದು ಕೆಲವು ಬರಹಗಾರರು ನಂಬುತ್ತಾರೆ. [6]James Burton Coffman, *Commentary on Romans* (Austin, Tex.: Firm Foundation Publishing House, 1973), 446. [7]Jack P. Lewis, *Exegesis of Difficult Passages* (Searcy, Ark.: Resource Publications, 1988), 95. [8]ಮನುಷ್ಯ ಸರ್ಕಾರಗಳು (ದೇವರ ಸೇವಕರಾಗಿ) ತಾವು ಮಾಡಬೇಕಾದದ್ದನ್ನು ಮಾಡದಿದ್ದಾಗ್ಯೂ, ತಾವು ಏನು ಮಾಡತಕ್ಕದ್ದೋ ಅದನ್ನು ಮಾಡದಿರುವಂತೆ ಅದು ಕ್ರೈಸ್ತರಿಗೆ ಒಂದು ನೆಪ ಆಗಬಾರದು. [9]ರೋಮನ್ನರ ನ್ಯಾಯ ಒದಗಿಸುವ ಭಾವನೆಯು ಉತ್ತಮವಾದದ್ದಾಗಿತ್ತು, ಅದೇ ರೀತಿಯೇ ಸಾಮ್ರಾಜ್ಯದಲ್ಲಿ ಶಾಂತಿ ಕಾಪಾಡುವ ಪ್ರಯತ್ನವು ಸಹ ಉತ್ತಮವಾಗಿತ್ತು. ರೋಮನ್ ರಸ್ತೆಗಳಿಂದಾಗಿ ಸಾಮ್ರಾಜ್ಯದ ಎಲ್ಲಾ ದಿಕ್ಕುಗಳಿಗೂ ಪ್ರಯಾಣಿಸುವದಕ್ಕೆ ಸಾಧ್ಯವಾಗಿತ್ತು. ಪೌಲನು ಸುವಾರ್ತೆಯನ್ನು ಪ್ರಸರಿಸುವದಕ್ಕೆ ಈ ಸವಲತ್ತುಗಳ ಪ್ರಯೋಜನವನ್ನು ಪಡೆದುಕೊಂಡನು. [10]ರೋಮನ್ ಪ್ರಭುಗಳ ಕುರಿತ ಮಾಹಿತಯು ಇದರಲ್ಲಿ ಕೊಡಲ್ಪಟ್ಟಿದೆ: David L. Roper, *Revelation 1-11*, Truth for Today Commentary (Searcy, Ark.: Resource Publications, 2002), 42-51.

[11]R. C. Bell, *Studies in Romans* (Austin, Tex.: Firm Foundation Publishing House, 1957), 146. [12]ಪೌಲನು ಕೈಸರೈಯದಲ್ಲಿ ಎರಡು ವರ್ಷಗಳ ಕಳ ಸೆರೆಮನೆಯಲ್ಲಿದ್ದನು (ಅಪೊಸ್ತಲರ ಕೃತ್ಯಗಳು 24:27), ಜೊತೆಗೆ ರೋಮಾಪುರದಲ್ಲಿ ಕನಿಷ್ಠ ಎರಡು ವರ್ಷ (ಸೆರೆಮನೆಯಲ್ಲಿದ್ದನು (ಅಪೊಸ್ತಲರ ಕೃತ್ಯಗಳು 28:30). [13]Vine, 606. ಈ ಪದವು ಅನೇಕಸ ಸಾರಿ "ಒಪ್ಪಿಸಿಕೋ" ಎಂದು ಅನುವಾದಿಸಲ್ಪಟ್ಟಿರುತ್ತದೆ. [14]Bruce Barton, David Veerman, and Neil Wilson, *Romans*, Life Application Bible Commentary (Wheaton, Ill.: Tyndale House Publishers, 1992), 246. [15]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 1033. [16]Jimmy Allen, *Romans, The Clearest Gospel of All* (Searcy, Ark.: By the author, 2005), 266. [17]Coffman, 447-48. [18]ಗ್ರೀಕ್ ಪದವು ಇಲ್ಲಿ ಅಕ್ಷರಶಃ "ಉತ್ತಮ ಕೆಲಸ" ಎಂಬರ್ಥವನ್ನು ಕೊಡುತ್ತದೆ. [19]Eusebius

*Ecclesiastical History* 2.25. [20]Alva J. McClain; quoted in Jim Townsend, *Romans: Let Justice Roll Down* (Elgin, Ill.: David C. Cook Publishing Co., 1988), 90 ರಿಂದ ಆಯ್ದುಕೊಳ್ಳಲ್ಪಟ್ಟಿದ್ದು.

[21]James Denney, "St. Paul's Epistle to the Romans," in *The Expositor's Greek Testament*, vol. 2 (London: Hodder and Stoughton, 1901; reprint, Grand Rapids, Mich.: Wm. B. Eerdmans Publishing Co., 1979), 697. [22]Lewis, 96. [23]Bob E. Adams, "Responsible Living in Community Setting (Romans 12—16)," *Southwestern Journal of Theology* 19 (Fall 1976): 63. [24]Ibid. [25]ರಾಜಕೀಯ ಹುದ್ದೆಗಳಲ್ಲಿ ಕ್ರೈಸ್ತರ ಅಗತ್ಯವಿದೆಯೆಂದು ನಾನು ನಂಬುತ್ತೇನೆ, ಆದರೆ ಅದೊಂದು ಅಭಿಪ್ರಾಯವಷ್ಟೆ. ರಾಜಕೀಯ ಅಧಿಕಾರಿಗಳು ಕ್ರೈಸ್ತ ಮೂಲತತ್ವಗಳ ವಿಷಯದಲ್ಲಿ ರಾಜಿ ಮಾಡಿಕೊಳ್ಳುವಂತೆ ಪ್ರಬಲವಾಗಿ ಶೋಧನೆಗೊಳಗಾಗಬಹುದಾಗಿದೆ. [26]D. Stuart Briscoe, *Romans*, The Communicator's Commentary (Waco, Tex.: Word Books, 1982), 232. A word related to *leitourgos* appears in the phrase "service of worship" in Romans 12:1. [27]Vine, 410. [28]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 346. [29]Vine, 643. [30]Ibid., 142.

[31]William Barclay gave a list of taxes that had to be paid in New Testament times. (William Barclay, *The Letter to the Romans*, rev. ed., The Daily Study Bible [Philadelphia: Westminster Press, 1975], 175.) [32]Vine, 310. [33]Barclay, 174. [34]ವಿಗ್ರಹಾರಾಧಕ ಹಿನ್ನಲೆಯ ಸರ್ಕಾರಕ್ಕಾಗಿ ಪ್ರಾರ್ಥಿಸಬೇಕೆಂದು ಆಜ್ಞಾಪಿಸಿರುವ ಇನ್ನೊಂದು ಉದಾಹರಣೆಗಾಗಿ, ನೋಡಿರಿ ಯೆರೆ 29:7. [35]ಗತಕಾಲದಲ್ಲಿ, ಕ್ರೈಸ್ತರು ಮತವನ್ನು ಸಹ ಚಲಾವಣೆ ಮಾಡಬಾರದೆಂದು ಕೆಲವರು ಭಾವಿಸಿಕೊಂಡಿದ್ದರು. ಒಂದು ಕ್ರೈಸ್ತ ಪಂಗಡದವರು ಬಾವುಟಕ್ಕೆ ಅಭಿವಂದನೆ ಸಲ್ಲಿಸುವದಕ್ಕೂ ನಿರಾಕರಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ, ಎಲ್ಲಿಯ ವರೆಗೆ ನಾಗರಿಕ ವಿಷಯಗಳು ದೇವರ ಚಿತ್ತವನ್ನು ಉಲ್ಲಂಘಿಸುವದಿಲ್ಲವೋ ಅಥವಾ ಕರ್ತನು ಹಾಗೂ ಆತನ ಸಭೆಗೆ ಇರುವ ಅವರ ಸಮರ್ಪಣೆಯನ್ನು ಕುಂಠಿತಗೊಳಿಸುವದಿಲ್ಲವೋ ಅಲ್ಲಿಯ ತನಕ ಕ್ರೈಸ್ತರು ನಾಗರಿಕ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳತಕ್ಕದ್ದು. [36]ಬೈಬಲ್ ಸಾಲ ಕೊಡುವದು ಮತ್ತು ತೆಗೆದುಕೊಳ್ಳುವ ಬಗ್ಗೆ ಮಾತಾಡುತ್ತದೆ. ಉದಾಹರಣೆಗೆ, ವಿಮೋ 22:25; ಕೀರ್ತನೆ 37:26; ಮತ್ತಾಯ 5:42; ಲೂಕ 6:35; ಫಿಲಮೋನ 17, 18. [37]7 ಮತ್ತು 8 ವಚನಗಳ ನಡುವಿನ ಸಂಬಂಧವು ಆಂಗ್ಲಕ್ಕಿಂತಲೂ ಗ್ರೀಕ್ ವಾಕ್ಯದಲ್ಲಿ ಹೆಚ್ಚು ಸ್ಪಷ್ಟವಾಗಿರುತ್ತದೆ. 7ನೇ ವಚನದಲ್ಲಿ "ಅವರವರಿಗೆ ಸಲ್ಲಿಸತಕ್ಕದ್ದನ್ನು" (ὀφειλή, *opheilē*) ಮತ್ತು 8ನೇ ವಚನದಲ್ಲಿನ "ಸಾಲವೂ" (ὀφείλω, *opheilō*) ಎಂಬ ಪದಗಳು ಒಂದಕ್ಕೊಂದು ಸಂಬಂಧ ಹೊಂದಿವೆ. [38]"ಬೇರೆ ಯಾವ ಸಾಲವೂ ನಿಮಗೆ ಇರಬಾರದು" ಎಂಬುದು ವರ್ತಮಾನಕಾಲ ರೂಪದಲ್ಲಿರುತ್ತದೆ, ಅದು ನಿರಂತರವಾದ ಕ್ರಿಯೆ ಎಂಬುದನ್ನು ಸೂಚಿಸುತ್ತದೆ. ಈ ಪದಗುಚ್ಛವನ್ನು "ಸಾಲದಲ್ಲಿಯೇ *ಮುಂದುವರೆಯುತ್ತಲಿ*ರಬೇಡಿರಿ" ಎಂದು ಅನುವಾದಿಸಬಹುದು. [39]ಕೆಲವು ಸಾರಿ ಇದು ಅವರ ನಿಯಂತ್ರಣವನ್ನು ಮೀರಿದ ಪರಿಸ್ಥಿತಿಗಳ ಕಾರಣದಿಂದಾಗಿರುತ್ತದೆ; ಹಾಗೆಯೇ ಇರುವದು ನಿಜವಾಗಿದ್ದರೂ, ಮನಸ್ಸಾಕ್ಷಿಯುಳ್ಳ ಕ್ರೈಸ್ತರು ತಮಗೆ ಸಾಲ ಕೊಟ್ಟವರ ಬಳಿಗೆ ಹೋಗಿ ತಾವು ಕ್ರಮೇಣದಲ್ಲಿ ಸಾಲಗಳನ್ನು ಕಟ್ಟಿ ತೀರಿಸುವಂತಾಗಲು ಚರ್ಚಿಸಿ ಏನಾದರೂ ವ್ಯವಸ್ಥೆಗಳನ್ನು ರೂಪಿಸಿಕೊಳ್ಳುವರು. [40]Briscoe, 238.

[41]Origenನು (c. ಕ್ರಿ.ಶಕ. 185-254) "ಸಭಾ ಪಿತೃಗಳು" ಎಂದು ಕರೆಯಲ್ಪಡುವವರಲ್ಲಿ ಒಬ್ಬನಾಗಿದ್ದನು. [42]W. Sanday and A. C. Headlam, *The Epistle to the Romans*, The International Critical Commentary (New York: Charles Scribner's Sons, 1906), 373 ರಲ್ಲಿ ಉಲ್ಲೇಖಿಸಲ್ಪಟ್ಟಿದ್ದು. [43]Barton, Veerman, and Wilson, 253. [44]ಕೆಲವು ಪ್ರಾಚೀನ ಗ್ರೀಕ್ ಹಸ್ತ ಪ್ರತಿಗಳು ಇದನ್ನು ಸೇರ್ಪಡೆಗೊಳಿಸಿರುತ್ತವೆ, "ನೀವು ಸುಳ್ಳು ಸಾಕ್ಷಿಯನ್ನು ನುಡಿಯಬಾರದು" (ನೋಡಿರಿ KJV), ಆದರೆ ಬಹುಪಾಲು ಪ್ರಾಚೀನ ಹಸ್ತ ಪ್ರತಿಗಳು NASBಯಲ್ಲಿ ಪಟ್ಟಿ ಮಾಡಲ್ಪಟ್ಟಿರುವ ನಾಲ್ಕು ಆಜ್ಞೆಗಳನ್ನಷ್ಟೆ ಹೊಂದಿರುತ್ತವೆ. [45]ದಶಾಜ್ಞೆಗಳೂ ಸೇರಿದಂತೆ, ಮೋಶೆಯ ಧರ್ಮಶಾಸ್ತ್ರದೊಂದಿಗೆ ಯೇಸುವಿನ ಸಂಬಂಧದ ಕುರಿತಾಗಿ, 7:1-4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.[46]Vine, 429. [47]See Bauer, 830. [48]ಗ್ರೀಕ್ ವಾಕ್ಯದ ಅಕ್ಷರಶಃ ಅರ್ಥವು "ಕೆಟ್ಟದ್ದನ್ನು ಮಾಡುವದಿಲ್ಲ" ಎಂದಾಗಿರುತ್ತದೆ. [49]Stott, 349-50. [50]Bell, 154.

[51]ಹೊಸ ಒಡಂಬಡಿಕೆಯ ಪ್ರೇರಿತ ಬೋಧಕರು ಹಾಗೂ ಬರಹಗಾರರು ಎರಡನೆಯ ಬರೋಣವು *ತಕ್ಷಣದಲ್ಲೇ* ಎಂದಲ್ಲ, ಆದರೆ *ಸನ್ನಿಹಿತ* ಆಗಿರುತ್ತದೆ ಎಂದು ಕಲಿಸಿದರು. ಅಂದರೆ, ಕ್ರಿಸ್ತನು ತಮ್ಮ ಕಾಲದಲ್ಲಿ ಬರಲಿದ್ದಾನೆಂದು ಕಲಿಸಲಿಲ್ಲ, ಆದರೆ ಆತನು ಯಾವ ಗಳಿಗೆಯಲ್ಲಾದರೂ ಬರಬಲ್ಲನು ಎಂದು ಕಲಿಸಿದರು. [52]ಇರುಳು/ಹಗಲಿನ ವಿರುದ್ಧ ಹೋಲಿಕೆಯು ಬೈಬಲಿನಲ್ಲಿ ಹಲವಾರು ಸಾರಿ ಕಂಡು ಬರುತ್ತದೆ. ಉದಾಹರಣೆಗೆ, ನೋಡಿರಿ, ಯೋಹಾನ

9:4; 1 ಥೆಸಲೋನಿಕ 5:5. [53]Vine, 37. McCord ತರ್ಜುಮೆಯು "ಆಯುಧಗಳು" ಎಂಬುದರ ಬದಲಾಗಿ "ಯುದ್ಧಾಯುಧಗಳು" ಎಂದು ಹೊಂದಿರುತ್ತದೆ. [54]Bauer, 580. [55]Barclay, 178. [56]Vine, 532. [57]Bauer, 554. ಇಬ್ರಿಯ 13:4ರಲ್ಲಿ, *koitē* ಎಂಬುದು ದೇವರಿಂದ ಅನುಮೋದಿಸಲ್ಪಟ್ಟಿರುವ ವಿವಾಹದೊಳಗಿನ ಸಂಭೋಗವನ್ನು ಸೂಚಿಸುತ್ತದೆ. [58]Vine, 353. [59]Barclay, 179. [60]John MacArthur, *Romans 9—16*, The MacArthur New Testament Commentary (Chicago: Moody Press, 1994), 267.

[61]Vine, 604. [62]MacArthur, 267. [63]*Zēlos* ಎಂಬ ಪದವನ್ನು "ಆಸಕ್ತಿ" ಸೂಚಿಸುವ ಒಳ್ಳೇ ಅರ್ಥದಲ್ಲಿ ಸಹ ಉಪಯೋಗಿಸಬಹುದಾಗಿದೆ (ನೋಡಿರಿ 10:2), ಆದರೆ ರೋಮಾ 13:13ರಲ್ಲಿ ಅದು ಕೆಟ್ಟ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವದು ತೋರಿ ಬರುತ್ತದೆ. [64]Barclay, 179. [65]Briscoe, 241. [66]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 473, n. 87. [67]Kenneth J. Foreman, *The Letter of Paul to the Romans*, The Layman's Bible Commentary (Richmond, Va.: John Knox Press, 1961), 57. [68]Coy Roper, sermon preached at Walnut Grove church of Christ, Savannah, Tennessee, 12 November 2000. [69]ಅಮೆರಿಕದಲ್ಲಿ, ಇದು ಕ್ರೆಡಿಟ್ ಕಾರ್ಡುಗಳಿಂದ ಮಾಡುವದಕ್ಕೆ ಸುಲಭವಾಗಿರುತ್ತದೆ. ಕೆಲವು ಬರಹಗಾರರು ಅಗತ್ಯಗಳಿಂದಾಗಿ ಸಾಲ ಮಾಡುವಿಕೆ ಹಾಗೂ ದುರಾಶೆಯನ್ನು ತೃಪ್ತಿ ಪಡಿಸಿಕೊಳ್ಳುವದಕ್ಕೆ ಸಾಲ ಮಾಡುವಿಕೆ ನಡುವೆ ವ್ಯತ್ಯಾಸವನ್ನು ಮಾಡುತ್ತಾರೆ. [70]ಖಂಡಿತವಾಗಿಯೂ, ಅಗಸ್ಟೈನ್‌ನು ಆ ಮಾತುಗಳನ್ನು ಆಂಗ್ಲದಲ್ಲಿ ಅಲ್ಲ, ಲ್ಯಾಟಿನ್ ಭಾಷೆಯಲ್ಲಿ ಓದಿದ್ದನು.

[71]Augustine *Confessions* 8.12.